SAPTHAGIRI (KANNADA)
ILLUSTRATED MONTHLY
Volume: 01, Issue: 01
August - 2021, Price Rs.5/-

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಆಗಸ್ಟ್ - 2021 ಬೆಲೆ ರೂ. 5/-





ನಮಸ್ತೆ! ಸರ್ವಭೂತಾನಾಂ
ಜನನಿ ಮಬ್ಜ ಸಂಭವಾಮ್ ।
ಶ್ರಿಯ ಮುನ್ನಿದ್ರ ಪದ್ಮಾ ಕ್ಷೀಂ
ವಿಷ್ಣು ವಕ್ಷಃಸ್ಥಳ ಸ್ಥಿತಾಮ್॥

# ಭಗವದ್ಗೀತೆ

ದೃಷ್ಟ್ವೇಮಂ ಸ್ವಜನಂ ಕೃಷ್ಣ ಯುಯುತ್ಸುಂ ಸಮುಪಸ್ಥಿತಮ್
ಸೀದಂತಿ ಮಮ ಗಾತ್ರಾಣಿ ಮುಖಂ ಚ ಪರಿಶುಷ್ಯತಿ
ವೇಪಥುಶ್ಚ ಶರೀರೇ ಮೇ ರೋಮಹರ್ಷಶ್ಚ ಜಾಯತೇ

(ಶ್ರೀ ಮದ್ಭಗವದ್ಗೀತೆ ಅಧ್ಯಾಯ - 1, ಶ್ಲೋಕ - 28)

**ಅರ್ಜುನ ಉವಾಚ :**

ಅರ್ಜುನ , ಕೃಷ್ಣ
ಕಾದುವುದಕ್ಕೆಂದು
ನೆರೆದಿರುವ ಈ ನನ್ನವರನ್ನು
ನೋಡಿ ನನ್ನ ಅವಯವಗಳು
ಸೊರಗುತ್ತಿವೆ. ಬಾಯಿ
ಒಣಗುತ್ತಿದೆ. ನನ್ನ ಮೈಯಲ್ಲಿ
ನಡುಕ ಮೂಡಿ
ರೋಮನಿಗುರಿ ನಿಂತಿದೆ.



ಏನು ಧನ್ಯಳೋ ಲಕುಮೀ ಎಂಥಾ ಮಾನ್ಯಳೋ
ಸಾನುರಾಗದಿಂದ ಹರಿಯ ತಾನೆ ಸೇವೆ ಮಾಡುತಿಹಳು
ಕೋಟಿ ಕೋಟಿ ಭೃತ್ಯರಿರಲು ಹಾಟಕಾಂಬರನ ಸೇವೆ
ಸಾಟಿಯಿಲ್ಲದೆ ಪೂರ್ಣ ನೋಟದಿಂದ ಸುಖಿಸುತಿಹಳು
ಛತ್ರ ಚಾಮರ ವ್ಯಜನ ಪರ್ಯಂಕ ಪಾತ್ರರೂಪದಲ್ಲಿ ನಿಂತು
ಚಿತ್ರ ಚರಿತನಾದ ಹರಿಯ ನಿತ್ಯ ಸೇವೆ ಮಾಡುತಿಹಳೂ

ಸರ್ವಸ್ಥಳದಿ ವ್ಯಾಪ್ತನಾದ ಸರ್ವದೋಷ ರತನಾದ
ಸರ್ವಾದಿವಂದ್ಯ ಪುರಂದರವಿಠಲನ್ನ ಸರ್ವಕಾಲದಿ ಸೇವಿಸುವಳು
ಲಕ್ಷ್ಮೀ ಮಾಂ ಪಾಹಿ! ಭಾಗ್ಯಲಕ್ಷ್ಮಿ ಮಾಂ ಪಾಹಿ।
ಲಕ್ಷ್ಮೀ ಮಾಂ ಪಾಹಿ ಸೌಭಾಗ್ಯಲಕ್ಷ್ಮೀ ಮಾಂ ಪಾಹಿ ।

- ಶ್ರೀಪುರಂದರದಾಸರು



(ಆರನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ತ್ವದುದಯತೂಲಿಕಾಭಿ ರಮುನಾ ಪೃಷಶೈಲಜುಷಾ ಸ್ಥಿರಚರಶಿಲ್ಪಿನೈವ ಪರಿಕಲ್ಪಿತ ಚಿತ್ರಧಿಯಃ**
**ಯತಿಪತಿಯಾಮುನಪ್ರಭೃತಯಃ ಪ್ರಥಯಂತಿ ದಯೇ ಜಗತಿ ಹಿತಂ ನ ನಸ್ತ್ವಯಿ ಭರಸ್ಯಸನಾದಧಿಕಮ್ ॥೫೯॥**

ಹಿಂದಿನ ಪದ್ಯದವರೆಗೆ ಭಗವಂತನ ದಯೆಯಲ್ಲಿ ಪ್ರಪತ್ತಿಯನ್ನು ಮಾಡುವವನು ಅಗತ್ಯವಾಗಿ ತಿಳಿಯಬೇಕಾದ ಅಂಗಗಳು ನಿರೂಪಿಸಲ್ಪಟ್ಟವು. ಮುಂದಿನ ಪದ್ಯದಲ್ಲಿ ಪ್ರಪತ್ತಿಯನ್ನು ತಮ್ಮ ಅನುಷ್ಠಾನದಿಂದಲೇ ನಿರೂಪಿಸುವರು. ಈ ಪದ್ಯದಲ್ಲಿ ಭಗವಂತನಲ್ಲಿ ಅತಿಶಯವಾದ ಭಕ್ತಿಯನ್ನಿಟ್ಟು, ತನ್ಮೂಲಕ ಉಪನಿಷತ್ತುಗಳಿಂದ ಪ್ರತಿ ಪಾದ್ಯನಾದ ಆ ಪರಮ ಪುರುಷನ ವಿಶೇಷಾನುಗ್ರಹವುಂಟಾಗಿ, ಅದರಿಂದ ಉತ್ತಮವಾದ ಜ್ಞಾನವನ್ನು ಹೊಂದಿದ ಭಾಷ್ಯಕಾರರು (ರಾಮಾನುಜರು), ಆಳವಂದಾರ್ ನಾಥ ಮುನಿಗಳು, ನಮ್ಮಾಳ್ವಾರ್‌ರವಂತಹ ಶ್ರೇಷ್ಠರಾದ ಜ್ಞಾನಿಗಳು ಇದೇ (ಪ್ರಪತ್ತಿಯೇ) ಅತ್ಯುತ್ತಮವಾದುದೆಂದೂ, ಇದಕ್ಕಿಂತಲೂ ಉತ್ತಮವಾದ ಕ್ಷೇಮವನ್ನುಂಟು ಮಾಡುವ ಮತ್ತೊಂದು ಮಾರ್ಗವು ನಮ್ಮಂತಹ ಅಶಕ್ತರಿಗೆ ಯಾವುದೂ ಇಲ್ಲವೆಂದೂ ಪ್ರಶಂಸಿಸಿ ತಮ್ಮ ಹಲವಾರು ಉಪದೇಶಗಳಿಂದಲೂ,ಗ್ರಂಥಗಳಿಂದಲೂ ಪ್ರಕಾಶಪಡಿಸಿರುವರೆಂದು ತಿಳಿಸಿ,ಈ ಪ್ರಪತ್ತಿ ಮಾರ್ಗಕ್ಕೆ ಭಗವತ್ಸಂಮತಿಯೂ ಭಾಗವತಪರಿಗ್ರಹವೂ ಉಂಟಾಗಿರುವುದರಿಂದ ಇದು ಪರಮವೈದಿಕವಾದ ಸಂಪ್ರದಾಯವೆಂಬುದನ್ನು ತೋರಿಸಿ, ನಮ್ಮಂತಹ ಜ್ಞಾನಶಕ್ತಿಗಳಿಲ್ಲದಿರುವವರಿಗೆ ಇದೇ ಅತ್ಯುತ್ತಮವಾದ ಮಾರ್ಗವೆಂಬುದನ್ನು ನಿರೂಪಿಸುವರು. ಹಿಂದಿನ ಪದ್ಯದಲ್ಲಿ ಪ್ರಪತ್ತಿ ಮಾರ್ಗವನ್ನು ವಿಶೇಷವಾಗಿ ಆದರಿಸುವ ಆಳ್ವಾರುಗಳು ಸ್ಮರಿಸಲ್ಪಟ್ಟರು. ಈ ಪದ್ಯದಲ್ಲಿ ಅಂತಹ ಆಚಾರ್ಯರು ಸ್ಮರಿಸಲ್ಪಡುವರು.

ಕವಿಯು ಇಲ್ಲಿ ಭಾಷ್ಯಕಾರರು ಆಳವಂದಾರ್ ಮೊದಲಾದ ಪರಮಾಚಾರ್ಯರ ಜ್ಞಾನವನ್ನು ಚಿತ್ರವನ್ನಾಗಿ ಚಿತ್ರಿಸಿರುತ್ತಾರೆ. ಚರಾಚರ ರೂಪವಾದ ಸಮಸ್ತ ಪ್ರಪಂಚ ನಿರ್ಮಾತೃವಾದ ಉತ್ತಮ ಶಿಲ್ಪಿಯಾದ ಶ್ರೀನಿವಾಸನೇ ಈ ಜ್ಞಾನರೂಪವಾದ ಚಿತ್ರವನ್ನು ಚಿತ್ರಿಸಿದವನು. ಅವನಿಗೆ ಸಾಧನವಾದ ಕುಂಚಿಗಳೆಂದರೆ ಅವನ ಸಂಕಲ್ಪಗಳೇ ದಯೆಯೇ ಬಣ್ಣವು. ದಯೆಯೆಂಬ ಬಣ್ಣದಿಂದ ಲಿಪ್ತವಾದ ಸಂಕಲ್ಪಗಳೆಂಬ ಕುಂಚಿಗಳಿಂದ ಬರೆಯಲ್ಪಟ್ಟ ಚಿತ್ರಗಳೇ ಪೂರ್ವಾಚಾರ್ಯರುಗಳ ವಿಜ್ಞಾನ ಕುಂಚಿಯು ಕಾಣದಿದ್ದರೂ ಬಣ್ಣವು ಹೇಗೆ ಚಿತ್ರದಲ್ಲಿ ಕಂಡು ಬರುವುದೋ ಹಾಗೆಯೇ ಭಗವತ್ಸಂಕಲ್ಪಗಳು ಕಾಣದಿದ್ದರೂ ಭಗವದ್ದಯೆಯು ಪೂರ್ವಾಚಾರ್ಯರ ಜ್ಞಾನದಲ್ಲಿ ಸ್ಫುಟವಾಗಿ ಕಂಡು ಬರುವುದು ಆಚಾರ್ಯರ ಜ್ಞಾನದಲ್ಲಿ ಭಗವದ್ದಯೆಯು ಪ್ರವಹಿಸುವುದು ಹೇಗೆಂದರೆ. ಆ ದಯೆಯ ಪರಿಪೂರ್ಣವಾದ ಪ್ರಭಾವವು ಅವರ ಉಪದೇಶಗಳಲ್ಲಿ ಪ್ರಕಾಶಗೊಂಡಿರುವುದೇ ಆಗಿರುತ್ತದೆ. ಅನಾದಿಕಾಲದಿಂದಲೂ ಅತಿಘೋರವಾದ ಮಹಾಪರಾಧಗಳನ್ನು ಮಾಡಿ, ಅತಿ ದುಸ್ಸಹವಾದ ಈ ಸಂಸಾರಚಕ್ರದಲ್ಲಿ ಸುತ್ತಿಕೊಂಡಿರುವ ನಮ್ಮಂಥವರಿಗೆ, "ನನಗೆ ಬೇರೆ ಗತಿಯಿಲ್ಲ: ನೀನೇ ನಮ್ಮನ್ನು ರಕ್ಷಿಸಿ. ಈ ಕಷ್ಟವನ್ನು ಹೋಗಲಾಡಿಸಿ. ಪ್ರಾಪ್ತವಾದ ಸುಖವನ್ನು ಕರುಣಿಸಬೇಕು ಎಂದು ಪ್ರಾರ್ಥಿಸಿ ಶರಣಾಗತಿಯನ್ನು ಮಾಡಿದ ಮಾತ್ರದಿಂದಲೇ ಅನಾದಿಕಾಲದಿಂದಲೂ ನಾವು ಮಾಡಿದ ಮಹಾಪರಾಧಗಳನ್ನು ಕ್ಷಮಿಸಿ ಪಾಪಗಳನ್ನು ತೊಲಗಿಸಿ ಮೋಕ್ಷಪರ್ಯಂತವಾದ ಸುಖವನ್ನು ಕೊಡುವ ಪರಮೋಧ್ಧಾರ ಸ್ವಭಾವವುಳ್ಳವಳು ಭಗವಂತನ ದಯಾದೇವಿ - ಎಂಬುದೇ ಆಚಾರ್ಯರುಗಳ ಜ್ಞಾನದಲ್ಲಿ ಪ್ರವಹಿಸುವ ದಯೆ. ಇಂತಹ ಭಗವದ್ದಯಾದೇವಿಯ ವಿಶೇಷ, ಪ್ರಭಾವವನ್ನೇ ಪೂರ್ವಾಚಾರ್ಯರು ಪ್ರಕಾಶಪಡಿಸಿ,ನಮಗೆ ಅತ್ಯುತ್ತಮವಾಗಿಯೂ, ಸುಲಭವಾಗಿಯೂ ಇರುವ ಕ್ಷೇಮಮಾರ್ಗವನ್ನು ತೋರಿಸಿಕೊಟ್ಟಿರುತ್ತಾರೆ. ಆದ್ದರಿಂದ ನಾವು ಕೂಡ ಅಂತಹ ಹಿರಿಯರು ತೋರಿಸಿದ ದಾರಿಯಲ್ಲಿಯೇ ನಡೆಯೋಣವೆಂಬುದೇ ಆಚಾರ್ಯರ ಅಭಿಪ್ರಾಯ.

ಈ ಪದ್ಯದಲ್ಲಿರುವ "ತ್ವದು ದಯತೂಲಿಕಾಭಿಃ" ಎಂಬ ಪದಕ್ಕೆ "ನಿನ್ನ (ದಯೆಯ) ಆವಿರ್ಭಾವವೆಂಬ ಕುಂಚಿಗಳಿಂದ " ಎಂದು ಅರ್ಥವನ್ನು ಹೇಳಬಹುದು. ಆಗ ದಯೆಯೇ ಕುಂಚಿ ಎಂಬ ಅರ್ಥವಾಗುವುದು.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ


ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ಪ್ಲವನಾಮ ಸಂವತ್ಸರ
ಆಷಾಢ - ಶ್ರಾವಣ ಮಾಸ ಸಂಚಿಕೆ

ಸಂಪುಟ - 01 ಆಗಸ್ಟ್ 2021 ಸಂಚಿಕೆ -01



## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಹಬ್ಬಗಳ ಸಂಭ್ರಮದ ಶ್ರಾವಣ ಮಾಸ | -ಗಿರಿಜಾ. ಎಸ್. ದೇಶಪಾಂಡೆ | 7 |
| ಹಯಗ್ರೀವ ಜಯಂತಿಯ ವೈಶಿಷ್ಟ್ಯ | -ಪಿ.ಎಸ್.ಜೆ | 9 |
| ಭೀಮನ ಅಮಾವಾಸ್ಯೆ | -ಶ್ರೀಮತಿ. ಕೆ.ವಿ. ಪದ್ಮಾವತಿ | 10 |
| ವರಮಹಾಲಕ್ಷ್ಮೀವ್ರತ | -ಪಿ.ಎಸ್.ಅರ್ಚನ | 11 |
| ಶ್ರೀ ಕೃಷ್ಣ ಜನ್ಮಾಷ್ಟಮಿ | - ಸುಮಾ ಚಂದ್ರಶೇಖರ್ | 14 |
| ಪುಸ್ತಕಾವಲೋಕನ | - ಪ್ರಣವ | 16 |
| ತುಲಸಿ ದಾಸ ಜಯಂತಿ | - ಡಾ॥ ಗುರುರಾಜ ಪೋಶೆಟ್ಟಿ ಹಳ್ಳಿ | 17 |
| ಆಳ್ವಾರರ ಭಗವದನುಭವ | - ಡಾ॥ ಸಿ.ಎಸ್.ಊರ್ಮಿಳಾ | 20 |
| ಬೇತಮಂಗಲದ ವಿಜಯೇಂದ್ರ ದೇವಾಲಯ | - ಕೆಂಗೇರಿ ಚಕ್ರಪಾಣಿ | 22 |
| ಶ್ರೀ ವೆಂಕಟೇಶ್ವರ ಸ್ವಾಮಿ ಆಲಯ | -ದಿ॥ ಬಿ.ಎನ್. ಶ್ರೀನಿವಾಸನ್ | 24 |
| ಮಹಿಮಾನ್ವಿತ ಕ್ಷೇತ್ರ ಮಂತ್ರಾಲಯ | - ಸುಮನಬದ್ರಿನಾಥ್ | 31 |
| ಆಯುರ್ವೇದ ಮತ್ತು ನಾವು | - ಡಾ॥ ಪ್ರದೀಪ್‌ಕುಮಾರ್ ಹೆಬ್ರಿ | 34 |
| ಹೆಳವನಕಟ್ಟೆ ಗಿರಿಯಮ್ಮ ಚರಿತ್ರೆ | - ಪ್ರಿಯಾಪ್ರಾಣೇಶ ಹರಿದಾಸ | 35 |
| ವೇದದಲ್ಲಿ ಗಣಿತ | - ರಮೇಶ್‌ಕುಮಾರ್ ಬನ್ನೂರು | 37 |
| ಐಜಿ. ಸ್ವಾಮಿ ಶ್ರೀವ್ಯಾಸ ತತ್ವಜ್ಞರು | -ಶ್ರೀಧರ ರಾಯಸಂ | 38 |
| ಬ್ರಹ್ಮಗುರುತ್ವ | - ಹೇಮಂತ್ ಕುಮಾರ್ ಜಿ. | 39 |
| ಶ್ರೀ ಕೃಷ್ಣ ಪರಮಾತ್ಮ | - ಬಿ.ಆರ್. ಶ್ರೀಕಂಠಯ್ಯ | 41 |
| ಸಂಸ್ಕೃತ ಕಲಿಯೋಣ !! | - ಮಹಾ ಮಹೋಪಾಧ್ಯಾಯ ಎಸ್.ಲಕ್ಷ್ಮಣಯ್ಯ | 43 |
| ಶ್ರೀಮದ್ಭಗವದ್ಗೀತೆ | -ಶ್ರೀಮತಿ ಬಿ. ಪದ್ಮಜ | 44 |
| ಸನಾತನಧರ್ಮದಲ್ಲಿ ಜ್ಯೋತಿಷ್ಯಶಾಸ್ತ್ರ | - ಆರ್. ಶ್ರೀನಿಧಿ | 45 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ. ಆರ್. ನರಸಿಂಹನ್ | 47 |
| ತಿರುಮಲೆ - ಕಾಲಮಾನಾಚರಣೆಗಳು | - ಶ್ರೀಮತಿ | 49 |
| ನೀತಿ ಕಥೆ - ಅನುಭವ ಕಲಿಸಿದ ಪಾಠ | -ಶ್ರೀಮತಿ ಸುಧಾಮಧುಸೂದನ್ | 51 |
| ಚಿತ್ರ ಕಥೆ -ವೆಂಗಮಾಂಬ ಭಕ್ತಿ | -ಡಾ॥ ಕೆ. ರವಿಚಂದ್ರನ್ | 52 |
| ಕ್ವಿಜ್ | | 54 |


ಮುಖಚಿತ್ರ - ನವನೀತ ಕೃಷ್ಣನು (ತಿರುಮಲೆ)

ಹಿಂಬದಿಚಿತ್ರ - ಶ್ರೀ ಹಯಗ್ರೀವ ಮೂರ್ತಿ, ಚಿತ್ರ : - ಪಿ. ಶಿವಪ್ರಸಾದ್


**ಗೌರವ ಸಂಪಾದಕರು**

ಡಾ॥ ಕೆ. ಎಸ್. ಜವಹರ್ ರೆಡ್ಡಿ, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ, ತಿ.ತಿ.ದೇ., ತಿರುಪತಿ.

**ಪ್ರಧಾನ-ಸಂಪಾದಕರು**

ಡಾ॥ ಕೆ. ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**

ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**

ಶ್ರೀ .ಪಿ. ರಾಮರಾಜು, ಎಮ್.ಎ.
ವಿಶೇಷಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ., ಮುದ್ರಣಾಲಯ, ತಿರುಪತಿ.

**ಡಿ.ಟಿ.ಪಿ.**

ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ. ತಿರುಪತಿ.

**ಛಾಯಗ್ರಹಣ:**

ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ, ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ, ತಿರುಪತಿ - 517 507

**ಇತರ ವಿವರಗಳಿಗೆ**

ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.


| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ



# ದೇವಾಲಯ ದರ್ಶನ ಜನ್ಮಪಾವನ

**ಸಂಪಾದಕೀಯ**

ನಮ್ಮ ದೇಶದಲ್ಲಿ ದೇವಾಲಯ ದರ್ಶನ, ದೇವಾಲಯದಲ್ಲಿ ದೇವರ ಪೂಜೆ ಎನ್ನುವುದು ಅನಾದಿಕಾಲದಿಂದಲೂ ಬಂದಿರುವ ಪದ್ಧತಿ. ದೇವಾಲಯಗಳಲ್ಲಿರುವ ದೇವರ ಪ್ರತಿಮೆಗಳು ಸಾಕ್ಷಾತ್ ದೇವರನ್ನೇ ಪ್ರತಿ ಬಿಂಬಿಸುತ್ತದೆ ಎಂಬುದನ್ನು ಮಹಾಜ್ಞಾನಿಗಳಿಂದ ಮಾತ್ರ ತಿಳಿಯಲು ಸಾಧ್ಯ.

ನಮ್ಮಂತಹ ಸಾಮಾನ್ಯ ಜನರು ಭಗವಂತನನ್ನು ಪ್ರಾರ್ಥಿಸುವುದು ಅತ್ಯವಶ್ಯಕವಾದದ್ದು. ಇದರ ಪ್ರಾಮುಖ್ಯತೆಯನ್ನು ಅರಿತ ನಮ್ಮ ಪೂರ್ವೀಕರು, ಋಷಿಗಳು, ರಾಜರುಗಳು ಸಾರ್ವಜನಿಕ ಪ್ರಾರ್ಥನೆಗಾಗಿ ಅನೇಕ ದೇವಾಲಯಗಳನ್ನು ನಿರ್ಮಿಸಿದರು. ದೇವಾಲಯಗಳ ಮಹತ್ವವನ್ನು ಎಲ್ಲರಿಗೂ ತಿಳಿಯ ಪಡಿಸಲು ಆಯಾಯ ದೈವಗಳ ಮಹಿಮೆ, ತೀರ್ಥ ಕ್ಷೇತ್ರಗಳ ಮಹತ್ವ, ಸ್ಥಳ ಪುರಾಣಗಳ ಬಗ್ಗೆ ಆಳ್ವಾರರುಗಳು, ನಾಯನ್‌ಮಾರರುಗಳು, ಆಧ್ಯಾತ್ಮಿಕ ಚಿಂತಕರು ತಮ್ಮ ತಮ್ಮ ಗ್ರಂಥಗಳ ಮೂಲಕ ತಿಳಿಸಿದ್ದಾರೆ. ‘ಆಲಯ’ ಎಂಬ ಪದದಲ್ಲಿ ‘ ಆ’ ಎಂದರೆ ‘ಆತ್ಮ’ ಲಯಮ್ ಸೇರಿಕೊಳ್ಳುವುದು. ಆತ್ಮ ಪರಮಾತ್ಮನೊಂದಿಗೆ ವಿಲೀನ ವಾಗುವುದು ಎಂದರ್ಥ ನಮ್ಮ ಮನಸ್ಸು ಬೇಸರಗೊಂಡಾಗ ಅದನ್ನು ಪರಿಹರಿಸಿಕೊಳ್ಳುವ ಜಾಗವೇ ದೇವಾಲಯ ಅಲ್ಲವೇ? ದೇವಾಲಯಕ್ಕೆ ಹೋದಾಗ ಯಾವುದೋ ಒಂದು ತೃಪ್ತಿ ನೆಮ್ಮದಿಯು ನಮ್ಮ ಮನಕ್ಕೆ ಉಂಟಾಗುತ್ತದೆ.

ಅಂದಿನ ಕಾಲದಲ್ಲಿ ದೇವಾಲಯಗಳು ಸಾಮಾಜಿಕ ಚಟುವಟಿಕೆಗಳಿಗೆ ಒಂದು ಪ್ರಮುಖ ಕೇಂದ್ರವಾಗಿದ್ದವು. ಎಲ್ಲರೂ ಒಂದಾಗಿ ಪ್ರಾರ್ಥಿಸುವ ತಾಣವಾಗಿದ್ದಿತು. ದೇವಾಲಯಗಳು ಸಂಗೀತ, ಕಲೆ, ಸಾಹಿತ್ಯ, ವಿದ್ಯಾರ್ಜನೆ ಮುಂತಾದುವುಗಳ ಕೇಂದ್ರಸ್ಥಾನವಾಗಿದ್ದವು ಇವು ನಮ್ಮ ಪಂಚೇಂದ್ರಿಯಗಳನ್ನು ಹತೋಟಿಗೆ ತರುವ ಕೇಂದ್ರಗಳಾಗಿಯೂ ಇದೆ. ಪರಿಶುದ್ಧ ಮನಸ್ಕರಾಗಿ ದೇವರನ್ನು ಧ್ಯಾನಿಸಲು ದೇವಾಲಯಗಳು ನೆರವಾಗುತ್ತಿದ್ದವು ಹೀಗಾಗಿ ಸಾಮೂಹಿಕ ಪ್ರಾರ್ಥನೆ ಮಾಡುವ ಕೇಂದ್ರಗಳಾದವು “ದೇವಾಲಯವಿಲ್ಲದ ಊರಲ್ಲಿ ವಾಸಿಸಬೇಡ” ಎಂದು ನಮ್ಮ ಪೂರ್ವಿಕರು ಹೇಳುತ್ತಿದ್ದರು. ದೇವಾಲಯಗಳಲ್ಲಿ “ಸ್ವಯಂಭೂ”ವಾಗಿ ದೇವರು ನೆಲಸಿರುವ ಊರುಗಳು ಏಳು ಎಂದು ಹೇಳು ವುದುಂಟು.

ಈ ಸ್ವಯಂವ್ಯಕ್ತ ಕ್ಷೇತ್ರಗಳಲ್ಲಿ ಒಂದು ಕಲಿಯುಗ ವೈಕುಂಠ ಕ್ಷೇತ್ರವೆಂದೇ ಸುಪ್ರಸಿದ್ಧವಾಗಿರುವ ತಿರುಮಲೆಯ ಶ್ರೀ ವೆಂಕಟಾಚಲಪತಿ ದೇವಾಲಯ ಶ್ರೀನಿವಾಸನಿಗೆ ಅಂದಿನ ರಾಜ ಮಹಾರಾಜರುಗಳೂ,ಇಂದಿನ,ಭಕ್ತರುಗಳೂ ಅನೇಕ ಕೈಂಕರ್ಯ ಗಳನ್ನು ನಡೆಸಿಕೊಂಡು ಬಂದಿದ್ದಾರೆ. ಈಗ ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗೆ ಶ್ರೀನಿವಾಸನ ದೇವಾಲಯಗಳನ್ನು ನಿರ್ಮಾಣ ಮಾಡಬೇಕೆಂಬ ಯೋಜನೆ ಕೈಗೊಂಡಿರುವುದು ಅತ್ಯದ್ಭುತವಾದದ್ದು ಈ ದೇವಾಲಯಗಳು ಪವಿತ್ರವಾದ ಕಲೆ, ಸಂಸ್ಕೃತ, ಆಧ್ಯಾತ್ಮಿಕ ಚಿಂತನೆ, ಸನಾತನ ಧರ್ಮಗಳ ಸಂಕೇತವಾಗಿದೆ. ಅಷ್ಟೇ ಅಲ್ಲದೆ ಶಿಲ್ಪ ಕಲೆಗೆ ಆಗರವಾಗಿರುವ ಈ ದೇವಾಲಯಗಳನ್ನು ಸಂರಕ್ಷಿಸುವುದು ಪ್ರತಿಯೊಬ್ಬ ಪ್ರಜೆಯ ಆದ್ಯ ಕರ್ತವ್ಯವಾಗಿದೆ. ಈ ಉನ್ನತವಾದ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ತಿರುಮಲೆ ತಿರುಪತಿ ದೇವಸ್ಥಾನದ “ಶ್ರೀ ವೆಂಕಟೇಶ್ವರ ಪ್ರಾಚೀನ ದೇವಾಲಯಗಳ ಸಂರಕ್ಷಣಾ ಸಮಿತಿ ” ಎಂಬ ಹೆಸರಲ್ಲಿ ಸಾವಿರಾರು ವರ್ಷಗಳಿಗಿಂತಲೂ ಪ್ರಾಚೀನವಾದ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡುವ ಕೆಲಸವನ್ನು ಕೈಗೊಂಡಿದೆ. ಈ ಹಿರಿದಾದ ಮಹತ್ತರವಾದ ಕಾರ್ಯಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

**ಬನ್ನಿ ದೇವಾಲಯಗಳನ್ನು ರಕ್ಷಿಸೋಣ, ದೇವಾಲಯಗಳನ್ನು ನವೀಕರಿಸೋಣ.**

# ಹಬ್ಬಗಳ ಸಂಭ್ರಮದ ಶ್ರಾವಣಮಾಸ

- ಗಿರಿಜಾ. ಎಸ್. ದೇಶಪಾಂಡೆ
9739388300



ಶ್ರಾವಣ ಬಂತು ನಾಡಿಗೆ, ಬಂತು ಬೀದಿಗೆ ಶ್ರಾವಣ ಎನ್ನುವಂತೆ ಶ್ರಾವಣ ಮಾಸದ ಆಗಮನ ನಮಗೆ ಸಂಭ್ರಮ ಸಡಗರ ತರುವ ಮಾಸವಾಗಿದೆ. ಮಾಸಗಳ ರಾಜನೆಂದು ಶ್ರಾವಣ ಮಾಸವನ್ನು ಕರೆಯುತ್ತಾರೆ. ಈ ಮಾಸದಲ್ಲಿ ನಡೆಯುವ ಧರ್ಮಾಚರಣೆಯ ವಿಧಿವಿಧಾನಗಳಾದ ಜಪ, ತಪ, ವೃತ, ನಿಯಮ ಪೂಜಾನುಷ್ಠಾನ ಪಾರಾಯಣ ಶಾಸ್ತ್ರ, ಪ್ರವಚನ, ಭಜನೆ, ಕೀರ್ತನೆ, ಸತ್ಸಂಗ, ಪುಣ್ಯಕ್ಷೇತ್ರಗಳ ದರ್ಶನ, ಯಜ್ಞ, ಯಾಗ, ಹೋಮವಹನ ಮುಂತಾದವು ಶ್ರಾವಣ ಮಾಸದಲ್ಲೇ ಶ್ರೇಷ್ಟವೆಂದು ಹೇಳಲಾಗುತ್ತದೆ.

ಶ್ರಾವಣದಲ್ಲಿ ಒಂದೇ ರೇಖೆಯಲ್ಲಿ ಬರುವ 17 ನಕ್ಷತ್ರಗಳು ಮಂಗಳಕರವಾದ ಮಳೆಗರೆದು, ಧರೆಯ ಜನರಿಗೆ ಉನ್ನತ ಫಲಗಳನ್ನು ನೀಡುತ್ತಿದೆ. ಸಿರಿಸಂಪತ್ತು ವೃದ್ಧಿಗಾಗಿ ವರಮಹಾಲಕ್ಷ್ಮಿ ವ್ರತ, ಸಂಪತ್ತು ಶುಕ್ರವಾರ, ಸಕಲ ಸಂಕಷ್ಟಗಳಿಂದ ಮುಕ್ತಗೊಳಿಸಿ ಸಮೃದ್ಧಿ ನೀಡುವ ಸತ್ಯನಾರಾಯಣ ಪೂಜೆ, ಮಂಗಳಗೌರೀ ವ್ರತ, ನಾಗಪಂಚಮಿ ನಾಗದೇವತೆಗೆ ಹಾಲೆರೆಯುವುದು, ಸಹೋದರಿಯರ ರಕ್ಷಾಬಂಧನ, ಉಪಾಕರ್ಮ,ರಾಯರ ಆರಾಧನೆ, ಶ್ರೀಕೃಷ್ಣ ಜನ್ಮಾಷ್ಟಮಿ, ಸಿರಿಯಾಳ ಷಷ್ಠಿಯಲ್ಲದೇ ಶ್ರಾವಣದ ಸೋಮವಾರದ ಶಿವನ ಪೂಜೆಗೆ ಅಗ್ರಸ್ಥಾನವಿದೆ. ಈ ಮಾಸದಲ್ಲಿ ಬರುವ ಎಲ್ಲ ಸೋಮವಾರಗಳೂ ಮುಕ್ತಿಯ ಸೋಪಾನಗಳು ಎಂಬುದು ಶಿವ ಭಕ್ತರ ನಂಬಿಕೆಯಾಗಿದೆ. ಶ್ರವಣ ಎಂದರೆ ಆಲಿಸುವುದು, ಕೇಳುವುದು, ಸರ್ವ ಶ್ರೋತ್ರಗಳ ಶ್ರವಣೇಂದ್ರಿಯಗಳಿಗೆ ಯೋಗ್ಯವಾದ ಪಾರಮಾರ್ಥ ತತ್ವಧಾರೆಯನ್ನು ಶ್ರವಣ ಮಾಡಿಸುವ ಮಾಸವೇ ಶ್ರಾವಣಮಾಸ. ತತ್ವಪದ ಲಕ್ಷಣಗಳನ್ನು ಶೋಧಿಸಿದಾಗ ಅಶುದ್ಧ ಬುದ್ಧಿಯು ಶುದ್ಧವಾದ ನಂತರ ಗುರುಮುಖದಿಂದ ಉಪನಿಷದ್ ವಾಕ್ಯಗಳನ್ನು ಶ್ರವಣಮಾಡುವುದರಿಂದ ಅಪರೂಪದ ಜ್ಞಾನವಾಗುವುದು. ಆಗ ಪರಮಾತ್ಮನೆಂಬ ಭಾವವು ಸುಸ್ಥಿರವಾಗುವುದು. ಈ ಮಾಸದಲ್ಲಿ ಬರುವ ಹಬ್ಬ ವ್ರತಗಳನ್ನು ಆಚರಿಸುವುದರಿಂದ ಜಾತಕದಲ್ಲಿರುವ ಗ್ರಹದೋಷಗಳನ್ನು ನಿವಾರಣೆ ಮಾಡಿಕೊಳ್ಳಬಹುದು.

ಈ ಮಾಸದ ಆಗಮನಕ್ಕೆ ಮನೆಯಲ್ಲಿರುವ ಸ್ತ್ರೀಯರು ಮನೆ ಬಾಗಿಲು ಸ್ವಚ್ಛಗೊಳಿಸಿ, ತಿಂಗಳಿಗಾಗುವಷ್ಟು ಅಡುಗೆಗೆ ಬೇಕಾದ ಪುಡಿಗಳನ್ನು ತಯಾರಿಸಿಟ್ಟುಕೊಳ್ಳುವರು. ಮೆಣಸಿನಕಾಯಿ ಶ್ರಾವಣದಲ್ಲಿ ಹುರಿಯುವುದಿಲ್ಲ ಮನೆಯಲ್ಲಿಯ ಲಕ್ಷ್ಮಿದೇವಿಗೆ ಖಾರದ ಘಾಟು ತೊಂದರೆಯಾಗುವುದು ಎಂಬ ನಂಬಿಕೆ ಇದೆ. ಪೊರಕೆ, ಬುಟ್ಟಿ, ಮರಗಳ ಖರೀದಿ ಅಲ್ಲದೇ ಹಬ್ಬ ಬರುವ ಮೊದಲು ಸ್ತ್ರೀಯರು ಬಳೆಗಳನ್ನು, ಬಂಗಾರದ ಬಳೆಯನ್ನು ತೊಡುವ ಪದ್ಧತಿ ಕೂಡಾ ಕೆಲವರಲ್ಲಿದೆ. ಈ ಮಾಸದಲ್ಲಿ ಮೊದಲು ಬರುವ ಹಬ್ಬವೇ ನಾಗರ ಪಂಚಮಿ ನಾಡಿಗೆ ದೊಡ್ಡದು ಎಂಬ ಹಾಡನ್ನಲ್ಲದೇ ಪಂಚಮಿ ಹಬ್ಬ ಅಣ್ಣ ಯಾಕ ಬರಲಿಲ್ಲ ಕರಿಯಾಕ ಎಂದು ಹಾಡು ಹೇಳುವ ಮನೆಯ ಹೆಣ್ಣುಮಕ್ಕಳಲ್ಲಿ ತೇಲಿ ಬರುತ್ತದೆ. ಜಾತಕದಲ್ಲಿ ನಾಗದೋಷಗಳಿದ್ದರೆ, ರಾಹು ದೋಷ ನಕ್ಷತ್ರ ದೋಷವಿದ್ದರೆ, ಸಂತಾನದ ನಾಗದೋಷವಿದ್ದರೆ, ಮಾಂಗಲ್ಯ ಭಾಗ್ಯ ದೋಷವಿದ್ದರೆ ನಾಗರ ಪಂಚಮಿದಿನ ನಾಗರಕಲ್ಲಿಗೆ ಅಥವಾ ಹುತ್ತಕ್ಕೆ ಹಾಲೆರೆಯುವರು. ಸಿರಿಯಾಳ ಷಷ್ಠಿಯನ್ನು ಗಂಡು ಮಕ್ಕಳಿರುವ ತಾಯಂದಿರು ಆಚರಿಸುತ್ತಾರೆ.



ಈ ಮಾಸದಲ್ಲೇ ಗುರು ರಾಘವೇಂದ್ರರ ಆರಾಧನೆ ಬರುತ್ತದೆ. ಕಲಿಯುಗದ ಕಾಮಧೇನು ಕೇಳಿದ್ದನ್ನು ಪ್ರಸಾದಿಸುವ ಕಲ್ಪವೃಕ್ಷವೆಂದೇ ಭಾವಿಸಲಾದ ಮಂತ್ರಾಲಯದ ರಾಯರ ಆರಾಧನೆಯನ್ನು ಅವರ ಎಲ್ಲ ಮಠಗಳಲ್ಲಿ ಮಂತ್ರಾಲಯದಲ್ಲಿ ಮೂರು ದಿನ ಆಚರಿಸಲಾಗುತ್ತದೆ. ರಾಯರೆಂದರೆ ಸತ್ಯ ಧರ್ಮಗಳ ರೂವಾರಿ, ಹರಿವಾಯುಗಳ ಒಡನಾಡಿ, ಮನುಕುಲದ ಜೀವನಾಡಿ, ನಂಬಿದವರನ್ನೆಲ್ಲ



ಜಾತಿ, ಮತ, ಕುಲವೆನ್ನದೇ ಬೆಳಸಿದ್ದೇ ಕಾಯಕ, ಹಾಗಾಗಿ ನಂಬಿದವರಿಗೆಲ್ಲ ಅಧ್ಯಾತ್ಮ ಚಿಂತನೆಯೆಡೆಗೆ ಕರೆದೊಯ್ಯುವ ನಾಯಕ. ಸರ್ವ ವಿದ್ಯಾ ಪ್ರದಾಯಕ. ನೂರಾರು ದಾಸರು, ಸಾವಿರಾರು ಭಕ್ತರು, ಕೋಟಿ ಪಾಮರರು, ಸದಾ ಕೊಂಡಾಡುವ ಹೆಸರೇ ಶ್ರೀರಾಯರು. ಗುರುರಾಯರ ಸೇವಿಸಿರೋ... ಸೌಖ್ಯದಿ ಜೀವಿಸಿರೋ... ಎಂಬ ಉಕ್ತಿ ಎಲ್ಲ ಕಾಲಕ್ಕೂ ನಿತ್ಯನೂತನ.


ಶ್ರಾವಣದ ನಾಲ್ಕು ಶುಕ್ರವಾರ, ಶನಿವಾರ ಗೌರಿಯನ್ನು ಪೂಜಿಸಿದರೆ ಎರಡನೇಯ ಶುಕ್ರವಾರ ವರಮಹಾಲಕ್ಷ್ಮಿ ಪೂಜೆಯನ್ನು ಪೂಜಿಸುವ ಪದ್ಧತಿ ನಮ್ಮಲ್ಲಿದೆ. ಈ ವ್ರತವನ್ನು ಪುರುಷರೂ ಸ್ತ್ರೀಯರು ಒಟ್ಟಿಗೆ ಮಾಡಬಹುದು. ಅದರಲ್ಲಿ ಮಹಿಳೆಯರು ಹೆಚ್ಚಾಗಿ ಈ ವ್ರತ ಮಾಡುತ್ತಾರೆ. ಈ ವ್ರತಾಚರಣೆಗೆ ನಿಯಮಗಳಿಲ್ಲ. ಲಕ್ಷ್ಮಿದೇವಿಯು ಸಮೃದ್ಧಿ, ಸಂಪತ್ತು, ಅದೃಷ್ಟ, ಬುದ್ಧಿವಂತಿಕೆ, ಬೆಳಕು, ಧೈರ್ಯ, ಮತ್ತು ಸಂತಾನದ ಪ್ರಭಾವೀ ದೇವತೆ, ವಿವಾಹಿತ ಮಹಿಳೆಯರು ಲಕ್ಷ್ಮಿಯನ್ನು ಪೂಜಿಸುವುದರಿಂದ ಪತಿಯ ಆಯಸ್ಸು ವೃದ್ಧಿಯಾಗುವುದು. ಉತ್ತಮ ಸಂತಾನಕ್ಕಾಗಿಯೂ ಮಹಿಳೆಯರು ವರಮಹಾಲಕ್ಷ್ಮಿ ವ್ರತ ಆಚರಿಸುತ್ತಾರೆ. ಶ್ರಾವಣದ ಹುಣ್ಣಿಮೆಯಂದು ರಕ್ಷಾಬಂಧನ ಆಚರಿಸುತ್ತಾರೆ. ಸಹೋದರ ಸಹೋದರಿಯರ ನಡುವಿನ ಬಾಂಧವ್ಯ ಬಲಪಡಿಸುವ ಹಬ್ಬ ಇದಾಗಿದೆ. ಅಂದಿನ ದಿನ ಸಹೋದರಿ ಸೋಹದರನಿಗೆ ರಾಖಿ ಕಟ್ಟಿ ಆರತಿ ಮಾಡಿ ಸಿಹಿ ತಿನಿಸಿ ಸಹೋದರನ ಆಶೀರ್ವಾದ ಬೇಡುತ್ತಾಳೆ. ತಂಗಿಯ ರಕ್ಷಣೆ ಅಣ್ಣನಿಂದ ಅಣ್ಣನ ಜೊತೆ ಯಾವಾಗಲೂ ಸಹೋದರಿ ನಾನಿರುವೆ ನೆಂದು ಪರಸ್ಪರ ಭಾತೃತ್ವದ ಭಾವನೆಯನ್ನು ದಟ್ಟಗೊಳಿಸುವ ಹಬ್ಬ ಇದಾಗಿದೆ. ಅಂದಿನ ದಿನವೇ ಉಪಾಕರ್ಮ ಆಚರಣೆ ಎಂದರೆ ಉಪನಯನವಾದ ನಂತರ ಪ್ರತೀವರ್ಷ ಜನಿವಾರಧಾರಣೆ ಗಂಡು ಮಕ್ಕಳು ಆಚರಿಸುವ ಹಬ್ಬ ಇದಾಗಿದೆ.



ಉಪಾಕರ್ಮ ಆಚರಣೆ ಶಾಸ್ತ್ರೀಯ ಕಟ್ಟುಪಾಡಿನಲ್ಲಿ ನಡೆಯುವ ವಾರ್ಷಿಕ ಹಬ್ಬವಾಗಿದೆ. ಅಂದು ಗಾಯಿತ್ರಿ ಮಂತ್ರದಿಂದ ಹೊಸ ಸಿದ್ಧಿಯಲ್ಲದೇ ಆತ್ಮಕಲ್ಯಾಣ, ಲೋಕ ಕಲ್ಯಾಣವಾಗುವುದು. ಕೃಷ್ಣ ಜನ್ಮಾಷ್ಟಮಿ "ವಂದೇ ನನ ಗಾನಾ ಶ್ಯಾಮಮಂ ಪೀತ ಕೌಶೇಯ ವಾಸಮ್ ಸನಂದನ ಸುಂದರಾಮ್ ಶುಧಾಮ್ ಶ್ರೀಕೃಷ್ಣ ಪೃಕೃತೇ ಪ್ಯಾರಮ್॥" ಜನ್ಮಾಷ್ಟಮಿ ನಮ್ಮ ದೇಶದಲ್ಲಿ ಆಚರಿಸುವ ಪ್ರಮುಖ ಹಬ್ಬ. ಈ ದಿನವನ್ನು ಜನ್ಮಾಷ್ಟಮಿ, ಗೋಕುಲಾಷ್ಟಮಿಯೆಂದು ಸಂಭ್ರಮದಿಂದ ಆಚರಿಸುತ್ತಾರೆ. ಕೃಷ್ಣನ ಅನೇಕ ರೋಚಕ ಕಥೆಗಳು ಭಾಗವತದಲ್ಲಿವೆ. ಸೂರದಾಸರು, ಪುರಂದರದಾಸರು, ಕನಕದಾಸರು, ಮೀರಾಬಾಯಿ ಇವರೆಲ್ಲ ಕೃಷ್ಣನ ಆರಾಧಕರು.

ಅಂದಿನ ದಿನ ಮನೆ ಮತ್ತು ದೇವಾಲಯಗಳನ್ನು ವಿಶೇಷವಾಗಿ ಅಲಂಕರಿಸಿ ಪುಟ್ಟ ಕೃಷ್ಣನ ಹೆಜ್ಜೆಗಳ ರಂಗೋಲಿ ಬರೆದು ಕೃಷ್ಣನ ವಿಗ್ರಹ ಅಲಂಕರಿಸಿ ಬಗೆಬಗೆಯ ತಿಂಡಿ ಮಾಡಿ ಬೆಣ್ಣೆ ಸಮೇತ ನೈವೇದ್ಯ ಮಾಡಿ ರಾತ್ರಿ ಅರ್ಘ್ಯ ಸಮರ್ಪಿಸುತ್ತಾರೆ. ಕಾರುಣ್ಯಕ್ಕೆ ಎಣೆಯಿಲ್ಲ ಎನ್ನುವ ಹಾಗೆ ಅವನು ನಮಗಾಗಿ ಅವತರಿಸಿದ ಪರಮಾತ್ಮನೆಂದು ಉಪವಾಸವಿದ್ದು ಪೂಜೆ ಸಲ್ಲಿಸುತ್ತಾರೆ. ಸಮಗ್ರ ಭೂಮಿಯನ್ನು ಪಾತ್ರೆಯನ್ನಾಗಿ ಮಾಡಿ ಅದರಲ್ಲಿ ರತ್ನ ಕವಚ ತುಂಬಿಸಿ ಉತ್ತಮೋತ್ತಮರಿಗೆ ದಾನ ಮಾಡಿದಷ್ಟು ಪುಣ್ಯ ಬರುತ್ತದೆ ಎಂಬ ನಂಬಿಕೆ ನಮ್ಮಲ್ಲಿದೆ.

ಶ್ರಾವಣ ಮಾಸದಲ್ಲಿ ಬರುವ ಎಲ್ಲ ಹಬ್ಬಗಳೂ ಅಮೂಲ್ಯವಾದವುಗಳು. ಇಂಥಹ ಅಮೂಲ್ಯ ಸಂದರ್ಭದಲ್ಲಿ ದೇವತೆಗಳ ವಿಶೇಷ ಪೂಜೆ, ಹೋಮಹವನ, ಧರ್ಮಚಿಂತನೆ, ಕಾರ್ಯಸಿದ್ಧಿಯ ಸಂಕಲ್ಪಗಳ ಮುಖಾಂತರ ಬದುಕಿನಲ್ಲಿ ಸೌಹಾರ್ದ, ಸಹಬಾಳ್ವೆ, ಸಾತ್ವಿಕ ಸಂಪನ್ನತೆ ನಮಗೆಲ್ಲ ತಂದು ಕೊಡುತ್ತದೆ. ಬರುತ್ತಿರುವ ಶ್ರಾವಣದ ಸಂಭ್ರಮ ಆಚರಿಸಿ ಭಗವಂತನ ಕೃಪೆಗೆ ಪಾತ್ರರಾಗೋಣ.



# ಹಯಗ್ರೀವ ಜಯಂತಿಯ ವೈಶಿಷ್ಟ್ಯ

– ಪಿ.ಎಸ್.ಜಿ.

ಹಯಗ್ರೀವ ಎಂದರೆ ಕುದುರೆ ಮುಖದವ ಹಯಗ್ರೀವಾವತಾರದ ಉದ್ದೇಶ ಮಧು - ಕೈಟಭ ರಾಕ್ಷಸರನ್ನು ಸದೆಬಡಿದು ವೇದ ಉದ್ಧಾರಕ್ಕಾಗಿ. ಹಯಗ್ರೀವ ದೇವರ ಅವತಾರದ ದಿವಸ? ಶ್ರಾವಣ ಶುದ್ಧ ಹುಣ್ಣಿಮೆಯಂದು ಹಯಗ್ರೀವ ಜಯಂತಿ. ಒಂದು ವರ್ಷದಲ್ಲಿ ಮಾಡಿದ ವೇದಾಧ್ಯಯನವನ್ನು ಹಯಗ್ರೀವ ದೇವರಿಗೆ ಸಮರ್ಪಣೆ ಮಾಡಿ, ಹೊಸ ವೇದಾಧ್ಯಯನದಲ್ಲಿ ಸಂಕಲ್ಪ ಮಾಡುವ ಪರ್ವಕಾಲ. ಇದನ್ನೇ 'ಉಪಾಕರ್ಮ' ಎನ್ನುತ್ತಾರೆ. ಹಯಗ್ರೀವ ದೇವರು ಸಮಸ್ತ ವೇದಗಳಿಗೆ ರಕ್ಷಕರಾದ್ದರಿಂದ ಅವರ ಜಯಂತಿಯಂದೇ 'ಉಪಾಕರ್ಮ' ಮಾಡುವುದು ಅತ್ಯಂತ ಉಚಿತ.ಹಯಗ್ರೀವನು ಮಧು ಕೈಟಭರನ್ನು ಹೇಗೆ ಸಂಹಾರ ಮಾಡಿದ? ಪಾತಾಳಲೋಕದಲ್ಲಿ ಕಿವಿಗಳಿಗೆ ಅಪ್ಯಾಯಮಾನವಾಗಿ ಸಾಮಗಾನ ಮಾಡಲು ಪ್ರಾರಂಭಿಸಿದ ಹಯಗ್ರೀವನನ್ನು ನೋಡಲು ಮಧು - ಕೈಟಭರು ಓಡಿ ಬಂದರು. ಆವಾಗ ವೇದಗಳನ್ನು ತೆಗೆದುಕೊಂಡು ಹಯಗ್ರೀವನು ತನ್ನ ಸ್ಥಾನಕ್ಕೆ ಬಂದಾಗ ಮಧು - ಕೈಟಭರು ಯುದ್ಧಾಳುಗಳಾಗಿ ಮುನ್ನುಗ್ಗಿದರು. ಆ ಕ್ಷಣದಲ್ಲಿ ತೊಡೆಯ ಮೇಲೆ ಹೊಡೆದು ಮಧು - ಕೈಟಭರನ್ನು ಸಂಹರಿಸಿದ.

ಸೃಷ್ಟಿಯ ಆದಿಯಲ್ಲಿ ಶೇಷಾಶಾಯಿಯಾದ ನಾರಾಯಣನ ಹೊಕ್ಕುಳಿನಿಂದ ಕಮಲ ಹುಟ್ಟಿತು. ಅದರಲ್ಲಿ ಚತುರ್ಮುಖ ಹುಟ್ಟಿದ. ಅದೇ ಕಮಲದಲ್ಲಿ ತಮೋಬಿಂದು ರಜೋಬಿಂದುಗಳು ಹುಟ್ಟಿದವು. ತಮೋಬಿಂದುವಿನಿಂದ 'ಕೈಟಭ' ರಜೋಬಿಂದುವಿನಿಂದ 'ಮಧು' ಎಂಬ ರಕ್ಕಸರಿಬ್ಬರು ಹುಟ್ಟಿದರು (ಅಥವಾ ಶ್ರೀಹರಿಯ ಕಿವಿಯಿಂದ ಮಧು - ಕೈಟಭರು ಹುಟ್ಟಿದರು.)

ಚತುರ್ಮುಖನನ್ನು ಕುರಿತು ಘೋರ ತಪಗೈದು ಅವಧ್ಯತ್ವ ವರ ಪಡೆದರು. ವರದಿಂದ ದೃಪ್ತರಾಗಿ ನಾನೇ ದೇವರು ಎಂಬ ದುರಹಂಕಾರಿಗಳಾಗಿ ಬೆಳೆದರು. ಚತುರ್ಮುಖನಿಗೆ ಸೃಷ್ಟಿ ಮಾಡಲು ಸಾಧ್ಯವಾಗದಂತೆ ದೊಡ್ಡ ಅಡ್ಡಿಗಳಾದರು. ಮೂರ್ತಿ ಮತ್ತಾದ ನಾಲ್ಕು ವೇದಾಭಿಮಾನಿಗಳನ್ನೇ ಕದ್ದೊಯ್ದರು. ಪಾತಾಳಲೋಕಕ್ಕೆ ಓಡಿದರು.

ವೇದಗಳಿಲ್ಲದೆ ಸೃಷ್ಟಿ ಹೇಗೆ ಸಾಧ್ಯ? ಗೊಂದಲದಲ್ಲಿ ಮುಳುಗಿ ಚತುರ್ಮುಖನು ಶ್ರೀಹರಿಯನ್ನು ಕುರಿತು ತಪಗೈದ. ಮಗನ ಪ್ರಾರ್ಥನೆಗೆ ಶ್ರೀಹರಿ ಒಲಿದು ನಿಂತ ಏನು ಬೇಕೆಂದ "ನೀನು ಸೃಷ್ಟಿ ಮಾಡಲು ಆಜ್ಞೆ ಮಾಡಿರುವಿ. ಆದರೆ ವೇದಗಳೇ ಇಲ್ಲವಲ್ಲ. ನನಗೆ ವೇದಗಳನ್ನು ಅನುಗ್ರಹಿಸು"ಎಂದು ಚತುರ್ಮುಖ ಶರಣೆಂದ ಶ್ರೀ ಹರಿ ಮಂದಸ್ಮಿತನಾಗಿ 'ತಥಾಸ್ತು' ಎಂದ

ಕೂಡಲೆ ಪ್ರಳಯೋದಧಿಯಲ್ಲಿ ಮಿಂಚಿನಂತೆ ಧಾವಿಸುವ ಬಿಳಿ ಕುದುರೆಯಾಗಿ ಅವತಾರವೆತ್ತಿದ ಹಯಗ್ರೀವನೆನಿಸಿದ.ಪಾತಾಳಲೋಕಕ್ಕೆ ಧಾವಿಸಿ ಸುಶ್ರಾವ್ಯ - ಸಾಮಗಾನ ಮಾಡಿದ. ಎಲ್ಲೂ ಕೇಳದ ಅಪರೂಪದ ಧ್ವನಿಯಿಂದ ಮೈಮರೆತ ಮಧು ಕೈಟಭರು ಧ್ವನಿ ಬರುವೆಡೆ ಓಡೋಡಿ ಬಂದರು. ತತ್‌ಕ್ಷಣ ಹಯಗ್ರೀವ ಅದೃಶ್ಯನಾದ. ಆ ನಾಲ್ಕು ವೇದಗಳನ್ನು ಹೊತ್ತುಕೊಂಡು ತನ್ನ ಸ್ಥಳಕ್ಕೆ ಬಂದ. ಮಧು-ಕೈಟಭರು ದೇವರ ಮೇಲೆ ಯುದ್ಧಕ್ಕೆ ಹೊರಟರು. ಪರ್ವತ ಸದೃಶಕಾಯರಾದ ಮಧು - ಕೈಟಭರನ್ನು ಹಯಗ್ರೀವನು ತನ್ನ ತೊಟೆಯ ಮೇಲೆ ಹಾಕಿಕೊಂಡು ಸಂಹರಿಸಿದ. ನಾಲ್ಮೊಗನಿಗೆ ನಾಲ್ಕು ವೇದಗಳನ್ನು ಉಪದೇಶಿಸಿ ಸೃಷ್ಟಿಯ ಪ್ರಾರಂಭಕ್ಕೆ ನಾಂದಿಯಾದ. ಸಮಸ್ತ ವಾಙ್ಮಯ ಪ್ರಪಂಚವನ್ನೇ ಚತುರ್ಮುಖನಿಗೆ ಉಪದೇಶಿಸಿದ ಜ್ಞಾನ ಮೂರುತಿಗಳಿಗೆ ಅನಂತ ನಮನಗಳು.

ಪುಸ್ತಕ, ಶಂಖ, ಅಕ್ಷಮಾಲೆ ಹಾಗೂ ಜ್ಞಾನಮುದ್ರೆಗಳು ಏನನ್ನು ತಿಳಿಸುತ್ತವೆ?


ಬ್ರಹ್ಮಚರ್ಯಾಶ್ರಮದಲ್ಲಿ ಪುಸ್ತಕಾಧ್ಯಾಯನದಲ್ಲಿ ತೊಡಗಬೇಕು. ಗೃಹಸ್ಥಾಶ್ರಮದಲ್ಲಿ ಸಂಪತ್ತನ್ನುಗಳಿಸಿ ಸದ್‌ವಿನಿಯೋಗವನ್ನು ಮಾಡಬೇಕು. ವಾನಪ್ರಸ್ಥಾಶ್ರಮದಲ್ಲಿ ದೇವರ ಬಗ್ಗೆ ಮನನ ಮಾಡುತ್ತಾ ಜ್ಞಾನದ ಸಾಕ್ಷಾತ್ಕಾರ ಮಾಡಿಕೊಳ್ಳಬೇಕು. ಸನ್ಯಾಸಾಶ್ರಮದಲ್ಲಿ ಜಪಮಾಲೆ ಹಿಡಿದು ದೇವರನ್ನು ಸಾಕ್ಷಾತ್ಕಾರ ಮಾಡಿಕೊಂಡು ಧನ್ಯರಾಗಬೇಕೆಂದು ತಿಳಿಸುತ್ತವೆ.



# ಭೀಮನ ಅಮಾವಾಸ್ಯೆ

- ಶ್ರೀಮತಿ. ಕೆ.ವಿ. ಪದ್ಮಾವತಿ

97437 22327



ಈ ಅಮಾವಾಸ್ಯೆ ಬೇರೆ ಅಮಾವಾಸ್ಯೆಗಳಿಗಿಂತಲೂ ಭಿನ್ನ;ಬೇರೆಲ್ಲ ಅಮಾವಾಸ್ಯೆಗಳಲ್ಲಿ ಬರೀ ಕತ್ತಲೆ ತುಂಬಿಕೊಂಡಿದ್ದರೆ ಈ ಅಮಾವಾಸ್ಯೆಯಲ್ಲಿ ದಾಂಪತ್ಯ ಬದುಕಿನ ಬೆಳಕು ತುಂಬಿಕೊಂಡಿದೆ. ಈ ಅಮಾವಾಸ್ಯೆ ತುಂಬೆಲ್ಲ 'ಪತಿ- ಪತ್ನಿ'ಯರ ಪ್ರಣಯದೀಪ್ತಿಯ 'ಹಾಲ್ಬೆಳಕು' ಚೆಲ್ಲಿಕೊಂಡಿರುತ್ತದೆ. ಗಂಡ ಹೆಂಡತಿಯ ನಡುವೆ ಪರಸ್ಪರ ಪ್ರೀತಿ-ವಿಶ್ವಾಸಗಳ ಅಭಿವ್ಯಕ್ತಿಗೆ ಈ ಅಮಾವಾಸ್ಯೆಯು ಒಂದು ವೇದಿಕೆಯಾಗಿ ನಿಂತುಕೊಳ್ಳುತ್ತದೆ.

ಆಷಾಢ 'ಪೂರ್ಣಿಮೆ' 'ಏಕಾದಶಿ' ಗಳ ಹಾಗೆ ಆಷಾಢ 'ಅಮಾವಾಸ್ಯೆ'ಯು ಕೂಡ ಭಾರತೀಯರ ಮನಸ್ಸಿನಲ್ಲಿ ಭಾವುಕವಾಗಿ ನೆಲೆಯೂರಿದೆ. ಅಂದು ವಿವಾಹಿತ ಮಹಿಳೆಯರು ತಮ್ಮ ಪತಿ ಪರಮೇಶ್ವರನ ಆರೋಗ್ಯಾಯುಷ್ಯ ಮತ್ತು ಓಜಸ್ಸು ತೇಜಸ್ಸುಗಳ ವೃದ್ಧಿಗಾಗಿ 'ಜೋತಿರ್ಭೀಮೇಶ್ವರನ' ವ್ರತವನ್ನು ಮಾಡುತ್ತಾರೆ. ವಾಗಾರ್ಥಗಳಂತೆ 'ಅನನ್ಯ' ಮತ್ತು 'ಅನ್ಯೋನ್ಯ'ವಾಗಿರುವ 'ಶಿವಪಾರ್ವತಿ'ಯರೇ ಭೀಮನ ಅಮಾವಾಸ್ಯೆಯ 'ಅಧಿಷ್ಠಾತೃ' ದೇವತೆಗಳು.

ಅರ್ಧಾಂಗಿ ಕಲ್ಪನೆಗೆ ಅರ್ಥ ಹೇಳಿದ ಹರಿಕಾರ ಕೀರ್ತಿ ನಮ್ಮ ಶಿವನನ್ನು ಅಮಾವಾಸ್ಯೆ ಪರ್ವಕಾಲದಲ್ಲಿ ಕೇವಲ ಸುಮಂಗಲೆಯರು ಮಾತ್ರವಲ್ಲ ವಿವಾಹಾಕಾಂಕ್ಷಿ ಕನ್ಯೆಯರು ಕೂಡ ಮಾಡಿದಲ್ಲಿ ಅವರು ಬಯಸುವಂತಹ ವರನು ಕೈಹಿಡಿಯುವನು ಎಂಬುದೊಂದು ನಂಬಿಕೆ ಆಸ್ತಿಕವಲಯದಲ್ಲಿದೆ.

ಸಮಾಜದಲ್ಲಿ ಏನೆಲ್ಲಾ ಬದಲಾವಣೆಗಳಾಗಿದ್ದರೂ ಹಿಂದೂ ಸಂಪ್ರದಾಯದ ಆಚಾರ-ವಿಚಾರಗಳಿಗೆ ಮಾತ್ರ ಕುಂದುಂಟಾಗಲ್ಲ ಎಂಬುದಕ್ಕೆ ಆಧುನಿಕ ಹೆಣ್ಣು ಮಕ್ಕಳು ಹಬ್ಬ ಹರಿದಿನಗಳನ್ನು ಆಚರಿಸುವುದೇ ಸಾಕ್ಷಿ.

ಆಕಾಶದ ಮೋಡದಂತೆ ಹಬ್ಬಗಳಿಲ್ಲದೆ ಮಂಕುಕವಿದ ಮಾಸವೇ ಆಷಾಢ ಮಾಸ ಎಂಬುದು ಜನರ ಭಾವನೆ, ಇದಕ್ಕೂ ಮಿಗಿಲಾಗಿ ನವವಧುವನ್ನು ಅತ್ತೆಯ ಮನೆಯಿಂದ (ಗಂಡನ ಮನೆಯಿಂದ) ಬೇರ್ಪಡಿಸಿದ್ದು ಈ ಮಾಸ ಎಂಬ ಮೂದಲಿಕೆ ಬೇರೆ ಇದಕಿದ್ದೆ ಅದು ಕಳೆದು ಗಂಡನ ಮನೆಗೆ ಹೋಗಿ ಗಡಿಬಿಡಿಯಿಂದ ಹಬ್ಬ ಆಚರಿಸುವ ಸಂತೋಷ - ಸೌಭಾಗ್ಯಗಳನ್ನು ಪ್ರದರ್ಶಿಸುವ ಶ್ರಾವಣ ಮಾಸದ ಹೊಸ್ತಿಲಲ್ಲಿ ಬರುತ್ತದೆ ಈ ಹಬ್ಬ.

ಜನ್ಮದಿಂದ ಪ್ರಳಯದವರೆಗೂ ಹೊಂದಿಕೊಂಡು ಬಾಳುವ ರುದ್ರಪಾರ್ವತಿಯರಿಗೆ ಪ್ರೇರಕಶಕ್ತಿ ಮತ್ತೊಬ್ಬನಿದ್ದಾನೆ. ತೊಡೆಯ ಮೇಲೆ ಲಕ್ಷ್ಮೀಯನ್ನೇರಿಸಿಕೊಂಡು ಕುಳಿತಿರುವ ನರಸಿಂಹ,ಹೆಂಡತಿಯನ್ನು ಬಿಟ್ಟಿರದ ಆ ಲಕ್ಷ್ಮೀನರಸಿಂಹನೇ ರುದ್ರನ ದಾಂಪತ್ಯದ ಪ್ರೇರಕಶಕ್ತಿ.

ಮಣ್ಣಿನ ಈ ದೇಹ ಮಣ್ಣಾಗುವವರೆಗೂ ಮಿನುಗುತ್ತಾ ಸುದೃಢವಾಗಿ ನಗೆಯ ನಕ್ಷತ್ರಗಳನ್ನು ಹೊಮ್ಮಿಸಿ ಗಂಡನೊಂದಿಗೆ ಬದುಕಬೇಕು. ಅಂತಹ ದಾಂಪತ್ಯದ ಸಂಕೇತವಾಗಿ ತೋರ್ಬೆರಳಿನ ಪ್ರಮಾಣದಷ್ಟು ಕೆಮ್ಮಣ್ಣಿನ ಪ್ರತಿಮೆ ಮಾಡಿ, ಸಂತಸ - ಸಂಭ್ರಮಗಳ ದ್ಯೋತಕವಾಗಿ ಕಡ್ಡಿಯಲ್ಲಿ ಸುಣ್ಣವನ್ನು ಮೆತ್ತಿಕೊಂಡು ಅದರಿಂದ ಎಲ್ಲ ಕಡೆಯೂ ಮಧ್ಯೆ ಮಧ್ಯೆ ಚುಕ್ಕಿಯನ್ನು ಮಾಡಿ, ಧಾನ್ಯ ಸಮೃದ್ಧಿಗಾಗಿ ಅಕ್ಕಿ ಹರಡಿದ ಹರಿವಾಣದಲ್ಲಿ ಈ ಪ್ರತಿಮೆಗಳಿಗೆ ಅರಿಶಿನದ ಬೇರನ್ನು ದಾರದಿಂದ ಸುತ್ತು ಬರುವಂತೆ ಕಟ್ಟುವುದು ಸೌಮಾಂಗಲ್ಯದ ತಾಳಿಯ ಪ್ರತಿನಿಧಿಯನ್ನು ಪೂಜಿಸಬೇಕು.

ಈ ವ್ರತವನ್ನು "ಪತಿಸಂಜೀವಿನಿ" ವ್ರತವೆಂದೂ ಕರೆಯುತ್ತಾರೆ.ದೀಪದ ಕಂಬದಲ್ಲಿ ಶಿವನನ್ನು ಆವಾಹಿಸಿ ಪೂಜಿಸುವುದರಿಂದ ಇದಕ್ಕೆ "ಜ್ಯೋತಿಭೀಮೇಶ್ವರ" ವ್ರತವೆಂದು ಹೆಸರು,ಇಲ್ಲಿ 'ಭೀಮ' ಎನ್ನುವುದು ಬಲ ಎಂಬುದಕ್ಕೆ ಪರ್ಯಾಯಪದ ಮೈದಾಹಿಟ್ಟಿನಲ್ಲಿ ಭಂಡಾರವನ್ನು ಮಾಡಿ, ಅಣ್ಣ-ತಮ್ಮಂದಿರಿಂದ ಹೊಸ್ತಿಲಿನ ಮೇಲೆ ಅದನ್ನು ಬಡಿಸಿ ದಕ್ಷಿಣೆ ನೀಡುವ ಮೂಲಕ ವ್ರತ ಸಂಪನ್ನವಾಗುತ್ತದೆ. ವಿವಾಹಿತ ಹೆಣ್ಣು ಮಕ್ಕಳು ಒಂಬತ್ತು ವರ್ಷ ಇದನ್ನು ನಡೆಸಿ, ಒಂಬತ್ತು ಎಳೆಯ ಗಂಟು ಹಾಕಿದ ದಾರವನ್ನು ಬಲಗೈ ಮುಂಭಾಗದಲ್ಲಿ ಕಟ್ಟಿಕೊಳ್ಳುವುದು ವಾಡಿಕೆ.

# ವರಮಹಾಲಕ್ಷ್ಮೀ ವ್ರತ



ಲಕ್ಷ್ಮೀ ಎಂದರೇನೇ ಜನರಲ್ಲಿ ಮೋಹ, ಪ್ರೀತಿ ಮತ್ತು ಎಲ್ಲಿಲ್ಲದ ವಿಶೇಷ ಶ್ರದ್ಧೆಗಳು. ಅದರಲ್ಲೂ ವರಮಹಾಲಕ್ಷ್ಮೀ ಬಗ್ಗೆ ಕೊಂಚ ಜಾಸ್ತಿಯೇ ಅಕ್ಕರೆ ಲಕ್ಷ್ಮೀಯನ್ನು ಒಲಿಸಿಕೊಳ್ಳಲು ಏನೇನೋ ಕಸರತ್ತು ವರಮಹಾಲಕ್ಷ್ಮೀ ಹಬ್ಬದ ಸಂದರ್ಭದಲ್ಲಿ ಈ ದೇವಿಯ ಕುರಿತಾದ ಕೆಲವು ವಿಚಾರಗಳತ್ತ ಕಣ್ಣಾಡಿಸೋಣ. ಆ ಮೂಲಕ ಧನ ದೇವತೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡು, ಕರುಣೆಗೆ ಪಾತ್ರರಾಗೋಣ.


ಈ ಶುಕ್ರವಾರ ಎಂದಿನಂತಿಲ್ಲ. ಎಲ್ಲರ ವನಿತೆಯರ ಮನೆ ಮನಗಳಲ್ಲಿ ವರ ಮಹಾಲಕ್ಷ್ಮೀ ಹಬ್ಬದ ಸಡಗರ. ಹಬ್ಬಕ್ಕೆ ವಾರ ಹದಿನೈದು ದಿನಗಳಿದ್ದಾಗಲಿಂದಲೇ ಸಿದ್ಧತೆಗಳು. ಹಬ್ಬ ನೆನೆಸಿಕೊಳ್ತಾ ಹೆಂಗಳೆಯರಿಗೆ ನಿದ್ರೆಯೇ ಇಲ್ಲ! ಕಳಸಕ್ಕೆ ಉಡಿಸಲೊಂದು ತಮಗೊಂದು ಎಂದು ಎರಡೆರಡು ಸೀರೆ ಸೇರಿದಂತೆ ಭರ್ಜರಿ ಶಾಪಿಂಗ್. ಹಬ್ಬದ ನೆಪದಲ್ಲಿ ಬೆಳ್ಳಿ ತಂಬಿಗೆ, ತಟ್ಟೆ ಒಂದಿಷ್ಟು ಚಿನ್ನಾಭರಣಗಳು... ಹೀಗೆ ಸಂಪತ್ತು ಮನೆ ಸೇರಿದೆ. ಮತ್ತೊಂದು ಕಡೆ, ವರಮಹಾಲಕ್ಷ್ಮೀ ವ್ರತ ಆಚರಣೆಯ ರೀತಿ ನೀತಿಗಳನ್ನು ಅಮ್ಮನ ಬಳಿ, ಪಕ್ಕದ ಮನೆಯ ಅಜ್ಜಿ ಬಳಿ ಕೇಳಿ ತಿಳಿದದ್ದೂ ಆಗಿದೆ. ಮದುವೆಯಾದವರು, ಮದುವೆಯಾಗ ಬೇಕಾದವರು ಎಲ್ಲರಿಗೂ ಈ ಹಬ್ಬ ವಿಶೇಷವೇ. ಹಬ್ಬಕ್ಕೆ ಸಜ್ಜಾದ ಅಮ್ಮ, ಅಕ್ಕ, ತಂಗಿ, ಗೆಳತಿ, ಪತ್ನಿ ಎಲ್ಲರೂ ಲಕ್ಷ್ಮಿಯರಂತೆಯೇ ಕಾಣುತ್ತಾರೆ. ಇತ್ತ ಅಮ್ಮನ ಪೂಜೆ ಪುನಸ್ಕಾರಗಳಿಗೆ ನೆರವಾಗಲು ಮನೆಗಳಲ್ಲಿ ಪುಟ್ಟಲಕ್ಷ್ಮಿಯರೂ ಟೊಂಕ ಕಟ್ಟಿದ್ದಾರೆ. ಹಬ್ಬದ ಹಿಂದೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯಿದೆ. ಈಗೀಗ ಹಬ್ಬದ ಸುತ್ತ ಒಂದು ಆರ್ಥಿಕತೆಯೇ ಸೃಷ್ಟಿಯಾಗುತ್ತಿದೆ.

ವಿದ್ಯೆ ಬುದ್ಧಿ ಕೊಡಪ್ಪಾ... ಎನ್ನುವುದು ಬಾಲ್ಯದಲ್ಲಿದೆ ಎಲ್ಲ ಮಕ್ಕಳಿಗೂ ದೊಡ್ಡವರು ಕಲಿಸಿದ್ದ ಒಂದು ಸಾಲಿನ ಪ್ರಾರ್ಥನೆ. ಸರಸ್ವತಿಯ ಬಗ್ಗೆ ಭಯಭಕ್ತಿಗಳು, ಇಷ್ಟೆಲ್ಲ ಪ್ರಭಾವಿಯಾಗಿರುವ ಲಕ್ಷ್ಮಿದೇವಿಯ ಕುರಿತ ಅಂಶಗಳು ಕುತೂಹಲಕರವಾಗಿವೆ. ಲಕ್ಷ್ಮಿ ಎನ್ನುವುದು ಸಂಸ್ಕೃತ ಪದ. ಈ ಪದದೊಳಗಿನ ಲಕ್ಷ್ಯ ಎಂದರೆ ಗಮನಿಸು, ಗುರಿ, ಲಕ್ಷ್ಯ ಎನ್ನುವ ಅರ್ಥಗಳಿವೆ. ಇನ್ನು ಕ್ಷೀರಸಮುದ್ರದಲ್ಲಿ ಜನಿಸಿದ ಲಕ್ಷ್ಮಿಯನ್ನು ನಾನಾ ರೂಪದಲ್ಲಿ ಆರಾಧಿಸಲಾಗುತ್ತದೆ. ದೀಪಾವಳಿ ಸಂದರ್ಭದಲ್ಲಿ ಕೋಲ್ಕತ್ತಾದ ಕಾಳಿಘಾಟ್‌ನಲ್ಲಿನ ಕಾಳಿಯನ್ನು ಮಹಾಲಕ್ಷ್ಮಿ ರೂಪದಲ್ಲಿ ಪೂಜಿಸುತ್ತಾರೆ. ಇತ್ತ ಉತ್ತರಾಖಂಡದಲ್ಲಿ ದೀಪಾವಳಿಯ ರಾತ್ರಿ ಪೂಜೆ ನಂತರ ಶಂಖವನ್ನು ಯಾರೂ ಊದುವಂತಿಲ್ಲ. ಏಕೆಂದರೆ, ಲಕ್ಷ್ಮಿ ಜನಿಸಿದ ಕಡಲಲ್ಲಿಯೇ ಶಂಖವೂ ಹುಟ್ಟಿದ್ದು, ಅದಕ್ಕೆ ಆ ರಾತ್ರಿ ವಿಶ್ರಾಂತಿ ನೀಡುವ ಇಂಗಿತ ಇಲ್ಲಿಯದು.

### ನೂರು ಹೆಸರು ಸಾಲದು

ಲಕ್ಷ್ಮಿಗೂ ಕಮಲಕ್ಕೂ ಎಲ್ಲಿಲ್ಲದ ನಂಟು. ಪದ್ಮಪ್ರಿಯೆ, ಪದ್ಮಮುಖಿ, ಪದ್ಮಾಕ್ಷಿ, ಪದ್ಮಹಸ್ತೆ, ಪದ್ಮಸುಂದರಿ ಎನ್ನುವ ಹೆಸರೆಲ್ಲವೂ ಸೇರಿಕೊಂಡಿವೆ. ಅಲ್ಲದೇ ಮನುಶ್ರೀ, ಚಕ್ರಿಕಾ, ಐಶ್ವರ್ಯ, ಕಲ್ಯಾಣಿ, ನಂದಿಕಾ, ವೈಷ್ಣವಿ, ಹರಿಪ್ರಿಯ, ಸಮೃದ್ಧಿ, ನಾರಾಯಣಿ, ಭಾರ್ಗವಿ, ಶ್ರೀದೇವಿ, ಚಂಚಲಾ, ಜಲಜಾ, ಮಾಧವಿ, ಸುಜಾತ, ಶ್ರೇಯಾ, ರಮೆ, ಸರ್ವಮಂಗಳೆ, ಕಮಲವಾಸಿನೆ, ಮನ್ಮಥಜನನಿ, ವಿಷ್ಣುವಲ್ಲಭೆ, ಕ್ಷೀರಾಬ್ಧಿಕನ್ಯಕೆ, ಪುಷ್ಟೆ, ಇಂದಿರಾ ಎಂದೆಲ್ಲ ಭಕ್ತಕೋಟಿ ಕರೆಯುತ್ತದೆ. ಶ್ರೀಮಹಾಲಕ್ಷ್ಮೀ ಅಷ್ಟೋತ್ತರದಲ್ಲಿ ಜಗನ್ಮತಾ ಎಂದೂ ಹೇಳಲಾಗಿದೆ. ವಿಶ್ವಮಾನ್ಯತೆಯಿಂದ ಜನರು ಐಶ್ವರ್ಯವನಷ್ಟೆ ಅಲ್ಲ, ಜ್ಞಾನ, ಧೈರ್ಯ, ಸಾಮರ್ಥ್ಯ, ಜಯ, ಸಂತಾನ, ಸಂತೋಷ, ಸೌಂದರ್ಯ, ಆರೋಗ್ಯ, ಆಯಸ್ಸು

ಪಿ.ಎಸ್. ಅರ್ಚನ



ಹೀಗೆ ಎಲ್ಲವನ್ನೂ ಕೋರುತ್ತಾರೆ. ಇದಕ್ಕೆ ತಕ್ಕಂತೆ ಲಕ್ಷ್ಮಿಯ ನಾನಾ ರೂಪಗಳಿವೆ. ಭೂದೇವಿ, ಶ್ರೀದೇವಿ ಮತ್ತು ನೀಲದೇವಿ ಎನ್ನುವ ಲಕ್ಷ್ಮಿಯ ಮೂರು ರೂಪಗಳು ಜನಪ್ರಿಯ.

ಶ್ರೀದೇವಿಯನ್ನು ಚಂಚಲತೆಗೆ ಹೋಲಿಸಲಾಗುತ್ತದೆ.ಚರ ಆಸ್ತಿಗಳನ್ನು ಇದು ಬಿಂಬಿಸುತ್ತದೆ. ಭೂದೇವಿಯು ಸ್ಥಿರ ಆಸ್ತಿಗಳ ಸೂಚಕ. ಸ್ತೋತ್ರಗಳು ಲಕ್ಷ್ಮಿಯನ್ನು ಸಮುದ್ರರಾಜನ ಪುತ್ರಿ, ಚಂದ್ರನ ತಂಗಿ, ಉದ್ಭವವಾದಳು,ಕಮಲದಲ್ಲಿ ಅವಿರ್ಭವಿಸಿದಳು ಎಂದೆಲ್ಲ ಬಣ್ಣಿಸುತ್ತದೆ.

## ಲಕ್ಷ್ಮಿ ರೂಪದಲ್ಲಿ ಜೀವನಸೂತ್ರ

ಸಂಪತ್ತು, ಅದೃಷ್ಟ ಮತ್ತು ಸಮೃದ್ಧಿ (ಲೌಕಿಕ ಮತ್ತು ಅಲೌಕಿಕ ಎರಡೂ) ನೀಡುವ ಲಕ್ಷ್ಮಿಯ ರೂಪವೇ ಮೈಮನಸ್ಸಿಗೆ ಶಾಂತಿ ನೀಡುತ್ತದೆ. ಆಕೆಯ ರೂಪದಲ್ಲಿ ಬದುಕಿನ ಸೂತ್ರವೂ ಇದೆ. ಧರ್ಮ, ಕಾಮ, ಅರ್ಥ ಮತ್ತು ಮೋಕ್ಷ ಎನ್ನುವ ಹಿಂದೂ ಜೀವನ ಪದ್ಧತಿಯನ್ನು ಸೂಚ್ಯಕವಾಗಿ ಲಕ್ಷ್ಮಿಯ ನಾಲ್ಕು ಕೈಗಳು ಪ್ರತಿಬಿಂಬಿಸುತ್ತವೆ.ಮೊಗದಲ್ಲಿ ಪ್ರಸನ್ನತೆ ಬಳಲಿ ಕೂತ ಭಕ್ತರಿಗೆ ನಿರಾಳತೆಯನ್ನು ನೀಡುತ್ತದೆ. ಲಕ್ಷ್ಮಿಯ ಜತೆಗೆ ಎರಡು ಆನೆಗಳಿದ್ದು, ಅವು ಶಕ್ತಿ ಸಾಮರ್ಥ್ಯದ ದ್ಯೋತಕ. ಆಕೆ ನಿಂತಿರುವ/ಕುಳಿತಿರುವ ಕಮಲವು ನೀರಿನಲ್ಲಿದ್ದರೂ, ಅದಕ್ಕೆ ಅಂಟಿಕೊಂಡಿಲ್ಲ. ಅಂದರೆ, ಲೌಕಿಕ ಬದುಕಿನಲ್ಲಿದ್ದರೂ ಅದಕ್ಕೆ ಮನುಷ್ಯ ಅಂಟಿಕೊಳ್ಳಬಾರದೆಂಬ ಆಧ್ಯಾತ್ಮಿಕ ಅರ್ಥವನ್ನು ಅಲ್ಲಿ ಕಾಣಬಹುದು. ಇನ್ನು ಗೂಬೆ ಕುರಿತಾಗಿ ಸಮಾಜದಲ್ಲಿ ಎಲ್ಲರಿಗೂ ಕೀಳು ಭಾವನೆ. ಆದರೆ, ಮಹಾಲಕ್ಷ್ಮಿಯವಾಹನ ಅದೆಂಬುದು ಬಹುತೇಕರಿಗೆ ಗೊತ್ತಿಲ್ಲ. ಉಡುಪಿಗೆ ಬಂದರೆ, ಲಕ್ಷ್ಮಿ ಸೀರೆಯ ಕೆಂಪು ಬಣ್ಣವು ಕ್ರಿಯಶೀಲತೆಯನ್ನು ಆಕೆ ಧರಿಸಿರುವ ಚಿನ್ನದ ಆಭರಣಗಳು ಸಂತೃಪ್ತಿಯನ್ನು ಪ್ರತಿನಿಧಿಸುತ್ತದೆ.

## ಭಕ್ತರು ಕರೆದರೆ..


ವರಮಹಾಲಕ್ಷ್ಮಿ ವ್ರತದ ರೀತಿನೀತಿ ವಿವರಿಸುವ ಪುಸ್ತಕಗಳು, ಸಿ.ಡಿ.ಗಳು ಮಾರುಕಟ್ಟೆಯಲ್ಲಿವೆ.ವ್ರತದ ಆಚಾರ-ವಿಚಾರ,ಏನನ್ನು ನೈವೇದ್ಯ ಇಡಬೇಕು ಎನ್ನುವಂಥ ಮಾಹಿತಿಗಳು ಅಂತರ್ಜಾಲದಲ್ಲೂ ದಂಡಿಯಾಗಿವೆ.ಇಷ್ಟರ ಹೊರತಾಗಿ, ಪೂಜೆಯ ವಿಧಾನಗಳು ತಪ್ಪಾದವೆಂದೋ, ಏನೋ ಪ್ರಮಾದವಾಯಿತೆಂದೋ, ಏನೋ ಚಿಂತಿಸದಿರಿ... ದೇವಿಗೆ ಅರ್ಪಿಸುವ ಪ್ರಾರ್ಥನೆ ಪ್ರಾಮಾಣಿಕವಾಗಿದ್ದರೆ ಸಾಕು, ಎಂಬುದು ಧರ್ಮಜ್ಞ ಜ್ಞಾನಿಗಳ ಕಿವಿಮಾತು.ಯಾವುದೋ ಕಾರಣಕ್ಕೆ ವ್ರತ ಮಾಡಲಾಗದಿದ್ದರೂ ಚಿಂತೆಯಿಲ್ಲ. ನವರಾತ್ರಿಯ ಶುಕ್ರವಾರದಂದೂ ಮಾಡಬಹುದು."ಭಾಗ್ಯದ ಲಕ್ಷ್ಮಿ ಬಾರಮ್ಮ ನಮ್ಮಮ್ಮಾ ಶ್ರೀ ಸೌಭಾಗ್ಯ ಲಕ್ಷ್ಮಿ ಬಾರಮ್ಮಾ..." ಎಂದು ಶುದ್ಧಾತ್ಮರು ಕರೆದರೆ, ಬಾರದೇ ಇರುತ್ತಾಳೆಯೇ ಹರಿಪ್ರಿಯೇ? ಸೋಲೊಪ್ಪದೇ ಛಲದಿಂದ ದುಡಿದರೆ, ಲಕ್ಷ್ಮಿಯನ್ನು ಕರೆಯುವುದೇ ಬೇಕಿಲ್ಲ. ಅವಳೇ ಬಂದು ಮನೆ ಸೇರುತ್ತಾಳೆ!

## ಸಿರಿ ದೇವಿಯ ಒಲೈಕೆ

ಶ್ರೀಲಕ್ಷ್ಮಿ ಸಂಪತ್ತಿನ ಆದಿ ದೇವತೆ ಸ್ಥಿತಿಕಾರಕ ಮಹಾವಿಷ್ಣುವಿನ ಪತ್ನಿಯಾದ ಈಕೆಯ ಕೃಪಾಕಟಾಕ್ಷವಿಲ್ಲದೆ ಲೌಕಿಕ ಬದುಕು ಸಾಗದು. ಅಷ್ಟೇ ಅಲ್ಲ, ಆಧ್ಯಾತ್ಮಿಕ ಬದುಕಿಗೆ ಪೂರಕವಾಗಿಯೂ ಈಕೆಯ ಕಾರುಣ್ಯ ಅಗತ್ಯ. ಏಕೆಂದರೆ ಭಾರತೀಯ ಚಿಂತನೆಯ ಪ್ರಕಾರ ಸಂಪತ್ತು ಎಂದರೆ ಕೇವಲ ಹಣವಲ್ಲ. ಧನ ಸಂಪತ್ತಿನ ಹಾಗೆಯೇ ಧಾನ್ಯ ಸಂಪತ್ತು, ಜ್ಞಾನ ಸಂಪತ್ತು,ಸಂತಾನಾದಿ ಅಷ್ಟ ಸಂಪತ್ತುಗಳು ಸಾರ್ಥಕ ಬದುಕಿಗೆ ಅಗತ್ಯವೆಂಬ ನಂಬಿಕೆ ನಮ್ಮ ಸಂಸ್ಕೃತಿಯಲ್ಲಿದೆ.

## ಸಮುದ್ರ ರಾಜಾ ತನಯಾ

ಶ್ರೀಲಕ್ಷ್ಮಿ ಅವತರಿಸಿದ್ದು ಸಮುದ್ರಮಥನ ಕಾಲದಲ್ಲಿ.ಕ್ಷೀರಸಾಗರ ಮಥಿಸಿದಾಗ ಉದಿಸಿ ಬಂದ ಅಮೂಲ್ಯವ್ಯಕ್ತಿ-ವಸ್ತುಗಳಲ್ಲಿ ಲಕ್ಷ್ಮಿ ದೇವಿಯೂ ಒಬ್ಬಳು.ಆದ್ದರಿಂದ ಈಕೆಯನ್ನು ಸಮುದ್ರರಾಜನ ಮಗಳೆಂದು ಪರಿಗಣಿಸಲಾಗುತ್ತದೆ. ಈ ಕಾರಣದಿಂದಲೇ ಈಕೆ ಚಂದಿರನ ಸಹೋದರಿಯೂ



ಹೌದು.ಹಾಗೆಯೇ ಅಸುರ ಗುರು ಶುಕ್ರಾಚಾರ್ಯನಿಗೂ ಈಕೆ ಭಗಿನಿಯಾಗುತ್ತಾಳೆ.ಸಮುದ್ರವು ಮುತ್ತು ಮಣಿಯಾದಿ ಅಪಾರ ಸಂಪತ್ತನ್ನು ಒಡಲಲ್ಲಿಟ್ಟುಕೊಂಡ ‘ರತ್ನಗರ್ಭ’.ಲಕ್ಷ್ಮಿ ಈ ಎಲ್ಲ ಸಂಪತ್ತಿನ ಒಡತಿ. ಸಮುದ್ರ ಮಥನದಿಂದ ದೊರೆತ ಕೌಸ್ತುಭಮಣಿಯನ್ನು ಮಹಾವಿಷ್ಣುವು ಧರಿಸುತ್ತಾನೆ. ನಂತರ ಅವತರಿಸಿ ಬರುವ ಲಕ್ಷ್ಮಿಯು ವಿಷ್ಣುವಿನ ಕೊರಳಿನ ಮಾಲೆ ಹಾಕುವ ಮೂಲಕ ಆತನನ್ನು ವರಿಸುತ್ತಾಳೆ. ವಾಸ್ತವದಲ್ಲಿ ಈಕೆ ಭೃಗುಮುನಿಯ ಮಗಳೆಂದೂ ವಿಷ್ಣುವನ್ನು ವರಿಸಲಿಕ್ಕಾಗಿಯೇ ತಪಸ್ಸುಗೈದು ಸಮುದ್ರ ಮಥನ ಕಾಲದಲ್ಲಿ ದೇಹ ತಳೆದು ಬರುತ್ತಾಳೆಂದೂ ಕೆಲವು ಪುರಾಣಗಳು ಹೇಳುತ್ತವೆ.

ಆದರೆ ಲಕ್ಷ್ಮೀದೇವಿಯು ವೈರುಧ್ಯಗಳನ್ನು ಒಡಲುಗೊಂಡವಳಂತೆ ತೋರುತ್ತಾಳೆ.ಈಕೆಯನ್ನು ವೈರುಧ್ಯಗಳ ರಾಜಿ ರೂಪ ಎಂತಲೂ ಹೇಳಬಹುದೇನೋ ಏಕೆಂದರೆ ಸ್ವತಃ ಸಂಪತ್ತು ಸ್ವಯಂಪ್ರಭೆಯುಳ್ಳವಳೂ ಆದ ಲಕ್ಷ್ಮಿಯು ವಿಷ್ಣುವಿನ ಪದತಲದಲ್ಲೆ ಧನ್ಯತೆಯನ್ನು ಅನುಭವಿಸುವಂಥವಳು.ಭೃಗು ಮುನಿಯು ವಿಷ್ಣುವಿನ ಎದೆಗೆ ಒದ್ದಾಗ ವಿಷ್ಣುವು ಸುಮ್ಮನಿದ್ದನೆಂದು ಕೋಪಿಸಿಕೊಂಡು ವೈಕುಂಠ ತೊರೆದು ಹೋಗುತ್ತಾಳೆ. ಆದರೆ ಇದೇ ಲಕ್ಷ್ಮಿ ರಾಮಾವತಾರ ಕಾಲದಲ್ಲಿ ಸೀತೆಯಾಗಿ ಅವತರಿಸಿ ತಾಳ್ಮೆ,ಸಹನೆಗಳ ಸಾಕಾರ ಮೂರ್ತಿಯಾಗಿ ಕಂಗೊಳಿಸುತ್ತಾಳೆ.

## ಜ್ಞಾನಪ್ರತೀಕ

ಲಕ್ಷ್ಮಿ ಇದ್ದಲ್ಲಿ ಸರಸ್ವತಿ ಇರುವುದಿಲ್ಲ ಎನ್ನುವುದೊಂದು ಮಾತು ಜನ ಸಾಮಾನ್ಯರ ನಡುವೆ ಬಳಕೆಯಲ್ಲಿ ಇರುವಂಥದ್ದು. ಇದರರ್ಥ ಕೇವಲ ಜ್ಞಾನದ ಹಿಂದೆ ಓಡುವವರ ಬಳಿ ಹಣ ಇರುವುದಿಲ್ಲ ಎಂದು. ಹಾಗೆಯೇ ಕೆಲವು ಧನಿಕರು ವಿದ್ಯಾರ್ಜನೆಗೆ ಗಮನ ಕೊಡದೆ ಹೋಗುವುದರಿಂದಲೂ ಈ ಮಾತು ಚಾಲ್ತಿಗೆ ಬಂದಿರಬಹುದು.ಆದರೆ ವಾಸ್ತವದಲ್ಲಿ ಲಕ್ಷ್ಮಿಗೂ ಜ್ಞಾನಕ್ಕೂ ನಂಟಿದೆ.ಲಕ್ಷ್ಮಿಯ ಹೆಸರಿಗೆ ಬೆಸೆದುಕೊಂಡಿರುವ ಎಂಬ ಪದವು ಜ್ಞಾನವನ್ನು ಸೂಚಿಸುತ್ತದೆ. ಶ್ರೀ ಎನ್ನುವುದು ಅತ್ಯಂತ ಶುಭ ಸೂಚಕ, ಮಂಗಳಕರವಾದ ಶಬ್ದ ಶ್ರೀಯು ಪರ ಬ್ರಹ್ಮದ ಸ್ತ್ರೀ ಸ್ವರೂಪ. ಯಾವುದೇ ಮಂತ್ರ ಸಂಪನ್ನಗೊಳ್ಳುವುದು ‘ಶ್ರೀ’ ಇಂದ.ಆದ್ದರಿಂದ ಜ್ಞಾನಾರ್ಜನೆ ಯಲ್ಲಿ ಶ್ರೀ ಅಥವಾ ಲಕ್ಷ್ಮಿಗೆ ಮನ್ನಣೆಯ ಸ್ಥಾನವಿದೆ.


### ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ



# ಶ್ರೀ ಕೃಷ್ಣ ಜನ್ಮಾಷ್ಟಮಿ

ಶ್ರೀಮತಿ- ಸುಮಾಚಂದ್ರಶೇಖರ್

'ಶ್ರೀಕೃಷ್ಣ' ಈ ಹೆಸರೇ ಒಂದು ಅನುಪಮ ಆನಂದದ ಅನುಭವ. ಅವನ ವ್ಯಕ್ತಿತ್ವವೇ ಒಂದು ವರ್ಣಮಯ ಹೂ ರಾಶಿ. ಮಧ್ಯರಾತ್ರಿ ಹಬ್ಬ: ಕೃಷ್ಣ ಹುಟ್ಟಿದ್ದು ಮಧ್ಯರಾತ್ರಿ ಎಂಬ ಪ್ರತೀತಿ ಇರುವ ಕಾರಣ, ಮಧ್ಯರಾತ್ರಿಯಲ್ಲಿಯೇ ಈತನ ಪೂಜೆ ಜೋರು.ಅಕ್ಕಿ ಹಿಟ್ಟು ಮತ್ತು ನೀರು ಮಿಶ್ರಣದಿಂದ ಕೃಷ್ಣನ ಪುಟ್ಟ ಪುಟ್ಟ ಹೆಜ್ಜೆಯ ಗುರುತನ್ನು ಮೂಡಿಸಿ ಕೃಷ್ಣನ ಆಗಮನವನ್ನು ಸಾಂಕೇತಿಕವಾಗಿ ಸೃಷ್ಟಿಸುತ್ತಾರೆ.

'ಕೃಷ್ಣ'ಎಂದರೆ ಏನೋ ಸೆಳೆತ, ಸಂಭ್ರಮ ಗದ್ದಲ, ಸಂತೋಷ, ಆತ್ಮೀಯತೆ, ನಮ್ಮವನೆಂಬ ವ್ಯಾಮೋಹ ನಮ್ಮನ್ನು ಸಹಜವಾಗಿ ಆವರಿಸುತ್ತದೆ. ಏಕೆಂದರೆ, ಈ ಕೃಷ್ಣ ನೋವಿನಲ್ಲಿರುವವರ ಕಣ್ಣೀರು ಒರೆಸಿದ. ಶೋಷಿತರ ಪಕ್ಷಪಾತಿಯಾದ, ಸಮಷ್ಟಿಯ ಸುಖವನ್ನು ಕಾಂಕ್ಷಿಸಿದ, ನವಿಲುಗರಿ ಧರಿಸಿ ಬಿದಿರ ಓಟೆಯಿಂದ ಸುಶ್ರಾವ್ಯ ಸ್ವರ ಹೊರಡಿಸಿ ಜನಮಾನಸವನ್ನು ಬಂಧುವಾಗಿ ಸ್ಪರ್ಶಿಸಿದ, ನಮ್ಮವನೇ ಆದ, ಅದೇ ಕೃಷ್ಣ ಜನಪ್ರಿಯತೆಗೆ ಕಾರಣವಾಯಿತು.

ದನ ಕಾಯುವ ಬಾಲಕನೊಬ್ಬ ಕೊಳಲನ್ನೂದುತ್ತಾ ವೃಂದಾವನದಲ್ಲಿ ಗೋವುಗಳ, ಗೋಪಾಲರ, ಗೋಪಿಯರ ಮನ ಗೆದ್ದ ತನ್ನನ್ನು ಪ್ರೀತಿಸುವವರಿಗಾಗಿ ಬದುಕಿದ - ಬಾಳಿದ. ತುಂಟಾಟದಿಂದ ಬಾಲ್ಯವನ್ನು ಆಕರ್ಷಣೀಯವನ್ನಾಗಿಸಿಕೊಂಡು ಮನುಕುಲದ ಪ್ರಿಯಕರನಾದ.

"ಪರೋಪಕಾರಾರ್ಥಂ ಇದಂ ಶರೀರಂ" ಎಂಬ ಆರ್ಷವಾಣಿಯಂತೇ ತನ್ನ ಬದುಕನ್ನು ಸವೆಸಿದ ಶ್ರೀ ಕೃಷ್ಣ-ಓರ್ವ ಪ್ರಖಂಡ ಪಂಡಿತ. ಅತ್ಯದ್ಭುತ ರಾಷ್ಟ್ರೀಯವಾದಿ.ಆಧ್ಯಾತ್ಮಿಕ ಸಾಧಕ ಸನಾತನ ಧರ್ಮದ ನ್ಯಾಯಕ್ಕಾಗಿಯೇ ಹೋರಾಡಿ ಸತ್ಯಕ್ಕೆ-ಅಚಿತಿಮ ಜಯವೆಂದು ಘೋಷಿಸಿದ ಸಮಾಜವಾದಿ.

ಕೃಷ್ಣನಿಗೆ ಕೃಷ್ಣನೇ ಸಾಟಿ. ಅವನೇರಿದ ಎತ್ತರಕ್ಕೆ ಯಾರೂ ಏರಲಾರರು ಎನ್ನುವುದು ನಿಜವಾದರೂ ಇದು ನಾವು ನೋಡುತ್ತಿರುವ ಆಂತರಿಕ - ಬಾಹ್ಯ- ಭಯೋತ್ಪಾದನೆ - ಭ್ರಷ್ಟ ರಾಜ ಕಾರಣದಿಂದ, ಇಡೀ ದೇಶವೇ ಕಂಗೆಟ್ಟಿದೆ. ಇದನ್ನು ತೊಡೆದು ಹಾಕಲು ಮತ್ತೊಬ್ಬ ಶ್ರೀಕೃಷ್ಣನ ಅವತಾರವನ್ನು ನಿರೀಕ್ಷಿಸುವುದು ಸಹಜ. ಆದರೂ ಅವನು ತೋರಿಸಿದ ದಾರಿ ಕಣ್ಣಮುಂದಿದೆ.

ಲೋಕಮುಖಿಯಾಗುತ್ತಾ ಭರತ ವರ್ಷದ ವ್ಯಾಪ್ತಿಗೆ ವ್ಯಾಪಿಸಿ ಒಬ್ಬ ಸಾಧಕ, ಆತ್ಮವಿಶ್ವಾಸಿ,ಮಹತ್ವಾಕಾಂಕ್ಷಿ ಮನುಷ್ಯ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಏನನ್ನೆಲ್ಲ ಸಾಧಿಸಬಹುದೋ ಅದನ್ನೆಲ್ಲ ಬಾಂಧವ್ಯ ಬಂಧುರತೆಯಿಂದ ಮನಮೋಹಕವ್ಯಕ್ತಿತ್ವದಿಂದ, ಅದ್ಭುತ ಚಿಂತನೆಗಳ ಮೂಲಕ, ಕುಟಿಲ ಕಾರಸ್ಥಾನಗಳ ಸಕಾಲಿಕ ಬಳಕೆಯಿಂದ, ಜನಪ್ರೀತಿಯಿಂದ ಪಡೆದ.ಅಣ್ಣ ಬಲರಾಮನೇ ರಾಜನಾಗಿ ತಾನು ಯುವರಾಜನಾಗಿಯೇ ಉಳಿದ. ಹಸ್ತಿನಾವತಿಯ ಚಕ್ರವರ್ತಿ ಪೀಠಕ್ಕೆ ಧರ್ಮರಾಯನೇ ಹಕ್ಕುದಾರನೆಂದು ಸರ್ವಪ್ರಯತ್ನದಿಂದ ಪ್ರತಿಷ್ಠಾಪಿಸಿದ.ಇದು ಕೃಷ್ಣನ ಮೇರು ವ್ಯಕ್ತಿತ್ವ ಇದರ ಮುಂದೆ ನಾವು ಕುಬ್ಜರಾಗುತ್ತೇವೆ. ಸ್ವಾರ್ಥರಾಹಿತ್ಯ ನೈಜ ಹೃದಯವಂತನೊಬ್ಬ ಹೇಗೆ ಜನಪ್ರಿಯನಾಗುತ್ತಾನೆ ಎಂಬುದಕ್ಕೆ ಕೃಷ್ಣ ಒಂದು ಉದಾಹರಣೆ. ಇದು ಅಂದಿಗೂ- ಇಂದಿಗೂ - ಎಂದೆಂದಿಗೂ ಪ್ರಸ್ತುತ. ಆದುದರಿಂದ ನಮ್ಮ ಮನೆಯ ಬಾಲಕ, ನಮ್ಮ ವಿಮೋಚಕ,ನಮ್ಮ ರಕ್ಷಕ, ನಮ್ಮವನೇ ಆದ 'ವಾಸುದೇವ'ಈ ಯುಗಾರಂಭದಲ್ಲಿ ನಿರೀಕ್ಷೆಯ ಮಾನವತಾವಾದಿಯಾಗಿ ಸ್ವೀಕರಿಸಲ್ಪಡಲೇ ಬೇಕಾದವನಾಗುತ್ತಾನೆ.ಆದುದರಿಂದ 'ಕೃಷ್ಣ' ಎಂಬುದು ಸಾರ್ವಕಾಲಿಕ, ಸರ್ವಮಾನ್ಯ ವ್ಯಕ್ತಿತ್ವ, ಮಾನವ ಸಾಧನೆಯ ಸೋಪಾನಗಳಿಗೆ ಕೃಷ್ಣನ ಜೀವನಾವಲೋಕನ ಒಂದು ಮಾರ್ಗಸೂಚಿ.

## ಕೃಷ್ಣ ಯುಗ ಪ್ರವರ್ತಕ

ಸ್ವಾರಸ್ಯ, ಮಾಧುರ್ಯ, ಲಾಲಿತ್ಯಗಳ ಸಮನ್ವಯತೆಯೊಂದಿಗೆ ಶೂರ,ಪರಾಕ್ರಮಿ,ವಿಮೋಚಕ ನಾಯಕನಾಗಿ ಮೆರೆದು,ಮಹಾಪುರುಷನೆನ್ನಿಸಿ ರಾಜನೀತಿಜ್ಞ ತತ್ವಜ್ಞಾನಿಯಾಗಿ ರಾರಾಜಿಸಿ 'ಯುಗಾಂತದ ಯುಗ ಪ್ರವರ್ತಕ'ನಾಗಿ ನಮ್ಮ ದೇಶದ ದೇವತಾ ಸಂದೋಹದಲ್ಲಿ ವಿಜೃಂಭಿಸುವ ವಿಸ್ಮಯ ಪುರುಷ 'ಕೃಷ್ಣ ವಾಸುದೇವ'.

ದ್ವಾಪರ ಯುಗಕ್ಕೆ ಮೌಲ್ಯಯುತ ಅಂತ್ಯವನ್ನು ಬರೆದ ಭಗವಾನ್ ವಾಸುದೇವ ಜಗತ್ತಿನ ಕತ್ತಲೆಯನ್ನು ಕಾಣುತ್ತಾ ಸೆರೆಮನೆಯಲ್ಲಿ ಜನಿಸಿದ ಸಗಣಿ - ಗಂಜಳಗಳ ಗಂಧದಲ್ಲಿ. ಹಾಲು, ಬೆಣ್ಣೆ, ಮೊಸರು, ತುಪ್ಪಗಳ ಪೌಷ್ಟಿಕತೆಯಲ್ಲಿ ಬೆಳೆದ. ಅತಿಶಯವಾದ ಗೋನಿಕಾಯ, ಗೋಪಾಲಕರು - ಗೋಪಿಯರು ಒಡನಾಡಿಗಳು. ನಂದ ಗೋಕುಲದಲ್ಲಿ ಪ್ರೀತಿ, ಪ್ರೇಮ, ಅನುರಾಗಗಳಿಗೆ ವರ್ಣರಂಜಿತ ವ್ಯಾಖ್ಯೆ ಹಾಡಿದ ಕೃಷ್ಣ ಕನ್ನನೆಂದ ಆತ್ಮೀಯನಾದ, ಗೋವಿಂದನಂದಮಾನ್ಯನಾದ, ಗೋಪಾಲ ಕೃಷ್ಣನೇ ಆದ.

ತುಂಟತನದ ಬಾಲ್ಯದಿಂದ ಗೀತಾಚಾರ್ಯನ ಎತ್ತರಕ್ಕೆ ಏರಿದ ಕೃಷ್ಣ ಆಸಕ್ತಿ-ವಿರಕ್ತಿ, ಪ್ರವೃತ್ತಿ-ನಿವೃತ್ತಿ. ಸ್ವೀಕಾರ-ತಿರಸ್ಕಾರ, ಪ್ರೀತಿ-ದ್ವೇಷ, ಬಾಂಧವ್ಯ-ವೈರ, ಮಾಧುರ್ಯ-ಕಹಿಗಳಂತಹ ಹತ್ತಾರು ವೈರುಧ್ಯಗಳ ವಿವೇಚಿಸಲಾಗದ ವ್ಯಕ್ತಿತ್ವ. ಈ ವಿಪರ್ಯಾಸಗಳು ಬದುಕಿನ ಸಾರ್ಥಕತೆಗೆ, ಜನಪದರ ಉದ್ಧಾರಕ್ಕೆ, ಅದೇ ಕೃಷ್ಣ ಆರಾಧನಾ ಮನೋಧರ್ಮ ಬೆಳೆಯಲು ನಾಂದಿ. ಈ ಬಹುಮಾನ್ಯ ವ್ಯಕ್ತಿತ್ವ ಹುಟ್ಟಿದ ದಿನ ಇಂದು.

ಗೌಜಿ - ಗದ್ದಲ, ಆಟ- ಪಾಠ, ವಿನೋದಗಳೇ ಪ್ರಧಾನವಾಗಿ ಗೋಪಾಲಕರು ಆಚರಿಸಿದ ಕೃಷ್ಣ ಲೀಲೋತ್ಸವವೇ ಗೀತಾಚಾರ್ಯ ಕೃಷ್ಣನ ಜನ್ಮದಿನಾಚರಣೆಯ ಅವಿಭಾಜ್ಯ ಅಂಗವಾಯಿತು. ರೂಢಿಗೊಂಡಿತು. ಎಲ್ಲಿ ಗೀತಾಚಾರ್ಯ - ಎಲ್ಲಿ ಲೀಲೋತ್ಸವ! ಕೊಳಲಿನ ಸುಮನೋಹರ ಸ್ವರ. ಗೋಪ-ಗೋಪಿಯರ ನರ್ತನ, ರಾಸಕ್ರೀಡೆ, ಕೋಲಾಟಗಳ ನೃತ್ಯ ವೈಭವ ಯಮುನಾ ನದಿಯ ಮರಳಿನಲ್ಲಿ ಬಣ್ಣದ ಹಬ್ಬ, ಗೋಪರ ಮನೆಗಳಲ್ಲಿ ಗೋಪಿಯರ ಕಣ್ತಪ್ಪಿಸಿ ಹಾಲು - ಮೊಸರು - ಬೆಣ್ಣೆಗಳ ಅಪಹರಣಗಳೇ ಕೃಷ್ಣ ಮೇರುವ್ಯಕ್ತಿತ್ವಕ್ಕೆ ಪ್ರಭಾವಳಿಯಾಗಿ ನಿಲ್ಲುವಂತಹವು. ಈ ಬಾಲ್ಯದ ಸಂಭ್ರಮ ರಹಿತ ಕೃಷ್ಣನ ವ್ಯಕ್ತಿತ್ವ ಕಲ್ಪಿಸಲಾಗದುದು. ಆದುದರಿಂದ ಕೃಷ್ಣಲೀಲೋತ್ಸವ ಬದುಕಿನ ಮೂಲವನ್ನು ಆರಂಭವನ್ನು ಮಣ್ಣಿನ ಮೂಲ ಸಂಸ್ಕೃತಿಯನ್ನು ನೆನಪಿಸುವಂತಹದು. ಸಂಸ್ಕೃತಿ-ಧರ್ಮ ನೆಲೆಗೊಂಡಿತು ಅಥವಾ ಮರು ಪರಿಶೀಲನೆಗೊಳಗಾಯಿತು. ಅಂತೆಯೇ ಲೀಲೋತ್ಸವವೂ ಸಾಂಸ್ಕೃತಿಕವಾದ ಉತ್ಸವವೇ ಆಯಿತು. ಏಕೆಂದರೆ ಕೃಷ್ಣ ಎಂದರೆ ಉತ್ಸಾಹ, ಅದರಿಂದ ಹುಟ್ಟುವುದು ಅಥವಾ ನಡೆಯುವುದು ಉತ್ಸವ. ಕೃಷ್ಣ, ಕೃಷ್ಣನ ಬದುಕೇ ಒಂದೇ ಸುಂದರ ಉತ್ಸವ, ಲೀಲೋತ್ಸವ ತಾನೇ?





ಸತ್ಯದಿಂದ ಯಾವತ್ತೂ ದೂರ ಸರಿದವನಲ್ಲ: ಶ್ರೀಕೃಷ್ಣನು ತಾನು ಯಾವುದೇ ಸಂದರ್ಭದಲ್ಲಿ ಸುಳ್ಳಾಡುವುದಿಲ್ಲ ಎಂದು ನಾನಾ ಪ್ರಸಂಗಗಳಲ್ಲಿ ಘೋಷಿಸಿದ್ದಾನೆ. ಪಾಂಡವರು ವನವಾಸದಲ್ಲಿದ್ದಾಗ ಮುಂದೆ ರಾಜ್ಯವನ್ನು ಒದಗಿಸಿ ಕೊಡುವುದಾಗಿ ದ್ರೌಪದಿಗೆ ಆಶ್ವಾಸನೆ ನೀಡಿದ ಕೃಷ್ಣನು, ಒಂದೊಮ್ಮೆ ತನ್ನ ಮಾತು ಸುಳ್ಳಾಗುವುದಾದರೆ ಆಕಾಶವೇ ಕೆಳಗುರಳಿಸಿ ಹಿಮಾಲಯವು ಬಂದೀತು. ಭೂಮಿಯು ಒಡೆದೀತು. ಸಮುದ್ರವು ಒಣಗೀತು ಎಂದು ಶಪಥ ಮಾಡುತ್ತಾನೆ. ಅಂತೆಯೇ ಉತ್ತರೆಯ ಮಗ ಬ್ರಹ್ಮಶಿರೋಸ್ತ್ರದ ಆಕ್ರಮಣಕ್ಕೊಳಗಾಗಿ ಮೃತವಾದಾಗ ಅಳುತ್ತಿದ್ದ ಉತ್ತರೇಯ ಮೃತ ಮಗುವನ್ನು ಬದುಕಿಸುವುದಾಗಿ ಆಶ್ವಾಸನೆ ನೀಡುತ್ತ ಪರಿಸರದ ಪ್ರಸಂಗದಲ್ಲೂ ನಾನು ಸುಳ್ಳಾಡತಕ್ಕವನಲ್ಲ ಎಂದು ಹೇಳಿದ್ದಾನೆ. 'ಸಜ್ಜನರಿಗೆ ಹಿತವಾದುದೇ ಸತ್ಯ' ಎಂದು ಸತ್ಯದ ತಿರುಳನ್ನು ಎತ್ತಿ ತೋರಿಸುವ ಮೂಲಕ ತಾನು ಅಂತಹ ಸತ್ಯಮಾತಿಗೆ ಪ್ರಾಶಸ್ತ್ಯ ಕೊಡುವುದಾಗಿ ಸೂಚಿಸಿದ್ದಾನೆ.

### ಅಸಾಮಾನ್ಯ ಜಗದ್ಗುರು :

ಪಾಂಡವರ ದೂತನಾಗಿ ಹಸ್ತಿನಾಪುರಕ್ಕೆ ಹೋಗಿ ಕೌರವ ಸಭೆಯಲ್ಲಿ ಕೌರವ ಪಾಂಡವ ಸಂಧಾನದ ಕುರಿತು ಮಾತನಾಡಿದ ಸಂದರ್ಭವನ್ನು ಪ್ರಸ್ತಾವಿಸುವಾಗ ಭಾಗವತದಲ್ಲಿ ಕೃಷ್ಣನು 'ಜಗದ್ಗುರು' ಎಂದು ಉಲ್ಲೇಖಿಸಲ್ಪಟ್ಟಿದ್ದಾನೆ. ಶ್ರೀಕೃಷ್ಣನು ಅರ್ಜುನನಿಗೆ ಭಗವದ್ಗೀತೋಪದೇಶವನ್ನೂ ಉದ್ಧವನಿಗಿರುವ ಗೀತೋಪದೇಶವನ್ನೂ ನೀಡಿ ಅವನ ಪಾಲಿಗೆ ನೇರ ಗುರುವಾಗಿ ಉಳಿದ ಎಲ್ಲ ದೇಶಕಾಲದ ಸಾತ್ವಿಕರಿಗೂ ಆ ಗೀತೆಗಳ ಉಪದೇಶ ತಲುಪುವಂತೆ ಮಾಡಿ ಪರೋಕ್ಷವಾಗಿ ಎಲ್ಲಾ ಸಾತ್ವಿಕರಿಗೂ ಗುರು ಎನಿಸಿದ್ದಾನೆ. ದೇವತೆಗಳಿಗೂ ನೀನಲ್ಲದೆ ಬೇರೆ






ಉಪದೇಶಕರನ್ನು ಕಾಣಲಾರೆ ಎಂದು ಉದ್ಧವನು ಶ್ರೀಕೃಷ್ಣನಲ್ಲಿ ಸಲ್ಲಿಸುವ ಪ್ರಾರ್ಥನೆ. ಕೃಷ್ಣನ ಜಗದ್ಗುರುತ್ವವನ್ನು ಒಂದು ರೀತಿಯಿಂದ ಪ್ರತಿಪಾದಿಸಿದರೆ ಎಲ್ಲರ ಹೃದಯದಲ್ಲಿದ್ದು ಕೊಂಡು ಸ್ಮರಣೆ, ಜ್ಞಾನ, ಅಜ್ಞಾನಗಳನ್ನು ನೀಡುವವನು ನಾನೇ ಪ್ರತಿಪಾದಿಸಿದರೆ ಎಲ್ಲರ ಹೃದಯಲ್ಲಿದ್ದುಕೊಂಡು ಸ್ಮರಣೆ, ಜ್ಞಾನ, ಅಜ್ಞಾನಗಳನ್ನು ನೀಡುವವನು ನಾನೇ ಎಂಬ ಗೀತಾಚಾರ್ಯನ ಮಾತು ಅವನ ಗುರುತ್ವವನ್ನು ಮತ್ತೊಂದು ರೀತಿಯಿಂದ ಸಮರ್ಥಿಸುತ್ತದೆ.

ದಶಾವತಾರಗಳನ್ನು ಚಿಂತನೆಯಲ್ಲಿ ಇನ್ನಷ್ಟು ಮಂಥಿಸಿದಾಗ, ನಮಗೆ ತೋರುವುದೇನೆಂದರೆ ಮತ್ಸ್ಯ, ಕೂರ್ಮ, ವರಾಹ ಹಾಗೂ ನಾರಸಿಂಹ ಅವತಾರಗಳು ಮಾತನಾಡುವುದೇ ಇಲ್ಲ. ಬಾಯಿ ಇಲ್ಲ, ಮೌನಿಕೃತಿ ಮಾತ್ರ, ವಾಮನನಿಂದ ಮಾತು ಪ್ರಾರಂಭವಾಗುತ್ತದೆ ತನ್ನ ಪುಟ್ಟ ಪುಟ್ಟ ಹೆಜ್ಜೆಗಳಿಂದ ಮೂರು ಪಾದಗಳ ಅಳತೆಯ ಭೂದಾನವನ್ನು ಕೊಡಲು ಕೇಳಿದ 'ಮಾತು'. ಈಭೂದಾನದ ಯಾಚನಾಕ್ರಿಯೆಯು ಅರ್ಥ ಪೂರ್ಣವಾಗಿದೆ. ಬೆಳೆಯುತ್ತಿರುವ ಮಾನವ ಕುಲದ ವಸತಿಗಾಗಿ, ಅವರ ಪುನರ್ವಸತಿಗಾಗಿ, ವಿಸ್ತಾರವಾದ ಜಾಗೆಯು ಅವಶ್ಯವಾದುದರಿಂದ, ವಾಮನಾವತಾರವು ದಾನ ರೂಪದಲ್ಲಿ ಜಾಗೆಯನ್ನು ಬಲಿಚಕ್ರವರ್ತಿಯಿಂದ ವಿಸ್ತಾರವಾದ ಜಾಗೆಯು ಅವಶ್ಯವಾದುದರಿಂದ, ವಾಮನಾವತಾರವು ದಾನರೂಪದಲ್ಲಿ ಜಾಗೆಯನ್ನು ಬಲಿಚಕ್ರವರ್ತಿಯಿಂದ ಪಡೆದು ಈ ಭೂತಲವನ್ನು ಆಕ್ರಮಿಸಿತು. ಹಾಗೂ ಬೆಳೆಯುತ್ತಿದ್ದ ಜನಸಂಖ್ಯೆಗೆ ಅನುಕೂಲ ಮಾಡಿಕೊಟ್ಟಿತು.

# ಪುಸ್ತಕ ವಿಮರ್ಶೆ




**ಪುಸ್ತಕದ ಹೆಸರು :**
ಶ್ರೀಮತಿ ಅಂಬಾಬಾಯಿ ವಿರಚಿತ
ಶ್ರೀರಾಮಕಥಾಮೃತ ಕಾವ್ಯ

**ಲೇಖಕರು :** ಡಾ|| ಅನಂತಪದ್ಮನಾಭರಾವ್,

**ದೂರವಾಣಿಸಂಖ್ಯೆ:** 9449380915

**ಪುಟಗಳು :** 677

**ಬೆಲೆ :** ರೂ.275/-

**ಮುದ್ರಣ:** ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆ ಟ್ರಸ್ಟ್ (ರಿ)., ಬೆಂಗಳೂರು-560018

ಹೊಸಗನ್ನಡ ಕಾಲಘಟ್ಟದಲ್ಲಿ ಅಂದರೆ 19 ಮತ್ತು 20 ನೆಯ ಶತಮಾನಗಳಲ್ಲಿ ಹಳೆಯ ಮೈಸೂರು ಪ್ರಾಂತ್ಯದಲ್ಲಿ ದಾಸಕೂಟವು ತನ್ನ ನೆಲೆಯನ್ನು ಕಂಡುಕೊಂಡಿತು. ಬೆಂಗಳೂರು ದೇವರಾಯನ ದುರ್ಗ,ಚಿತ್ರದುರ್ಗ ಪ್ರಾಂತ್ಯಗಳಲ್ಲಿ ದಾಸಕೂಟಗಳು ಮರುಹುಟ್ಟು ಪಡೆದವು.


ದಾಸ ಸಾಹಿತ್ಯಕ್ಕೆ ಮಹಿಳೆಯ ಕೊಡುಗೆಯೂ ಇದೆ. ಅದರಲ್ಲೂ ಇತ್ತೀಚಿನ ಕಾಲದಲ್ಲಿ ಮುದ್ದುಮೋಹನದಾಸರಿಂದ ಅಂಕಿತ ಪಡೆದುಕೊಂಡಿರುವ ಮತ್ತೊಂದು ಮೇರು ಪ್ರತಿಭೆ ಎಂದರೆ ಶ್ರೀಮತಿ ಅಂಬಾಬಾಯಿಯವರು.ಇವರು ರಚಿಸಿರುವ ಕೀರ್ತನ ಸಾಹಿತ್ಯಗಾತ್ರದಲ್ಲೂ, ಪಾತ್ರದಲ್ಲೂ,ಮೌಲಿಕವಾಗಿದ್ದು,ಮಹಿಳಾ ಸಾಹಿತ್ಯದಲ್ಲಿ ಉಲ್ಲೇಖನೀಯವಾಗಿದೆ. 'ಗೋಪಾಲ ಕೃಷ್ಣ ವಿಠಲ' ಎಂಬ ಅಂಕಿತವನ್ನು ಅಂಬಾಬಾಯಿಯವರು ಪಡೆದು ಹರಿದಾಸರಾದರು.

ತೀರ್ಥಯಾತ್ರೆ ಮಾಡುವುದು ಅಂಬಾಬಾಯಿಯವರ ಪ್ರಿಯವಾದ ಸಂಗತಿಯಾಗಿತ್ತು. ದುಷ್ಟ ಮನಸ್ಸಿನ ಕಲ್ಮಶವನ್ನು ಕಳೆದು ಶಿಷ್ಯ ಜನರ ಸಹವಾಸದಲ್ಲಿ ಸೃಷ್ಟಿಕರ್ತನ ಭಜನೆ ಮಾಡುತ್ತ ಕಷ್ಟಗಳನ್ನು ಈಡಾಡಲು ತೀರ್ಥಯಾ ಮಾರ್ಗವನ್ನು ಕಂಡುಕೊಂಡರು.ತೀರ್ಥಯಾತ್ರೆಯನ್ನು ಅವರು ವಿಜಯಯಾತ್ರೆ ಎಂದೇ ಕರೆಯುತ್ತಿದ್ದರು.

ಅಂಬಾಬಾಯಿಯವರು ರಚಿಸಿರುವ ದೀರ್ಘ ಕೃತಿಗಳಲ್ಲಿ "ಶ್ರೀರಾಮಕಥಾಮೃತವು" ಒಂದು. ಇದು ಹೆಣ್ಣು ಮಕ್ಕಳಿಗಾಗಿಯೇ ರಚಿತವಾದ ಹಾಡುಗಬ್ಬ. ಅಂದಿನ ಕಾಲದಲ್ಲಿ ಪೂಜೆ, ಪುನಸ್ಕಾರ, ಸಂಪ್ರದಾಯ ದೇವರು ಧರ್ಮಗಳಲ್ಲಿ ನಂಬಿಕೆಯನ್ನು ಕಳೆದುಕೊಳ್ಳುತ್ತಿದ್ದ ಸ್ತ್ರೀ ವರ್ಗದಲ್ಲಿ ರಾಮಾಯಣದ ಮೌಲ್ಯಗಳನ್ನು ಆದರ್ಶಗಳನ್ನು ಪ್ರಸಾರ ಮಾಡುವುದು ಅವರ ಉದ್ದೇಶವಾಗಿತ್ತು. 'ಶ್ರೀರಾಮ ಕಥಾಮೃತ' ಒಂದು ದೀರ್ಘಕಾವ್ಯ ಬಾಲಕಾಂಡ, ಅಯೋಧ್ಯಾಕಾಂಡ, ಅರಣ್ಯಕಾಂಡ, ಕಿಷ್ಕಿಂಧಾ ಕಾಂಡ, ಸುಂದರಕಾಂಡ ಮತ್ತು ಯುದ್ಧಕಾಂಡ - ಈ ವಿಭಾಗ ಕ್ರಮದಲ್ಲಿ 2497 ಕುಸುಮ ಷಟ್ಪದಿಗಳನ್ನು ಕಾವ್ಯ ಒಳಗೊಂಡಿದೆ. ಅಂಬಾಬಾಯಿ ಅವರು ಕಾವ್ಯ ರಚನೆಯನ್ನು ಪ್ರಾರಂಭಿಸಿದ್ದು ಭಾವ ಸಂವತ್ಸರದ ಮಾರ್ಗಶಿರ ಶುದ್ಧ ಬಿದಿಗೆಯಿಂದು ( 8/12/1934) ಅದೇ ಸಂವತ್ಸರದ ಮಾಘ ಶುದ್ಧ ಚತುರ್ದಶಿ( 19/2/1935) ಕಾವ್ಯವನ್ನು ಮುಕ್ತಾಯಗೊಳಿಸಿದ್ದಾರೆ.ಎರಡೂವರೆ ತಿಂಗಳ ಅವಧಿಯಲ್ಲಿ ಈ ದೀರ್ಘಕಾವ್ಯ ಪೂರ್ಣಗೊಂಡಿದೆ.

ಈ ಕೃತಿಯಲ್ಲಿ ಉದಾತ್ತವಾದ ವಸ್ತು ಸಂವಿಧಾನ, ದೀರ್ಘವಾದ ಕಥಾ ಚೌಕಟ್ಟು, ಭಾಷೆಯ ಬಳಕೆಯಲ್ಲಿ ಪರಿಪಕ್ವತೆ, ಜನಪ್ರಿಯ ಹಾಡುಗಬ್ಬದ ಶೈಲಿ ಧೀರೋದಾತ್ತ ನಾಯಕ-ನಾಯಕಿಯರಿಂದ ಕೂಡಿದ ವಿಶಾಲವಾದ ಪಾತ್ರ, ಪ್ರಪಂಚ, ವರ್ಣನೆ ಮತ್ತು ಉಪಕತೆಗಳ ನಿರ್ವಹಣೆಯಲ್ಲಿ ಉಚಿತಾನುಚಿತ ವಿವೇಕ, ಚುರುಕಾದ ಸಂಭಾಷಣೆಗಳು, ಅಡೆ - ತಡೆಯಿಲ್ಲದೆ ಸಾಗುವ ಕಥನ ಕಲೆ, ಛಂದಸ್ಸಿನ ನಿರರ್ಗಳತೆ, ಸಾಂದರ್ಭಿಕ ನೀತಿ ನಿರೂಪಣೆ ಇವುಗಳಿಂದ 'ಪರಮ ಕವಿ ಪ್ರಧಾನರ' ಕಾವ್ಯಗಳ ಗುಂಪಿಗೆ ಈ ಕೃತಿಯೂ ಸೇರುತ್ತದೆ.ಇದು 20ನೇ ಶತಮಾನದ ಪೂರ್ವಾ ರ್ಧದಲ್ಲಿ ರಚಿತವಾದ ಮಹಾಕಾವ್ಯ. 'ಮಹಾಕಾವ್ಯಗಳ ಕಾಲ ಎಂದೋ ಮುಗಿದು ಹೋಗಿದೆ.' ಈ ಕಾಲಕ್ಕೆ ಮಹಾ ಕಾವ್ಯಗಳು ಪ್ರಸ್ತುತವಲ್ಲ, ಮಹಾಕಾವ್ಯಗಳ ರಚನೆ ಈ ಕಾಲದಲ್ಲಿ ಸಾಧ್ಯವೂ ಇಲ್ಲ, ಸಾಧುವೂ ಅಲ್ಲ ಎಂಬ ಅಭಿಪ್ರಾಯಗಳು ಸಾಹಿತ್ಯವಲಯದಲ್ಲಿ ಪ್ರಚಲಿತವಾಗಿದ್ದ ಕಾಲದಲ್ಲಿ ಈ ಯಾವುದರ ಅರಿವೂ ಇಲ್ಲದೆ ಅವಿದ್ಯಾವಂತಳಾದ ಮಹಿಳೆಯೊಬ್ಬಳು ಬರೆದ ಮಹಾಕೃತಿ ಇದು.20 ನೇ ಶತಮಾನದ ಕನ್ನಡ ಮಹಾಕಾವ್ಯಗಳ ಪರಂಪರೆಯಲ್ಲಿ ದಾಖಲೆಯೂ ಆಗದೆ ಅಜ್ಞಾತವಾಗಿ ಉಳಿದವರು ಅಂಬಾಬಾಯಿ. 20 ನೇ ಶತಮಾನದಲ್ಲಿ ಮಹಿಳೆ ಯೊಬ್ಬರು ಬರೆದ ಮೊದಲ ರಾಮಾಯಣ ಮಹಾಕಾವ್ಯ 'ಶ್ರೀರಾಮಕಥಮೃತ ಎನ್ನಬಹುದು.

**- ಪುಸ್ತಕ ಪರಿಚಯ - ಪ್ರಣವ**



ಶ್ರೇಷ್ಠರು, ಶಿವಶರಣರು, ಆಳ್ವಾರರು, ತಮಿಳುನಾಡಿನ ಶೈವಸಂತರು, ಬಂಗಾಳದ ಸಂತರು, ಕಾಶ್ಮೀರದ ದಾರ್ಶನಿಕರು-ಹೀಗೆ ಈ ಪಟ್ಟಿ ಮುಂದುವರಿಯುತ್ತದೆ. ಜನಸಾಮಾನ್ಯರ ಭಾವನೆಗಳಿಗೆ ಸ್ಪಂದಿಸುತ್ತ ಈ ಭಕ್ತಿಪಂಥ ಸಮಾಜದಲ್ಲಿ ಮಾಡಿದ ಪರಿವರ್ತನೆ ಅಪೂರ್ವ.

ರಾಮಚರಿತಮಾನಸದ ಮೊದಲ ಪುಟಗಳಲ್ಲಿ ತುಳಸೀದಾಸರು ವೇದಗಳು, ಪುರಾಣಗಳು, ಉಪನಿಷತ್ತುಗಳು, ವಿವಿಧ ಕವಿ ವಿರಚಿತ ರಾಮಾಯಣಗಳನ್ನು ಉಲ್ಲೇಖಿಸಿ ಅವುಗಳಿಂದ ತನ್ನ ಜ್ಞಾನ ವಿಕಸಿತವಾಯಿತೆಂದು ಹೇಳುತ್ತಾರೆ. ಅದ್ವೈತ ಸಿದ್ಧಾಂತ ವನ್ನು

# ತುಲಸಿದಾಸ ಜಯಂತಿ

– ಡಾ॥ ಗುರುರಾಜ ಪ್ರೋಶೆಟ್ಟಿಹಳ್ಳಿ

97393 69621

ತುಳಸೀದಾಸರೆಂದರೆ ಭಕ್ತಿ ಪರಂಪರೆಯ ಹೊಸ ಬೆಳಕು. ಎಲ್ಲ ವರ್ಣ, ವರ್ಗದವರನ್ನೂ ಭಕ್ತಿಯ ಏಕಸೂತ್ರದೊಳಗೆ ಬಂಧಿಸಿ ಶ್ರೀರಾಮನ ದರ್ಶನ ಮಾಡಿಸಿದರು. ಭಾವ ಭಕುತಿಯ ನಿರೂಪಣೆಗೆ ಎರಡೆರಡು ಸಾಲಿನ ದೋಹೆ ಪರಂಪರೆಯನ್ನು ಆಯ್ದುಕೊಂಡ ಉದ್ದೇಶ ಸರಳವಾಗಿ ರಾಮ ದೇವರನ್ನು ಜನರಿಗೆ ತಲುಪಿಸಬೇಕು. ನಿತ್ಯವೂ ರಾಮ ನಾಮ ಜಪಿಸಿ ಪೂಜಿಸುತ್ತಿರಬೇಕು ಎನ್ನುವುದು. ಅವರ ಸಾಹಿತ್ಯದ ಲಾಲಿತ್ಯವೇ ಹಾಗಿದೆ. ಒಮ್ಮೆ ಓದಿದರೆ ಸಾಕು, ನಿತ್ಯ ನಾಲಿಗೆಯಲ್ಲಿ ತನ್ನ ಪಾಡಿಗೆ ನರ್ತಿಸುವ ಹಾಗೆ! ತಮಗರಿವಿಲ್ಲದೆ ಭಕ್ತಿಯೊಳಗೆ ಸಮರ್ಪಣಾ ಭಾವದೊಂದಿಗೆ ಲೀನವಾಗುವ ಹಾಗೆ. ಅಖಂಡ ಭಕ್ತಿಯ ಕಂಪು ಸೂಸುವ ನಿರೂಪಣೆ ಇಲ್ಲಿನದು.

ತುಳಸೀದಾಸರು ತಮ್ಮ ಆತ್ಮೋದ್ಧಾರಕ್ಕೂ ಸಂಸ್ಕೃತಿಯ ಪುನರುತ್ಥಾನಕ್ಕೂ ಆರಿಸಿಕೊಂಡ ಮಾರ್ಗ ಭಕ್ತಿಮಾರ್ಗ. ಭಕ್ತಿ ಎನ್ನುವುದು ಅಂತರಂಗದಲ್ಲಿ ದೇವರನ್ನು ಕುರಿತ ಗಾಢವಾದ ಪ್ರೀತಿ;ಬಹಿರಂಗದಲ್ಲಿ ಸೃಷ್ಟಿಯ ಎಲ್ಲ ಜಡ - ಜೀವ ವಿವರಗಳನ್ನೂ ಒಂದೇ ಭಾವದಲ್ಲಿ ಕಾಣುವ ಪ್ರೀತಿ ಇಂಥ ಸಾಮರಸ್ಯದ ಭಕ್ತಿ ಮಾರ್ಗದಲ್ಲಿ ನಡೆದು,ನಮ್ಮ ಜೀವನವನ್ನು ಉದ್ಧರಿಸಿದ ಮಹಾತ್ಮರು ಹಲವರು. ತುಳಸೀದಾಸರು, ತುಕಾರಾಮ, ಜ್ಞಾನೇಶ್ವರ, ಪುರಂದರದಾಸ-ಕನಕದಾಸ ಮುಂತಾದ ದಾಸ

ಅವರು ಮೆಚ್ಚಿಕೊಂಡದ್ದು ಶೇಷ ಸನಾತನರೆಂಬುವರ ಉಪದೇಶಗಳ ಮೂಲಕವೇ. ಮೂಲ ಉಪದೇಶಗಳನ್ನು ವಿವಿಧ ಮೂಲಗಳಿಂದ ಸ್ವೀಕರಿಸಿಯೂ ಸ್ವಯಂಚಿಂತನೆ ಹಾಗೂ ಅನುಭವಗಳ ಸಾರವನ್ನು ಅವರು ತಮ್ಮ ಬರಹಗಳ ಮೂಲಕ ಪ್ರಸ್ತುತ ಪಡಿಸುತ್ತಾರೆ.

ಓರ್ವ ಸುಂದರ ಕನ್ಯೆಯೊಡನೆ ತುಲಸಿದಾಸರ ವಿವಾಹ ಜರುಗಿತು. ಅವರು ಆಕೆಯನ್ನು ಬಿಟ್ಟಿದ್ದೇ ಇಲ್ಲ ಎನ್ನುವಷ್ಟು ಮೋಹವಂತೆ. ರಾಮಬೋಲಾ ಎಲ್ಲೋ ಹೊರಗಡೆ ಹೋಗಿದ್ದಾಗ ಹೆಂಡತಿ ತವರುಮನೆಗೆ ಹೊರಟು ಬಿಟ್ಟಳು. ಹೆಂಡತಿ ಇಲ್ಲವೆಂದು ತಿಳಿದು ತುಲಸಿದಾಸ ಉಟ್ಟ ಬಟ್ಟೆಯಲ್ಲಿಯೇ ಅವಳ ತಂದೆಯ ಊರಿನತ್ತ ದೌಡಾಯಿಸಿದ. ದಾರಿಯಲ್ಲಿ ಕತ್ತಲಾಯಿತು. ನದಿ ಅಡ್ಡ ಬಂತು. ಆದರೆ ಅವನ ಉತ್ಸಾಹ ತಗ್ಗಲಿಲ್ಲ. ಊರು ತಲುಪಿದಾಗ ಸರಿರಾತ್ರಿಯಾಗಿತ್ತು. ಮನೆಯಲ್ಲಿ ದೀಪ ಆರಿಸಲಾಗಿತ್ತು ಕದವನ್ನು ಡಬಡಬನೆ ಬಡಿದ. ಬಾಗಿಲು ತೆರೆಯಲ್ಲಿಲ್ಲ. ಕೂಡಲೇ ಅವನು ಮಾಳಿಗೆಯ ಮೇಲೆ ಹತ್ತಿ 'ನೇತಾಡುತ್ತಿದ್ದುದನ್ನು' ಹಿಡಿದು ಸರಸರನೆ ಕೆಳಗಿಳಿದು. ನೋಡಿದರೆ ಅದು ಹಾವು! ಆಕೆ ಅವನ ಸಾಹಸಕ್ಕೆ ಪ್ರೋತ್ಸಾಹದ ಬದಲಿಗೆ ಛೀಮಾರಿ ಹಾಕಿದಳು. ಹೆಂಗಸಿನ ಮೇಲಿನ ಇಂತಹ ಮೋಹ ನಾಚಿಕೆಗೇಡು. ನನ್ನ ಮೇಲಿನ ಪ್ರೇಮ-ಮೋಹದ ಅರ್ಧದಷ್ಟನ್ನಾದರೂ ರಾಮನಿಗೆ ಅರ್ಪಿಸಿದ್ದರೆ

ಅವನು ನಿನ್ನ ಈ ತಾಪವನ್ನು ದೂರಮಾಡುತ್ತಿದ್ದ ಎಂದಳು. ತುಲಸಿದಾಸರಿಗೆ ಜ್ಞಾನೋದಯ ಆಯಿತು. ಮೋಹಿಯು ರಾಮಭಕ್ತನಾಗಿ ಪರಿವರ್ತನೆಗೊಂಡನಂತೆ. ತುಲಸಿದಾಸರ ಜೀವನದಲ್ಲಿ ಹೊಸ ಅಧ್ಯಾಯ ಅಂದೇ ಪ್ರಾರಂಭವಾಯಿತು.

ತುಲಸೀದಾಸರು ರಾಮನ ಪರಮಭಕ್ತರಾದರು. ಲೋಭ ಮೋಹ ಗಳಿಂದ ದೂರವಾಗಿ,ವೀತರಾಗಿಗಳಾದ ಸಿದ್ಧರಾಗಿ, ನಮ್ರತೆಯ ಪ್ರತಿ ಮೂರ್ತಿಯಾಗಿ,ಪರಮ ಸುಶೀಲರಾಗಿ, ಸದಾಚಾರಿಗಳಾಗಿ ಪರಿವರ್ತನೆ ಗೊಂಡರು.ರಾಮನನ್ನುಳಿದು ಬೇರಾವ ನರಸ್ತುತಿಯನ್ನು ಅವರು ಮಾಡ ಅಲ್ಲ. ಅವರು ಕಾವ್ಯರಚನೆ ಮಾಡಿದ್ದು ಯಶಸ್ಸಿಗಾಗಲ್ಲ, ಹಣಕ್ಕಾಗಿ ಅಲ್ಲ, ಅವರೇ ಹೇಳುವಂತೆ "ಸ್ವಾಂತಃ ಸುಖಾಯ"

ತುಲಸೀದಾಸರು ಯುಗಪ್ರವರ್ತಕರೇ, ಜನನಾಯಕರೂ ಹೌದು. ಅವರ ಕಾಲದಲ್ಲಿ ಇಸ್ಲಾಂ ಆಕ್ರಮಣ ಹಾಗೂ ಪ್ರಭಾವದಿಂದಾಗಿ ಹಿಂದೂ ಧರ್ಮ ಗಂಡಾಂತರಕ್ಕೊಳಗಾಗಿತ್ತು. 'ಜಗತ್ತು ಮಿಥ್ಯೆ' ಎಂದು ಹೇಳಿ ಪಲಾಯನ ಸೂಕ್ತವನ್ನು ಪಠಿಸುತ್ತಿದ್ದ ಜನರನ್ನು ಈ ನೆಲದ ಮೇಲೆ ಹಿಡಿದು ತಂದು ನಿಲ್ಲಿಸಿದರು. ರಾಮಚಂದ್ರಪ್ರಭುವಿನ ಐಶ್ವರ್ಯವನ್ನು, ಚೆಲುವನ್ನು ತೋರಿಸಿ ಅದನ್ನು ಆಸ್ವಾದಿಸಿ ಬದುಕುವ ಸಂದೇಶವನ್ನು ನೀಡಿದರು.ಭಕ್ತಿ ಎಲ್ಲರಿಗೂ ಅನಿವಾರ್ಯ.ಜಗತ್ತಿನಲ್ಲಿ ಅನ್ನ,ನೀರು ಎಲ್ಲರಿಗೂ ಅನಿವಾರ್ಯವಾದಂತೆ ಭಕ್ತಿಯೂ ಅನಿವಾರ್ಯ, ಭಕ್ತಿಯ ಅಧಿಕಾರ ಎಲ್ಲರಿಗೂ ಇದೆ - ಎಂದು ಘೋಷಿಸಿದರು.

ತುಳಸೀದಾಸರು ಯಾವ ಸ್ವತಂತ್ರ ಸಂಪ್ರದಾಯವನ್ನೂ ಸ್ಥಾಪಿಸ ಅಲ್ಲ, ಹರಿಭಕ್ತಿಪಂಥಕ್ಕಿಂತ ಮಿಗಿಲಾದ ಪಂಥ ಬೇರೊಂದಿಲ್ಲ ಎಂದು ಅವರು ಸಾರಿದರು.

ಹಿಂದಿನ ಸರ್ವಶ್ರೇಷ್ಠ ಕವಿ ಪಂಡಿತ ರಾಮಚಂದ್ರ ಶುಕ್ಲರು 'ತುಲಸಿಯ ಮಾನಸದಿಂದ ಹರಿದ ರಾಮಚರಿತದ ಶೀಲ,ಶಕ್ತಿ, ಸೌಂದರ್ಯಮಯ ಸ್ವಚ್ಛಧಾರೆ ಬದುಕಿನ ಪ್ರತಿಯೊಂದು ಸ್ಥಿತಿಯನ್ನೂ ಹೊಕ್ಕು ಭಗವಂತನ ಸ್ವರೂಪದ ಪ್ರತಿಬಿಂಬವನ್ನು ಮಿಂಚಿಸಿತು. ರಾಮಚರಿತದ ಇದೇ ಜೀವನ ವ್ಯಾಪಕ ಅವರ ವಾಣಿಯನ್ನು ಧನಿಕ - ದರಿದ್ರ, ಮೂರ್ಖ-ಪಂಡಿತ ಇವರೆಲ್ಲರ ಹೃದಯ ಮತ್ತು ಕಂಠದಲ್ಲಿ ಎಲ್ಲ ಕಾಲಕ್ಕೂ ನೆಲೆ ನಿಲ್ಲುವಂತೆ ಮಾಡಿತು. ಅವರು ಉತ್ತರಪಥದ ಸಮಸ್ತ ಹಿಂದೂ ಜೀವನವನ್ನು ರಾಮಮಯವನ್ನಾಗಿ ಮಾಡಿದರು. ಅವರ ವಾಣಿಯ ಪ್ರೇರಣೆಯಿಂದ ಇಂದೂ ಹಿಂದೂಜನತೆ ಸಂದರ್ಭಾನುಸಾರ ಸೌಂದರ್ಯವನ್ನು ಕಂಡು ಮುಗ್ಧವಾಗುತ್ತದೆ. ಮಹತ್ವವನ್ನು ಕಂಡು ಶ್ರದ್ಧೆಯಿಂದ ಮಣಿಯುತ್ತದೆ ಶೀಲದತ್ತ ಒಲಿಯುತ್ತದೆ ಸನ್ಮಾರ್ಗದಲ್ಲಿ ಕಾಲಿಡುತ್ತದೆ, ವಿಪತ್ತಿನಲ್ಲಿ ಧೈರ್ಯ ತಳೆಯುತ್ತದೆ, ಕಠಿಣ ಕಾರ್ಯದಲ್ಲಿ ತೊಡಗಲು ಉತ್ಸಾಹಗೊಳ್ಳುತ್ತದೆ ದಯೆಯಿಂದ ಆರ್ದ್ರಗೊಳ್ಳುತ್ತದೆ ಮಾನವ ಜೀವನದಲ್ಲಿ ಮಹತ್ವವನ್ನು ಅನುಭವಿಸುತ್ತದೆ ಎಂದಿರುವುದು ಸತ್ಯ.

ತುಳಸೀದಾಸರು ಹಿಂದಿಯ ಸಾಹಿತ್ಯದ ಸರ್ವಶ್ರೇಷ್ಠ ಕವಿಗಳು ಅವರ 'ರಾಮಚರಿತ ಮಾನಸ' ಹಿಂದಿಯ ಗೌರವಗ್ರಂಥ. ಅದರಲ್ಲಿ ಭಾರತದ ಭೂತ, ವರ್ತಮಾನ ಹಾಗೂ ಭವಿಷ್ಯ ಇಣುಕಿ ಮಿಣುಕುತ್ತದೆ. ಇಂಥ ಕವಿಯನ್ನು ಪಡೆದು ಹಿಂದೀ ಗೌರವಾನ್ವಿತವಾಗಿದೆ.ಹಿಂದೀ ಭಾಷೆ ಮತ್ತು ಸಾಹಿತ್ಯ ಬದುಕಿರುವ ತನಕ ತುಳಸೀದಾಸರ ವಾಣಿ ಅಜರಾಮರವಾಗಿರುತ್ತದೆ.

ಸಾವು ಸನ್ನಿಹಿತವಾದಾಗ ತುಳಸೀದಾಸರು ನುಡಿದಿದ್ದು ಈ ದೋಹೆ:

ರಾಮನಾಮ ಜಸ ಬರನಿಕೈ ಭಯೋ ಚಹತ ಬ್ ಮೌನ್
ತುಲಸೀ ಕೇ ಮುಖ ದೀಜಿಯೇ ಅಬಹೀ ಸುಲಸೀ ಸೌನ್॥

(ರಾಮನಾಮ ಜಪವ ಬಣ್ಣಿಸಿ ಈಗ ಬಯಸುವ ಮೌನ।ತುಲಸಿಯ ಬಾಯಿಗೆ ಹಾಕಿರಿ ತುಲಸೀ ಹೊನ್ನು॥)

**ರಾಮನಾಮವೇ ಶ್ರೇಷ್ಠ...**

ಶ್ರೀರಾಮನ ದರ್ಶನಭಾಗ್ಯ ದೊರೆತ ಅನಂತರ ತುಳಸೀದಾಸರು ರಾಮನ ಕಥೆಯನ್ನು ಬರೆಯುವುದರಲ್ಲಿ ಸಂಪೂರ್ಣ ಮಗ್ನರಾದರು. ಅವರ ಮನೋಸಾಕ್ಷಾತ್ಕಾರದಿಂದ ಮೂಡಿಬಂದ ರಾಮನ ಕಥೆ 'ರಾಮಚರಿತ ಮಾನಸ' ಅಥವಾ 'ತುಳಸೀ ರಾಮಾಯಣ' ವೆಂಬ ಹೆಸರಿನಲ್ಲಿ ಜನಜನಿತವಾಯಿತು. ಕಳೆದ ನಾಲ್ಕು ಶತಮಾನಗಳಲ್ಲಿ ಭಾರತದಲ್ಲಿ ಅದರಲ್ಲೂ ಉತ್ತರದಲ್ಲಿ, 'ರಾಮ ಚರಿತ ಮಾನಸ' ಕ್ಕೆ ದೊರೆತಿರುವಂಥ ಜನಪ್ರಿಯತೆ, ಗೌರವಾದರ,'ಪಾವಿತ್ರ್ಯ ಬೇರಿನ್ನೊಂದು ಗ್ರಂಥಕ್ಕೆ ದೊರೆತಿಲ್ಲ.ಅದರಲ್ಲಿ ಬರುವ 'ಹನುಮಾನ್ ಚಾಲೀಸ' ವಂತೂ ಇಂದು ಕೋಟಿಕೋಟಿ ನಾಲಗೆಗಳಲ್ಲಿ ನಲಿದಾಡುತ್ತಿದೆ.

ಈ ಸದ್ಗ್ರಂಥವು ಇಂದು ಕೇವಲ ಯಾವುದೋ ಒಂದು ವರ್ಗ ಅಥವಾ ಬೌದ್ಧಿಕ ಕ್ಷಮತೆಯುಳ್ಳವರ ಸೊತ್ತಾಗಿ ಉಳಿದಿಲ್ಲ. ಮನೆ ಮನೆಗಳಲ್ಲಿ ಕುಟುಂಬದ ಸದಸ್ಯರೆಲ್ಲರೂ ಕುಳಿತು ಒಟ್ಟುಗೂಡಿ ಪಠಿಸುವ ಪಾರಾಯಣ ಗ್ರಂಥವಾಗಿದೆ. ತುಳಸೀ ರಾಮಾಯಣ ಭಾರತೀಯರ ಜೀವನಗಳನ್ನು ಧರ್ಮನಿಷ್ಠತೆಯನ್ನು ರೂಪಿಸುವಲ್ಲಿ, ಸನಾತನ ಧರ್ಮವನ್ನು ಸಂರಕ್ಷಿಸುವುದರಲ್ಲಿ ವಹಿಸಿದ ಪಾತ್ರ ಮಹತ್ತರವಾದುದು. ಆ ಕಾಲದಲ್ಲಿ ಮಹಾಕಾವ್ಯಗಳೆಲ್ಲ ಸಂಸ್ಕೃತದಲ್ಲೇ ಇದ್ದು ಸಾಮಾನ್ಯರ ಕೈಗೆ ಎಟುಕುವಂತಿರಲಿಲ್ಲ.ತುಳಸೀದಾಸರು

ಮಹಾನ್ ಸಂಸ್ಕೃತ ವಿದ್ವಾಂಸರಾಗಿದ್ದರೂ ಸ್ಥಳೀಯ ಅವಧಿ ಭಾಷೆಯಲ್ಲಿ ಈ ಮಹಾ ಕಾವ್ಯವನ್ನು ರಚಿಸಿ ರಾಮ, ಸೀತಾ, ದಶರಥ, ಭರತ, ಲಕ್ಷ್ಮಣ, ಆಂಜನೇಯ, ಗುಹ, ಜಟಾಯು, ರಾವಣ, ಕುಂಭಕರ್ಣ, ವಿಭೀಷಣ, ವಸಿಷ್ಠ - ಹೀಗೆ ನೂರಾರು ಪಾತ್ರಗಳ ಮೂಲಕ ಸಮಾಜಕ್ಕೆ ಆದರ್ಶಗಳ ಪಾಠ ಹೇಳಿದರು. ಆದರ್ಶ ಕುಟುಂಬ. ಆದರ್ಶ ಸೋದರರು, ಆದರ್ಶ ದಂಪತಿ, ಆದರ್ಶ ಸೇವಕ, ಆದರ್ಶ ರಾಜ ಹೇಗಿರಬೇಕೆಂಬುದನ್ನು ಮನದಟ್ಟು ಮಾಡಿಸಿದರು.

ಅದು ಅಸ್ತಿತ್ವಕ್ಕೆ ಬಂದ ಕಾಲದಲ್ಲಿ ಭಾರತದ ಮೇಲೆ ದಬ್ಬಾಳಿಕೆ ನಡೆಸಿದ್ದರು ಸನಾತನ ಧರ್ಮವನ್ನು ಬುಡ ಸಹಿತ ನಿರ್ನಾಮ ಮಾಡಲು ಯತ್ನಿಸುತ್ತಿದ್ದರು. ದೇವಸ್ಥಾನಗಳನ್ನು ಒಡೆದರು. ಸನಾತನ ಶಾಸ್ತ್ರಗಳನ್ನು ಸಂರಕ್ಷಿಸುತ್ತಿದ್ದ ಸಾತ್ವಿಕರನ್ನು ಕೊಂದರು. ಹೆದರಿಸಿ ಓಡಿಸಿದರು. ದೇವತೆಗಳ ಮೂರ್ತಿಗಳನ್ನು ನುಚ್ಚುನೂರು ಮಾಡಿದರು. ಆಗ ಆವಿರ್ಭಸಿದ್ದ 'ರಾಮಚರಿತ ಮಾನಸ' ಜನರಲ್ಲಿ ಉಂಟಾಗುತ್ತಿದ್ದ ಧರ್ಮಗ್ಲಾನಿಯನ್ನು ತಡೆದು ಜನರಲ್ಲಿ ಧರ್ಮಶ್ರದ್ಧೆ, ದೇವ ದೇವತೆಗಳಲ್ಲಿ ಭಕ್ತಿ, ಸ್ವಧರ್ಮದ ಬಗ್ಗೆ ಸ್ವಾಭಿಮಾನ,ಹೆಮ್ಮೆ ಉಂಟುಮಾಡಿದ ಶ್ರೇಯಸ್ಸು ತುಳಸೀ ರಾಮಾಯಣದ್ದು. ದಿಲ್ಲಿಯ ಮೊಗಲ್ ಬಾದಷಹರೇ ದೇವರೆಂದು ಭಾವಿಸಿ ಅತ್ಯಾಚಾರ, ಅನಾಚಾರ, ದೌರ್ಜನ್ಯ, ದಬ್ಬಾಳಿಕೆ ಮತ್ತು ಧರ್ಮಬಾಹಿರ ಕಾರ್ಯದಲ್ಲಿ ತೊಡಗಿದ್ದಾಗ, ರಾಮಲೀಲಾ ಉತ್ಸವಗಳನ್ನು ಆರಂಭಿಸಿ ಸಮಾಜದಲ್ಲಿ ಹೊಸ ಚೈತನ್ಯ, ಕ್ಷಾತ್ರ ತೇಜಸ್ಸು , ರಾಮಭಕ್ತಿ ಧರ್ಮಶ್ರದ್ಧೆಗಳನ್ನು ಜಾಗೃತಗೊಳಿಸಿದ ಕೀರ್ತಿ ಸಲ್ಲಬೇಕಾದ್ದು ತುಳಸೀದಾಸರಿಗೆ.

ಹಿಂದೆ ಪರದೇಶಗಳಿಗೆ ವಲಸೆ ಹೋದ ಭಾರತೀಯರು 'ರಾಮಚರಿತ ಮಾನಸ' ವನ್ನು ಜೊತೆಯಲ್ಲಿಯೇ ಕೊಂಡೊಯ್ಯುವುದು ಪದ್ಧತಿಯೇ ಆಗಿ ಹೋಗಿತ್ತು, ಅದನ್ನು ನಿತ್ಯವೂ ಪಠಿಸುವ ಮೂಲಕ ಧಾರ್ಮಿಕ ಶ್ರದ್ಧೆ, ರಾಮ ಭಕ್ತಿಯನ್ನು ಕಾಪಾಡಿಕೊಂಡು ಬರಲು ಅದುವೇ ಸಹಾಯಕವಾಯಿತು.

ರಾಮನ ಅನಂತತೆಯನ್ನು ಅನನ್ಯತೆಯನ್ನು ಭಕ್ತಿ ಉದ್ದೀಪಿಸುವ ನೆಲೆಗಟ್ಟಿನಲ್ಲಿ ಪೋಣಿಸುವುದರಿಂದಲೇ ಅವರ ಭಕ್ತಿ ಪ್ರಚೋದಕವಾದ "ರಾಮಚರಿತ ಮಾನಸ" ಹಾಗೂ "ಹನುಮಾನ್ ಚಾಲೀಸ" ಸ್ತುತಿ ಕೃತಿಯಾಗಿ ದೇವರ ಮನೆ ಸೇರಿವೆ.ಮನೆ ಮನೆಗಳಲ್ಲಿ ನಿತ್ಯ ಪಠಿಸುತ್ತ" ಹೇ ರಾಮ ರಕ್ಷಿಸು" ಎಂದು ಪ್ರಾರ್ಥಿಸುತ್ತಿದ್ದಾರೆ.

## ಶ್ರೀ ವೆಂಕಟೇಶ್ವರ ನಿತ್ಯ ಅನ್ನದಾನ ಟ್ರಸ್ಟ್

- ಅನ್ನದಾನ ಸಮಂ ದಾನಂ ತ್ರಿಲೋಕೇಷು ನ ವಿದ್ಯತೇ - ಎಂದರೆ ಅನ್ನದಾನದ ಸಮನಾದ ಮತ್ತೊಂದು ದಾನ ಮೂರು ಲೋಕಗಳಲ್ಲಿಯೂ ಇಲ್ಲ. ಎಲ್ಲ ದಾನಗಳಲ್ಲಿ ಅನ್ನದಾನ ಅತಿಶ್ರೇಷ್ಠ.
- 1984ರಲ್ಲಿ ತಿ.ತಿ.ದೇವಸ್ಥಾನಗಳಿಂದ ಆರಂಭವಾದ ಈ ಟ್ರಸ್ಟ್ ಪ್ರಸ್ತುತ 75 ಸಾವಿರ ಮಂದಿ ಯಾತ್ರಿಕರಿಗೆ ಭೋಜನ ಸದುಪಾಯವನ್ನು ಪ್ರತಿದಿನವೂ ತಿರುಮಲೆಯ ಅತಿದೊಡ್ಡ ಅನ್ನದಾನ ಭವನವಾದ ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನದಾನ ಸಮುದಾಯದಲ್ಲಿ ಒದಗಿಸುತ್ತಿದೆ.
- ಇಲ್ಲಿಯೇ ಅಲ್ಲದೆ, ದೇವರ ದರ್ಶನದ ಸರದಿಯಸಾಲು, ಕಾಯುವ ಕೋಣೆಗಳು, ತಿ.ತಿ.ದೇ. ಆಸ್ಪತ್ರೆಗಳ ರೋಗಿಗಳು, ತಿ.ತಿ.ದೇ. ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಿಗೂ ಸಹ ಉಚಿತ ಭೋಜನ ಸೌಲಭ್ಯ ದೊರೆಯುತ್ತಿದೆ.
- ಈ ಟ್ರಸ್ಟ್‌ಗೆ ಉದಾರವಾಗಿ ವಂತಿಗೆಯನ್ನು ನೀಡುತ್ತ ಈ ಧರ್ಮಕಾರ್ಯದಲ್ಲಿ ಭಾಗಿಗಳಾಗಿರಿ. ಅಧಿಕ ಪ್ರಮಾಣದ ತರಕಾರಿಗಳನ್ನು ಸಹ ಈ ಟ್ರಸ್ಟ್‌ಗೆ ವಂತಿಗೆ ನೀಡಬಹುದು.

ಇತರ ವಿವರಗಳಿಗೆ 0877 - 2264376 ಅಥವಾ 2264237 ಗೆ ಕರೆ ಮಾಡಿರಿ.

**website - www.tirumala.org**
**e-mail - svannadanamtrust@tt devasthanams.org.**

**ಧಾರಾವಾಹಿ - 3**

# ಆಳ್ವಾರರ ಭಗವದನುಭವ

ಡಾ॥ ಸಿ. ಎಸ್. ಊರ್ಮಿಳಾ
93804 26830

ನಂತರ ತಿರುಮಳಿಶೈ ಆಳ್ವಾರರು ಭಗವಂತನನ್ನು ಕಾಣಲು ತಮ್ಮ ಕಾತುರವನ್ನು ಪ್ರಕಟಿಸುತ್ತಾ ಹೀಗೆನ್ನುತ್ತಾರೆ.

ಅಳೈಪ್ಪನ್ ತಿರುವೇಂಗಡತ್ತಾನೈ ಕ್ಕಾಣ

-------------------------------

-------------------------------

ವೆರುವಿ ಅರವೊಡಂಗುಮ್ ವೆರ್ದ್ದು

(ನಾನ್ಮುಹನ್ ತಿರುವಂದಾದಿ 39 ನೇ ಪಾಶುರ)

ಒಮ್ಮೆ ಭಗವಂತನನ್ನು ತಿರುಮಳಿಶೈ ಆಳ್ವಾರ್‌ರರನ್ನು ಕುರಿತು ನೀವೇನು ಸ್ವಂತ



ಐಹಿಕ ಭೋಗಕ್ಕಾಗಿ ಒಂದಿರುವಿರಾ ಅಥವಾ ಮೋಕ್ಷಕ್ಕಾಗಿ ಬಂದಿರುವಿರಾ ಎಂದು ಅದಕ್ಕೆ ಆಳ್ವಾರರು ಹೇಳುತ್ತಾರಂತೆ ಅವೆರಡಕ್ಕೂ ಅಲ್ಲ ನಿನ್ನ ದರ್ಶನವೊಂದಕ್ಕೆ ಮಾತ್ರ ನಾನು ನಿನ್ನಲ್ಲಿಗೆ ಬಂದಿರುವೆನು. ನಿನ್ನ ಈ ದರ್ಶನ ಭಾಗ್ಯ ಸಿಗುವುದು ವಿಳಂಬವಾದರೆ, ಆ ಬಗ್ಗೆ ನಿನ್ನ ಕೃಪೆಯಿಂದಲೇ "ಶಕುನ"ವನ್ನು ಕೇಳಿ ಬಿಡುವೆನಪ್ಪಾ ತಿಮ್ಮಪ್ಪಾ ಎಂದು ಉತ್ತರಿಸಿದರು.ವೃತ್ತಾಕಾರವಾಗಿ ಕೂಡಲ್ - ಶಕುನ- ಎಂದ ರೇನು? ರಂಗೋಲೆಯಿಂದಲೋ ಚಿತ್ರವನ್ನು ಬರೆದೋ ದೇವಾಲಯಗಳಲ್ಲಿ ದುಂಡಾ ಗಿರುವ ಬಲಿಪೀಠಗಳ ಮುಂದೆ ಕುಳಿತೋ, ಆ ದೊಡ್ಡವಲಯದ ಒಳಗೆ ಸಣ್ಣ ಸಣ್ಣ ಸೊನ್ನೆಯ ಆಕಾರವನ್ನು ಕಲ್ಪಿಸಿ, ಎರೆಡೆರಡಾಗಿ ಅವುಗಳನ್ನು ಎಣಿಸುತ್ತಾ ಇರುವುದು. ಸರಿಸಂಖ್ಯೆಗೆ ಸರಿಯಾಗಿ ನಮ್ಮ ಎದರು ಬದುರಾದ ಜೋಡಿ ಬೆರಳು ನಿಂತು ಕೂಡಿ ಕೊಂಡರೆ ದರ್ಶನಭಾಗ್ಯ ಸಿಗುತ್ತದೆಯೆಂದೂ ಹಾಗಿಲ್ಲದೆ ಬೆಸ ಸಂಖ್ಯೆಯಿಂದ ಕೂಡದೇ ಹೋದರೆ ಸಧ್ಯಕ್ಕೆ ನಾನು ನೆನೆದಂತೆ ಆ ಕೆಲಸ ನಡೆಯುವುದಿಲ್ಲ, ಅಂದರೆ ಆ ಅದೃಷ್ಟವಿಲ್ಲ ಎಂದು ತಿಳಿಯುವುದು ಈ ಕ್ರಿಯಾ ಪದ್ಧತಿಗೆ 'ಶಕುನ ಕೂಡಲ್' ಎಂದು ಕರೆಯುತ್ತಾರೆ. ಇಂದಿಗೂ ದೇವಾಲಯಗಳಲ್ಲಿ ಬಲಿಪೀಠದ ಮುಂದೆ ಕುಳಿತು ಭಕ್ತರು ಪ್ರಾರ್ಥಿಸುವ ಪರಿಪಾಠವನ್ನು ನಾವು ಕಾಣಬಹುದು. ಮಧುರೈಯ ಬಳಿ ಇರುವ ಭಗ ವಂತನ ದೇವಾಲಯದಲ್ಲಿ 'ಕೂಡ ಲಳಹರ್' ಸನ್ನಿಧಿಯೇ ಇದೆ ಯಲ್ಲಾ



ನಮ್ಮಾಳ್ವಾರರು ಭಗವಂತ ಎಲ್ಲಿದ್ದಾನೆ ಎಂಬುದಕ್ಕೆ ಹೀಗೆಂದು ಉತ್ತರಿ ಸುತ್ತಾರೆ.



ಕಲ್ಲುಮ್ ಕನ್ನೈ ಕಡಲುಮ್ ವೈಕುನ್ದ ವಾನಾಡುಮ್

-----------------------------------------

-----------------------------------------

ಅಡಿಯೇನದು ಉಳ್ಳತ್ತಹಮ್

(ಪೆರಿಯ ತಿರುವಂದಾದಿ 68 ನೇ ಪಾಶುರ)

ಶಿಲಾಮಯನಾದ, ಅಂತೆಯೇ ದೃಢಪ್ರದೇಶವಾದ ತಿರುಪತಿ ಯನ್ನು ಭೋರ್ಗರೆಯುವ ಕ್ಷೀರಸಾಗರವನ್ನು ಪರಂಧಾಮವನ್ನು ತೃಣ ಸಮಾನವಾಗಿಸಿ ಬಿಟ್ಟೆ ಬಿಟ್ಟನೋ. ಏನಿದು ಕರುಣಾಳುವಾದ ಭಗವಂತನ ಕೃಪಾಕಟಾಕ್ಷ. ಅವನೋ ವೆಲ್ಲನಡಿಯಾನ್ ಅಂದರೆ ವ್ಯಕ್ತಿತ್ವ ಸಂಪನ್ನನು ಭಗವಂತನ ವ್ಯಕ್ತಿತ್ವವಾದರೂ ಎಂತಹುದು?

ಅವನು ಸರ್ವಾಂತರ್ಯಾಮಿ. ಎಲ್ಲದರೊಳಗೂ ಇದ್ದಾನೆ. ಎಲ್ಲಕ್ಕೂ ಒಳಗಿನಿಂದಲೂ ಹೊರಗಿನಿಂದಲೂ ಆಧಾರಭೂತನಾದವನು. ಅವನು ಹೃದಯಾಂತರಾಳದಲ್ಲಿಯೂ ಇದ್ದಾನೆ.ಅವನು ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣ ಸ್ಥಿತ ಅಲ್ಲವೇ? ತಸ್ಯಾ : ಶಿಖಾಯಾ ಮಧ್ಯೇ ಪರಮಾತ್ಮಾ ವ್ಯವಸ್ಥಿತ ನಾಗಿದ್ದಾನೆ.

ನಮ್ಮಾಳ್ವಾರರು ಇತರ ಸಾಮಾನ್ಯ ಯೋಗಿಗಳಂತೆ ತಮ್ಮದೇ ಎಂಬ ಭಾವದ ಅಭ್ಯಾಸ ವೈರಾಗ್ಯಗಳಿಂದ ಯಮ, ನಿಯಮ, ಆಸನ ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಸಮಾಧಿ ಎಂಬ ಅಷ್ಟಾಂಗ ಯೋಗ ಸಿದ್ಧರಲ್ಲ . ಆದರೂ 16 ವರ್ಷಗಳ ವರೆಗೆ ಆಳ್ವಾರ್ ತಿರುನಗರಿ ಯಲ್ಲಿರುವ 'ಆದಿಪಿರಾನ್' ದೇವಾಲಯದಲ್ಲಿ ಹುಣಿಸೇ ಮರದ ಕೆಳಗೆ ಭಗವದ್ಧ್ಯಾನವನ್ನು ಮಾಡಿದ ಮಹಾಜ್ಞಾನಿ ಭಗವಂತನೇ ನಮ್ಮಾಳ್ವಾರರು ಇರುವ ಕಡೆಗೆ ಬಂದು ದರ್ಶನವಿತ್ತನು.

ವಿದ್ಯುಲ್ಲೇಖೆ ವಭಾಸ್ವರಃ ಎಂಬಂತೆ - ಶ್ರೀವಿದ್ಯು ಲ್ಲೇಖೆಯ ಪ್ರಭಾವಳಿಯ ಒಳಗೆ ಹೊಕ್ಕು ನನ್ನನ್ನು ಬಿಡದೆಯೇ ಇದ್ದಾನಲ್ಲಾ ಎಂದು ತಮ್ಮ ಸಂತಸ ವ್ಯಕ್ತಪಡಿಸಿದ್ದಾರೆ. ಆದ್ದರಿಂದಲೇ ಇವರನ್ನು ಪ್ರಪನ್ನ ಜನಕೂಟಸ್ಥ ಎಂದು ಶ್ರೀವೈಷ್ಣವ ಪರಂಪರೆಯು ಗೌರವಿಸಿದೆ.

ಭಗವಂತನು ಸರ್ವಾಂತರ್ಯಾಮಿ, ಜಗದ್ರಕ್ಷಕ ಸೃಷ್ಟಿ, ಸ್ಥಿತಿ, ಲಯಗಳಿಗೆ ಅವನೇ ಕಾರಣ ಎಂಬುದನ್ನು ತಿಳಿಸುತ್ತಾ ಅವನನ್ನೇ ಸ್ತುತಿಸುತ್ತಾರೆ.

ಇಡೀ ಶಾಸ್ತ್ರಗಳ, ವೇದಾಂತಗಳ ಸಾರವನ್ನೇ ಭಟ್ಟಿ ಇಳಿಸಿದಂತೆ ಈ ಕಾವ್ಯಮಾಲಿಕೆಯಲ್ಲಿ ವರ್ಣಿಸಿದ್ದಾರೆ. ಈ ಪಾಶುರಗಳನ್ನು ಓದಿ ಮನನ ಮಾಡಿಕೊಂಡರೇನೇ ಸಾಕು ನಮಗೆ ದೇವರ ಅಸ್ತಿತ್ವದ ಬಗ್ಗೆ ಚೆನ್ನಾಗಿ ತಿಳಿಯು ತ್ತದೆ. ಆ ಪಾಶುರಗಳನ್ನು ನೋಡಿ, ಓದಿ,ಕಲಿಯೋಣ ಭಗ ವಂತನ ಕೃಪೆಗೆ ಪಾತ್ರರಾಗೋಣ.

(- ಮುಂದುವರಿಯುವುದು)

ಕರ್ನಾಟಕದ ವೈಷ್ಣವ ದೇವಾಲಯಗಳು

9

# ಬೇತಮಂಗಲದ ವಿಜಯೇಂದ್ರ ದೇವಾಲಯ

- ಕೆಂಗೇರಿ ಚಕ್ರಪಾಣಿ

94483 86886

ಬೇತಮಂಗಲವು ಕೋಲಾರ ಜಿಲ್ಲೆ , ಬಂಗಾರಪೇಟೆ ತಾಲ್ಲೂಕಿನ ಒಂದು ಗ್ರಾಮ. ಕೋಲಾರದಿಂದ ಸುಮಾರು 27 ಕಿ.ಮೀ. ದೂರದಲ್ಲಿ ಪಾಲಾರ್ ನದಿಯ ತೀರದಲ್ಲಿರುವ ಜಿಲ್ಲೆಯ ಪ್ರಾಚೀನ ಗ್ರಾಮ.

ಬೇತಮಂಗಲದಲ್ಲಿರುವ ಬೃಹತ್ ಕರೆಯು ಒಂದು ಸಾವಿರ ವರ್ಷಗಳ ಹಿಂದೆಯೇ ಇದ್ದುದಕ್ಕೆ ಶಾಸನಾಧಾರವಿದೆ. ಹಿಂದೆ ಇಲ್ಲಿನ ಕೆರೆಯ ನೀರಿನಿಂದಲೇ ಕೋಲಾರ ಗಣಿ ಪ್ರದೇಶಕ್ಕೆ ನೀರಿನ ಪೂರೈಕೆ ಯಾಗುತ್ತಿತ್ತು.

ಬೇತಮಂಗಲ ಗ್ರಾಮದ ಪ್ರಾಚೀನ ನಾಮ ವಿಜಯಮಂಗಲ ವಾಗಿತ್ತು. ಇದು ಹಿಂದೆ ವಿಜಯಾದಿತ್ಯ ಮಂಗಲವಾಗಿದ್ದು, ಬಾಣ ದೊರೆ ವಿಜಯಾದಿತ್ಯನಿಂದ ಈ ಹೆಸರು ಬಂದಿರಬೇಕೆಂದು ಶ್ರೀ ಬಿ.ಎಲ್. ರೈಸ್ ಅಭಿಪ್ರಾಯಪಟ್ಟಿರುವರು.

ಬೇತಮಂಗಲದಲ್ಲಿ ಅತ್ಯಂತ ಮನೋಹರವಾದ ವಿಜಯೇಂದ್ರ ದೇವಾಲಯ, ಆಂಜನೇಯ ದೇವಾಲಯ ಹಾಗೂ ಅರ್ಕೇಶ್ವರ ದೇವಾ ಲಯಗಳಿವೆ.

**ವಿಜಯೇಂದ್ರ ದೇವಾಲಯ:**

ಬೇತಮಂಗಲದಲ್ಲಿರುವ ವಿಜಯೇಂದ್ರ ದೇವಾಲಯವು ಗರ್ಭ ಗುಡಿಯಲ್ಲಿರುವ ಮೂರ್ತಿಶಿಲ್ಪದ ಲಕ್ಷಣದಿಂದ ಕ್ರಿ.ಶ. 10 ನೇ ಶತ ಮಾನಕ್ಕೂ ಹಿಂದಿನ ದೇವಾಲಯವಾಗಿದೆ. ಈ ದೇವಾಲಯದ ಅಧಿಷ್ಠಾನ ದಲ್ಲಿರುವ ಕ್ರಿ.ಶ. 950 ರ ಶಾಸನದಲ್ಲಿ ವಿಜಯೇಂದ್ರ ದೇವಾಲಯದ ರಚನೆಯ ಕಾಲದ ಬಗ್ಗೆ ಉಲ್ಲೇಖವಿಲ್ಲವಾದರೂ 10 ನೇ ಶತಮಾನಕ್ಕೂ ಮೊದಲೇ ದೇವಾಲಯವಿತ್ತೆಂಬುದಕ್ಕೆ ಪುರಾವೆ ದೊರಕುತ್ತದೆ. ದೇವಾ ಲಯವು ಬಾಣ, ನೊಳಂಬ ವಿಜಯನಗರದ ಅರಸರ ಕಾಲಗಳಲ್ಲಿ ಸಾಕಷ್ಟು ಬದಲಾವಣೆಯನ್ನು ಹೊಂದಿದೆ.

ದೇವಾಲಯವು ಗರ್ಭಗೃಹ ಅಂತರಾಳ, ನವರಂಗ, ಮುಖ ಮಂಟಪ ಹಾಗೂ ಇತ್ತೀಚೆಗೆ ರಚಿತವಾದ ಮತ್ತೊಂದು ಮುಖಮಂಟಪ ಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಅತ್ಯಂತ ಆಕರ್ಷಕವಾದ ಶ್ರೀದೇವಿ, ಭೂದೇವಿ ಸಹಿತನಾದ ವಿಜಯೇಂದ್ರಸ್ವಾಮಿಯ ಮನೋಹರವಾದ ಮೂರ್ತಿಯಿದೆ. ಶಾಸನಗಳಲ್ಲಿ ವೀತಿರುಂದ ಪೆರುಮಾಳ್ (ಕುಳಿತಿರುವ ದೇವರು -ಇದೇ ಹೆಸರನ್ನು ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಕುಳಿತಿರುವ ಕೃಷ್ಣಸ್ವಾಮಿಗೂ ಅಲ್ಲಿಯ ಶಾಸನಗಳಲ್ಲಿ ಕರೆಯಲಾಗಿದೆ.) ಮಣವಾಳ್ವಾರ್ ವಿಜಯರಂಗಸ್ವಾಮಿ ಎಂದು ಕರೆದಿರುವ ವಿಜಯೇಂದ್ರ ಸ್ವಾಮಿಯು ಸುಮಾರು ಐದು ಅಡಿಗಳಷ್ಟು ಎತ್ತರವಿದ್ದು ಸಿಂಹಪೀಠದ ಮೇಲೆ ಆಸೀನನಾಗಿರುವನು. ಹಸನ್ಮುಖಿನಾಗಿ ಕಿರೀಟ ಮುಕುಟವನ್ನು ಧರಿಸಿರುವ ದೇವನು ಎಡಗಾಲನ್ನು ಕೆಳಗೆ ಬಿಟ್ಟು ಬಲಗಾಲನ್ನು ಮಡಚಿ ಕುಳಿತಿರುವನು. ದೇವನು ಮೇಲಿನ ಕೈಗಳಲ್ಲಿ ಚಕ್ರ- ಶಂಖುವನ್ನು ಹಿಡಿದಿದ್ದರೆ ಕೆಳಗಿನ ಕೈಗಳು ಅಭಯ - ವರದ ಹಸ್ತದಲ್ಲಿರುವ ಸ್ವಾಮಿಯ ಹಣೆಯಲ್ಲಿ ಶ್ರೀವೈಷ್ಣವ ಲಾಂಛನವಾದ ನಾಮವನ್ನು ಬಿಡಿಸಲಾಗಿದೆ.

ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್ (1941) ಸಂಪಾ ದಕರು ದೇವನು ಧರಿಸಿರುವ ನಾಮದಿಂದ ವಿಗ್ರಹದ ಕಾಲವನ್ನು 16 - 17 ನೇ ಶತಮಾನಕ್ಕೆ ಸೇರಿಸಿರುವರು. ಆದರೆ ಸ್ವಾಮಿಯು ಧರಿಸಿರುವ ಕಿರೀಟ, ಪ್ರಭಾವಳಿ, ಕೈಕಡಗ, ಸಿಂಹಪೀಠದ ವಿನ್ಯಾಸದ ಲಕ್ಷಣಗಳಿಂದ ಇದು ಒಂಭತ್ತನೇ ಶತಮಾನಕ್ಕೂ ಹಿಂದಿನ ವಿಗ್ರಹವೆಂದು ಡಾ. ದೇವರ ಕೊಂಡಾ ರೆಡ್ಡಿಯವರು ಸಾಬೀತುಪಡಿಸಿರುವರು. ವಿಜಯೇಂದ್ರ ಸ್ವಾಮಿಯ ಸುತ್ತಲೂ ಇರುವ ಪ್ರಭಾವಳಿಯಲ್ಲಿ ಸುದರ್ಶನ ಜ್ವಾಲೆಯಿರುವುದು ಬಹು ವಿಶೇಷ.

ಈ ದೇವಾಲಯದ ನವರಂಗದಲ್ಲಿರುವ ನಾಲ್ಕು ಕಂಬಗಳು ಗಂಗ- ನೊಳಂಬರ ಕಾಲಕ್ಕೆ ಸೇರುತ್ತವೆ. ನವರಂಗದ ಅಂತರಾಳದ ಬದಿಗಳಲ್ಲಿ ದ್ವಾರಪಾಲಕರ ಶಿಲ್ಪಗಳು ಹಾಗೂ ನವರಂಗದ ಪ್ರವೇಶದಲ್ಲಿ ಆಳೆತ್ತರದ ಸುಂದರ ದ್ವಾರಪಾಲಕರ ಶಿಲ್ಪಗಳಿವೆ. ನವರಂಗದ ಉತ್ತರ ಭಾಗದಲ್ಲಿ ಮತ್ತೊಂದು ಗರ್ಭಗುಡಿಯನ್ನು ವಿಜಯನಗರ ಕಾಲದಲ್ಲಿ ರಚಿಸಿ ಸರ್ಪ ಶಯನವಾದ ಶ್ರೀರಂಗನಾಥನ ಸುಂದರಮೂರ್ತಿಯನ್ನು ಪ್ರತಿಷ್ಠಾಪಿಸ ಲಾಗಿದೆ. ರಂಗನಾಥಸ್ವಾಮಿಯ ಪಾದದ ಬಳಿ ಶ್ರೀದೇವಿ ಭೂದೇವಿಯರ ಶಿಲ್ಪಗಳಿವೆ. ವಿಜಯನಗರದ ಅರಸು ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ಮುಖಮಂಟಪ ಹಾಗೂ ರಂಗನಾಥ ಸ್ವಾಮಿಯ ವಿಗ್ರಹವು ಸ್ಥಾಪಿತವಾಗಿರ ಬಹುದೆಂದು ಇಲ್ಲಿ ದೊರೆತಿರುವ ಕೃಷ್ಣದೇವರಾಯನ ತ್ರುಟಿತ ಶಾಸನದಿಂದ ನಿರ್ಧರಿಸಬಹುದು.







ವಿಜಯೇಂದ್ರಸ್ವಾಮಿಯ ದೇವಾಲಯಕ್ಕೆ ಆಗಮಿಸುವ ಭಕ್ತರಿಗೆ ವಿಷ್ಣುವಿನ ಅಸೀನ (ಕುಳಿತಿರುವ) ಹಾಗೂ ಶಯನ (ಮಲಗಿರುವ) ರೂಪಗಳ ದರ್ಶನವು ಏಕಕಾಲಕ್ಕೆ ಲಭಿಸುವುದು ವಿಶೇಷ. ವಿಜಯನಗರ ಶಾಸನದಲ್ಲಿ ವಿಜಯ - ರಂಗನಾಥ ಎಂದು ಎರಡೂ ದೇವರುಗಳನ್ನು ಸಮೀಕರಿಸಿ ಕರೆಯಲಾಗಿದೆ.

ಬೇತಮಂಗಲದ ವಿಜಯೇಂದ್ರ ಸ್ವಾಮಿಯನ್ನು ಅರ್ಜುನನು ಪ್ರತಿಷ್ಠೆ ಮಾಡಿದನೆಂಬ ಐತಿಹ್ಯವಿದೆ. ಅರ್ಜುನನು ಸ್ವಾಮಿಯನ್ನು ಪ್ರತಿಷ್ಠೆ ಮಾಡಿ ಅರ್ಚಿಸಿದ ನಂತರ ಅವನಿಗೆ ವಿಜಯ ಲಭಿಸಿತೆಂದೂ ಆದರಿಂದಾಗಿಯೇ ದೇವನಿಗೆ ವಿಜಯೇಂದ್ರ ಎಂಬ ಹೆಸರು ಬಂದಿತೆಂದೂ ನಂಬಲಾಗಿದೆ.

ವಿಜಯೇಂದ್ರ ದೇವಾಲಯವು ಶಿಥಿಲವಾಗಿ ನೆಲಕಚ್ಚುವ ಹಂತವನ್ನು ತಲುಪಿತ್ತು. ಆದರೆ ಸ್ಥಳೀಯರೂ, ಜಿಲ್ಲಾ ಪರಿಷತ್ತಿನ ಅಧ್ಯಕ್ಷರೂ , ಹಲವಾರು ಶಿಕ್ಷಣ ಸಂಸ್ಥೆಗಳ ಮಾಲೀಕರೂ ಆದ ಶ್ರೀಯುತ ಅ.ಮು. ಲಕ್ಷ್ಮೀನಾರಾಯಣ ರವರ ನೇತೃತ್ವದಲ್ಲಿ ಜೀರ್ಣೋದ್ಧಾರವಾಗಿ ಸ್ವಾಮಿಗೆ ನಿತ್ಯ ಪೂಜೆ,ಪಕ್ಷ ಪೂಜೆಗಳು ಕ್ರಮಬದ್ಧವಾಗಿ ನಡೆಯಲು ವ್ಯವಸ್ಥೆ ಮಾಡಲಾಗಿದೆ. ಈ ನಿಟ್ಟಿನಲ್ಲಿ ಶ್ರೀಯುತರು ಅಭಿನಂದನಾರ್ಹರು.

### ಶ್ರೀ ಆಂಜನೇಯ ದೇವಾಲಯ:

ಬೇತಮಂಗಲದ ವಿಜಯೇಂದ್ರ ದೇವಾಲಯದ ಸಮೀಪದಲ್ಲಿರುವ ಆಂಜನೇಯ ದೇವಾಲಯದಲ್ಲಿ ಸುಮಾರು 17 ಅಡಿಗಳಷ್ಟು ಎತ್ತರದ ಆಂಜನೇಯನ ಭವ್ಯ ಮೂರ್ತಿಯಿದೆ. ವಿಜಯೇಂದ್ರ ಸ್ವಾಮಿ ದೇವಾಲಯದ ಕಡೆಗೆ ಪಾರ್ಶ್ವವಾಗಿ ಮುಖಮಾಡಿ ನಿಂತಿರುವ ಸುಂದರ ಹನುಮಂತನ ಮೂರ್ತಿಯ ಮುಂದೆ ನಿಂತರೆ ಮನದಲ್ಲಿ ಸಾರ್ಥಕತೆಯ ಭಾವ ಮೂಡುತ್ತದೆ. ಸ್ವಾಮಿಯ ಕಾಲಕೆಳಗೆ ರಾವಣನ ಮಗ ಅಕ್ಷಯ ಕುಮಾರ, ಶಿರದ ಸುತ್ತ ಸುತ್ತುವರೆದಿರುವ ಬಾಲ, ಮೇಲಕ್ಕೆ ಕೈಯನ್ನು ಎತ್ತಿ ಹಿಡಿದಿರುವ ಅಭಯ ಹಸ್ತ ಹಾಗೂ ಮತ್ತೊಂದು ಕೈಯಲ್ಲಿ ಹಿಡಿದಿರುವ ಬಾಳೆಯ ಗೊನೆ ನೋಡಲು ಸೊಗಸಾಗಿದೆ. ಮೂರ್ತಿಯ ಲಕ್ಷಣದಿಂದ ಇದು ವಿಜಯನಗರದ ಕಾಲದ್ದೆಂದು ನಿರ್ಧರಿಸಬಹುದು. ಈ ದೇವಾಲಯದ ನವರಂಗದಲ್ಲಿ ಶ್ರೀ ಸೀತಾರಾಮ ಲಕ್ಷ್ಮಣಾಂಜನೇಯರ ಅದೇ ಕಾಲಘಟ್ಟದ ವಿಗ್ರಹಗಳಿವೆ. ಬೇತಮಂಗಲದಲ್ಲಿ ಅರ್ಕೇಶ್ವರ ಹಾಗೂ ಧರ್ಮರಾಯ ಸ್ವಾಮಿಯ ದೇವಾಲಯಗಳೂ ಇವೆ. ಧರ್ಮರಾಯ ಸ್ವಾಮಿಗೆ ಕರಗ ಉತ್ಸವವು ಬಹು ವೈಭವದಿಂದ ಶ್ರೀ ರಾಮನವಮಿ ಸಂದರ್ಭದಲ್ಲಿ ಜರುಗುತ್ತದೆ.

ವಿಜಯೇಂದ್ರ ಸ್ವಾಮಿಯ ರಥೋತ್ಸವವು ಚೈತ್ರಮಾಸದ ಯುಗಾದಿ ಹಬ್ಬದಿಂದ ಶ್ರೀರಾಮನವಮಿವರೆಗೆ ವಿಶೇಷ ಬ್ರಹ್ಮ ರಥೋತ್ಸವ ಹಾಗೂ ಪೂಜಾ ಕೈಂಕರ್ಯಗಳೊಡನೆ ಬಹು ವೈಭವವಾಗಿ ನೆರವೇರುತ್ತದೆ.

ಬೇತಮಂಗಲದ ಕೆರೆಯ ಬದಿಯಲ್ಲಿರುವ ಅರ್ಕೇಶ್ವರ ದೇವಾಲಯದಲ್ಲಿ ಸಪ್ತಮಾತೃಕೆಯ ಬಿಡಿ ಶಿಲ್ಪಗಳು, ಕಾಲಭೈರವ, ವೀಣಾಧರ ಶಿವರ ಗಂಗರ ಕಾಲದ ಶಿಲ್ಪಗಳು ನೋಡಲು ಗಮನಾರ್ಹ ಮೂರ್ತಿಗಳಾಗಿವೆ. ಬೇತಮಂಗಲಕ್ಕೆ ಬರುವ ಪ್ರವಾಸಿಗರು ಇಲ್ಲಿಗೆ ಅತಿ ಸಮೀಪದಲ್ಲಿರುವ ಕಮ್ಮಸಂದ್ರದ ಕೋಟಿಲಿಂಗೇಶ್ವರ ಹಾಗೂ ಗುಟ್ಟಹಳ್ಳಿಯ ವೆಂಕಟೇಶ್ವರ ದೇವಾಲಯಗಳನ್ನೂ ನೋಡಬಹುದು.

### ಹೀಗೆ ಬನ್ನಿ:

ಬೆಂಗಳೂರು - ತಿರುಪತಿ ರಸ್ತೆಯಲ್ಲಿ ಕೋಲಾರದ ನಂತರ ಸುಮಾರು 2 ಕಿ.ಮೀ. ತರುವಾಯ ಎಡಕ್ಕೆ ಸರ್ವೀಸ್ ರಸ್ತೆಯಲ್ಲಿ ತಿರುಗಿ ಸ್ವಲ್ಪ ಮುಂದೆ ಸಾಗಿ ಕೋಲಾರ - ಬೇತಮಂಗಲ ರಸ್ತೆಯನ್ನು ಸೇರಿ ಬೇತಮಂಗಲಕ್ಕೆ ಬರಬಹುದು. ಒಟ್ಟು ದೂರ ಕೋಲಾರದಿಂದ 28 ಕಿ.ಮೀ. ಆಗುವುದು.



ಧಾರಾವಾಹಿ -5

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ


- ಇಂಗ್ಲೀಷ್ ಮೂಲ : ಡಾ॥ ಎನ್.ರಮೇಶನ್

- ಕನ್ನಡಾನುವಾದ : ದಿ॥ ಬಿ.ಎನ್. ಶ್ರೀನಿವಾಸನ್


**ಅಧ್ಯಾಯ -5**

**ಚಾರಿತ್ರಿಕ ಹಿನ್ನೆಲೆ**

**6. ಬಾಣರು -**

ಕೋಲಾರ (ಕರ್ನಾಟಕ ರಾಜ್ಯದ್ದು) ವನ್ನೂ ಸೇರಿದಂತೆ ಚಿತ್ತೂರು ಮತ್ತಿತರ ಹತ್ತಿರದ ಜಿಲ್ಲೆಗಳಲ್ಲಿ ಬಾಣರು ಪ್ರಭಾವಶಾಲಿಗಳಾಗಿದ್ದರು. ಇವರು ಪ್ರಮುಖ ಸಾಮಂತ ವಂಶದವರಲ್ಲಿ ಒಬ್ಬರಾಗಿದ್ದರು. ಈ ಜಿಲ್ಲೆಯಲ್ಲಿ ಈ ವಂಶದ 32 ಶಾಸನಗಳನ್ನು ಇದುವರೆಗೆ ಕಂಡುಕೊಳ್ಳಲಾಗಿದೆ. ಇವುಗಳಲ್ಲಿ 22 ರಷ್ಟು ಶಾಸನಗಳು ಪುಂಗನೂರು ಪ್ರಾಂತ್ಯದಲ್ಲಿವೆ. ಆದರೆ ಅವುಗಳಲ್ಲಿನ ಮಾಹಿತಿಗಳು ದಾಖಲಾಗುವಷ್ಟು ಖಚಿತವಾಗಿಲ್ಲ.

ಪೌರಾಣಿಕ ರಾಕ್ಷಸರ ರಾಜ ಮಹಾಬಲಿಯ ವಂಶಸ್ಥರು ತಾವು ಎಂದು ಬಾಣ ದೊರೆಗಳು ಹೇಳಿಕೊಂಡರು.ಕ್ರಿ.ಶ.ನಾಲ್ಕನೆಯ ಶತಕದ ಮಧ್ಯದಲ್ಲಿ ಕದಂಬರ ಮುಖ್ಯ ಮಯೂರ ಶರ್ಮನು ಶ್ರೀಶೈಲದ (ಶ್ರೀಪರ್ವತ) ದಟ್ಟವಾದ ಅರಣ್ಯಗಳಲ್ಲಿದ್ದುಕೊಂಡು ಇತರ ರಾಜರಿಂದ - ಬೃಹತ್ ಬಾಣನಿಂದಲೂ-ಕಪ್ಪವನ್ನು ಸ್ವೀಕರಿಸಿದ್ದನು.ಈ ಹೊತ್ತಿಗೆ ಬಾಣರು ಪಲ್ಲವರ ಸಾಮಂತ ರಾಗಿದ್ದರೆಂದು ತೋರುತ್ತದೆ.

ಬಾಣರಿಂದ ಆಳಲ್ಪಟ್ಟ ಪ್ರಾಂತವನ್ನು ಆಂಧ್ರಪಥ, ಪಶ್ಚಿಮಕ್ಷಿತಿ ಎಂದರೆ-ಆಂಧ್ರದ ಪಥದಲ್ಲಿನ (ಆಂಧ್ರಪಥದ) ಪಶ್ಚಿಮ ಭೂಭಾಗವೆಂದು ಕರೆಯಲಾಗುತ್ತಿತ್ತು.ಇತರ ಹೆಸರುಗಳು ವಡಗುವಳಿ ಯಿನ್‌ರ್ಮೆಕು, ವಡಗುವಳಿ 12000, ಮನ್ನೆ 2000. ಇದೇ ಬಾಣ ಪ್ರಾಂತ್ಯವನ್ನು ತಮಿಳಿನಲ್ಲಿ ಬಹುಶಃ ಪೆರುಂಬಾಣಪ್ಪಾಡಿ ಎಂದು ಕರೆದಿರಬೇಕು. ಹಿಂದೆಯೇ ಗಮನಿಸಿದಂತೆ ಪೆರುಂ ಬಾಣ ಪ್ಪಾಡಿಯು ಪಶ್ಚಿಮದಲ್ಲಿ ಪುಂಗನೂರಿನಿಂದ ಪೂರ್ವಕ್ಕೆ ಶ್ರೀಕಾಳಹಸ್ತಿಯವರೆಗೆ ವಿಸ್ತರಿಸಿದ್ದಿತು. ಪಾಲಾರ್ ನದಿಯ ಇದರ ದಕ್ಷಿಣಗಡಿಯಾಗಿದ್ದಿತು. ಶಾಸನಗಳು ಎಂಟು ಮಂದಿಯನ್ನು-ನಂದಿವರ್ಮ.

ಇವರಲ್ಲಿನ ಕೆಲವು ಪ್ರಮುಖರು ಪಲ್ಲವ, ರಾಷ್ಟ್ರಕೂಟ, ಚೋಳರೊಂದಿಗೂ ಸಾಮಂತರಾದ ವೈದುಂಬ, ಪಶ್ಚಿಮಗಂಗ, ನೊಳಂಬರೊಡನೆಯೂ ಸಂಘರ್ಷ ಹೊಂದಿದ್ದರು. ಸಾಮಂತರೊಡನೆ ವೈವಾಹಿಕ ಸಂಬಂಧಬೆಳೆಸಿ ಸಮರ್ಥರಾದರು. ಹೀಗೆ ಒಂದನೇ ವಿಕ್ರಮಾದಿತ್ಯನು ಪಶ್ಚಿಮ ಗಂಗರ ಒಂದನೇ ಪೃಥ್ವೀ ಪತಿಯ ಮಗಳನ್ನು ವಿವಾಹನಾದನು.ಇವನ ಮಗ ವಿಜಯಾದಿತ್ಯ I,ಮಲ್ಲದೇವ, ವಿಕ್ರಮಾದಿತ್ಯ I, ವಿಜಯಾದಿತ್ಯ II ವಿಕ್ರಮಾದಿತ್ಯ ವಿಜಯಾದಿತ್ಯIII ವಿಕ್ರಮಾದಿತ್ಯ III -ಇವರುಗಳನ್ನು

ಹೆಸರಿಸುತ್ತವೆ. ವಿಜಯಾದಿತ್ಯ-11-ನ ಎರಡು ಶಾಸನಗಳು ಕ್ರಿ.ಶ.898 ಹಾಗೂ ಕ್ರಿ.ಶ.905 ಕಾಲದ್ದು,ನಮ್ಮನ್ನು ರಾಷ್ಟ್ರಕೂಟರ ಎರಡನೆ ಕೃಷ್ಣನ ಕಾಲಕ್ಕೆ ಒಯ್ಯುತ್ತವೆ. ಈ ಹೊತ್ತಿಗೆ ಪಲ್ಲವರು ಚೋಳ ಸಾಮ್ರಾಜ್ಯಕ್ಕೆ ಎಡೆ ಮಾಡಿ ಕೊಟ್ಟಿದ್ದರು. ವಿಜಯಾದಿತ್ಯನ ಮಗಳ ಮಗ ಕನ್ನರದೇವನಿಗೆ-ಅವನ ಮಲ ಸಹೋದರನಾದ ಪರಾಂತಕ 1 ಬದಲಿಗೆ ಚೋಳ ಸಿಂಹಾಸನವನ್ನು ದಕ್ಕಿಸಿಕೊಡುವಲ್ಲಿ ರಾಷ್ಟ್ರಕೂಟರ ಎರಡನೆಯ ಕೃಷ್ಣ ವಿಫಲನಾದದ್ದರಿಂದ ಬಾಣರು ಬಹು ತೊಂದರೆಗೊಳಗಾಗ ಬೇಕಾಯಿತು. ಪರಾಂತಕ-1 ನಿಂದ ಆಜ್ಞಪ್ತನಾದ ಪಶ್ಚಿಮ ಗಂಗರ ಎರಡನೇ ಪೃಥ್ವೀ ಪತಿಯು,ಆಗ ಬಾಣ ಪ್ರಾಂತ್ಯದ ಪ್ರಭುಗಳಾಗಿದ್ದ ವಿಕ್ರಮಾದಿತ್ಯ-11 ಹಾಗೂ ವಿಜಯಾದಿತ್ಯ-111ರನ್ನು ಪದಚ್ಯುತಗೊಳಿಸಿದ. ಹೀಗಾಗಿ ಬಾಣರಾಜ್ಯವು ಪರಾಂತಕನ ವಶವಾಯಿತು. ಅವ ತನ್ನ ಆಡಳಿತಾಧಿಕಾರಿಯನ್ನು ನೇಮಿಸಿದ. ಆದರೆ ಬಾಣರ ಪ್ರಾಬಲ್ಯ ಕಡಿಮೆಯಾಗಲಿಲ್ಲ.ನಂತರದ ಒಬ್ಬ ಬಾಣದೊರೆ ಕೃಷ್ಣರಾಜನ ನೆಚ್ಚಿನ ಗೆಳೆಯ, (ರಾಷ್ಟ್ರಕೂಟ ಕೃಷ್ಣ-III ಕ್ರಿ.ಶ.939 - 967) ಎಂಬ ಬಿರುದನ್ನೂ ಪಡೆದ.

## 7. ವೈದುಂಬರು

ಇನ್ನೊಂದು ಸ್ಥಳೀಯ ಮನೆತನ ವೈದುಂಬರ ಆಳ್ವಿಕೆಯಲ್ಲೂ ಈ ಪ್ರಾಂತ್ಯಭಾಗವಿದ್ದಿತು. ಅವರ ರಾಜಧಾನಿ ವೈದುಂಬ ವ್ರೋಲು ಅಥವಾ ವೈದುಂಬನಗರ ಈ ಜಿಲ್ಲೆಯಲ್ಲಿದ್ದಿತು.ಈ ಮನೆತನದ ಹಲವಾರು ಶಾಸನಗಳು ಚಿತ್ತೂರು, ಕಡಪ ಜಿಲ್ಲೆಗಳಲ್ಲೂ,ಮೈಸೂರು ರಾಜ್ಯದ ಕೋಲಾರದಲ್ಲೂ ದೊರೆತಿವೆ.ದೊರೆತ ಸುಮಾರು ಇಪ್ಪತ್ತು ಶಾಸನಗಳು ಶಿಲಾಲೇಖ ಶಾಸ್ತ್ರರೀತ್ಯಾ ಕ್ರಿ.ಶ. 8,9,10 ನೇ ಶತಕಗಳಿಗೆ ಸೇರಿದ್ದು, ಬಹು ಕಡಿಮೆ ವಿವರಗಳನ್ನೊದಗಿಸುತ್ತವೆ. ಬಹುತೇಕವಾದವು ಬರೇ ವೀರಗಲ್ಲುಗಳಾಗಿ, ಯುದ್ಧದಲ್ಲಿ ಅಥವಾ ತುರುಗೋಳ್ ಕಾಳಗದಲ್ಲಿ ಮೃತವೀರರ ನೆನಪಿಗಾಗಿ ಆದವು. ಹೀಗಾಗಿ ಈ ಮನೆತನದ ವಿವರಣೆ ನೀಡುವುದು ಸಾಧ್ಯವಿಲ್ಲ.

ಈ ಪಾಳಯಗಾರರು-ವೀರಕುಲದವರಂತೆ-ಅನೇಕ ಬಾರಿ ತಮ್ಮ ನೆರೆಯಲೆಂಕುಳರು,ರೇನಾಡು ಚೋಳರು, ಪೆರುಂಬಾಣಪ್ಪಾಡಿಯ ಬಾಣರು, ನೊಳಂಬವಾಡಿಯ ನೊಳಂಬರುಗಳೊಡನೆ ಯುದ್ಧದಲ್ಲಿ ತೊಡಗಿರುತ್ತಿದ್ದರು. ಮನೆತನದ ಮೊದಲಪುರುಷ ವೈದುಂಬ ಮಹಾರಾಜ. ಅವನು ಇನ್ನೊಂದು ಬುಡಕಟ್ಟಿನ ಲೆಂಕುಳರೊಡನೆ ಯುದ್ಧ ಮಾಡಿದ. ವೈದುಂಬರ ಸೇನಾಪತಿ ಗಂಡರ ಮುತ್ತುರಾಜ ಯುದ್ಧದಲ್ಲಿ ಮಡಿದ.ಈ ಕಾಲದಲ್ಲಿ ವೈದುಂಬರು ಮದನಪಲ್ಲಿಯ ಚಿಪ್ಪಿಲ್ಲಿಯಲ್ಲಿ ರೇನಾಡು ಚೋಳರನ್ನು ಸೋಲಿಸಿ ಈ ಪ್ರಾಂತ್ಯವನ್ನು ವಶಪಡಿಸಿಕೊಂಡರು. ವೈದುಂಬರ ಮಹಾರಾಜನ ನಂತರ ಸಂಕಲಿ ಅಥವಾ ಗಂಡಸಂಕಲಿ ಬಂದಿರಬೇಕು. ಗಂಡ ತ್ರಿನೇತ್ರ ವೈದುಂಬ ಮಹಾರಾಜ ಮನೆತನದ ಮತ್ತೊಬ್ಬರಾಜ. ಈತ ಪ್ರಭಾವಿ ಹಾಗೂ ಮಹತ್ವಾಕಾಂಕ್ಷಿ,ಈತ ಇದ್ದದ್ದು ಹತ್ತನೆಯ ಶತಕ ದಾದಿಯಲ್ಲಿ,ಎಲ್ಲ ಕಾಲದಲ್ಲೂ ಯುದ್ಧದಲ್ಲಿ ತೊಡಗಿರುತ್ತಿದ್ದ. ತನ್ನ ಆಡಳಿತದ ಮೊದಲಿನಲ್ಲಿಯೇ ಜಟಾ ಚೋಳನನ್ನು ಸೋಲಿಸಿ ರೇನಾಡು - 7000 ಅನ್ನು ವಶಪಡಿಸಿಕೊಂಡ. ನೊಳಂಬರೊಡನೆ ಎರಡು ಬಾರಿ-ಮದನಪಲ್ಲಿಯ ಮುದಿವೇಡುಮುದುಮಡುವುನಲ್ಲೂ, ಅನಂತಪುರದ ಸೋರೆಮಡಿಯಲ್ಲೂ ಯುದ್ಧ ಮಾಡಿದ. ಈ ಯುದ್ಧಗಳಲ್ಲಿ ಜಯಶಾಲಿಯಾಗಿ ಕೋಲಾರ ಜಿಲ್ಲೆಯ ಹಲವು ಭಾಗಗಳನ್ನು ಕೈವಶ ಮಾಡಿಕೊಂಡ. ಈತನ ನಂತರ ಬಂದವರು ಮನುಜ ತ್ರಿನೇತ್ರ ಹಾಗೂ ಭುವನ ತ್ರಿನೇತ್ರ, ಮನುಜ ತ್ರಿನೇತ್ರ ಸಿಂಹಾಸನವೇರಿದ್ದು ಕ್ರಿ.ಶ.973ರಲ್ಲಿ. ಈತನ ರಾಜ್ಯವು-ಇಡಿಯಾಗಿ ಅಲ್ಲದಿದ್ದರೂ-ರೇನಾಡು, ಪಾಕ ನಾಡು,ಮುಲಿಕಿನಾಡುಗಳ ಭಾಗಗಳನ್ನಾದರೂ ಒಳ ಗೊಂಡಿದ್ದಿತು. ಶಾಸನಗಳಿಂದ ತಿಳಿದು ಬರುವ ಇತರ ವೈದುಂಬ ಪ್ರಭುಗಳೆಂದರೆ-ಇರಿಗಯ ಮಹಾರಾಜ,ನನ್ನಿಮ ರಾಯರ್,(ತುಕ್ಕರೈಯ ಮಗ) ಮಧುರ ಮಹಾರಾಜ ಮತ್ತು ಅವನ ಮಗ ಕಲಿಗ ತ್ರಿನೇತ್ರ ಭೀಮ ಮಹಾರಾಜ.

## 8. ಪಶ್ಚಿಮದ ಗಂಗರು ಹಾಗೂ ನೊಳಂಬ ಪಲ್ಲವರು-

ಈ ಪ್ರಾಂತ್ಯದಲ್ಲಿ ಪ್ರಭಾವಶಾಲಿಯಾಗಿದ್ದ ಮತ್ತೊಂದು ಮನೆತನವೆಂದರೆ ಕ್ರಿ.ಶ.ನಾಲ್ಕನೆಯ ಶತಮಾನದ ಕೊನೆಯಲ್ಲಿ ಆರಂಭವಾದದ್ದು ಎನ್ನಲಾದ ಪಶ್ಚಿಮ ಗಂಗರಸರ ಮನೆತನ. ಇವರು ಪಲ್ಲವರ ಸಾಮಂತರಾಗಿದ್ದರು.ಮನೆತನದ ಮುಖ್ಯನಾದ ಹರಿವರ್ಮ (ಕ್ರಿ.ಶ.450-460)ನಿಗೆ ಪಲ್ಲವರಾಜ ಒಂದನೇ ಸಿಂಹವರ್ಮನು,ಈ ಪ್ರಾಂತದ ಬಾಣರ ಹುಟ್ಟಡಗಿಸಲೆಂದು ಪಟ್ಟಕಟ್ಟಿದ. ಪಶ್ಚಿಮ ಗಂಗರ ರಾಜ್ಯವು ಶಿವಮಾರನ ಕಾಲದ ನಂತರ (ಕ್ರಿ.ಶ.788-812)ಎರಡು ಭಾಗವಾಗಿ ಅವನ ಮಗ ಮಾರಸಿಂಹ ಹಾಗೂ ತಮ್ಮ ವಿಜಯಾದಿತ್ಯರಲ್ಲಿ ಹಂಚಿ ಹೋಯಿತು. ಪುಂಗನೂರು ತಾಲ್ಲೂಕಿನಲ್ಲಿ ಕಂಡು ಬಂದ ಒಂದು ಶಾಸನದ ಪ್ರಕಾರ ಈ ಭಾಗವು ಮಾರಸಿಂಹನಿಗೆ ಸೇರಿತೆಂದು ತಿಳಿದು ಬರುತ್ತದೆ.ಪುಂಗನೂರು ತಾಲ್ಲೂಕಿನಲ್ಲಿ ದೊರೆತ ಶಾಸನಗಳಲ್ಲಿ ನಾಲ್ವರು ಗಂಗ ವಂಶಜರು-ಉತ್ತಮ ಚೋಳಗಂಗ (ಸೆನ್ನಗಚ್ಚಿ ಪತಿನಾಯನಾರ್) ಉತ್ತಮ ಚೋಳಯಾನೆ ವಿರ ಗಂಗನ್, ಉತ್ತಮ ಚೋಳಗಂಗಯಾನೆ ಸೆಲ್ವಗಂಗವೆಟ್ಟುಂ ಅಮರಾ ಭರಣಂ, ಸೆಲ್ವಗಂಗ, ಉತ್ತಮ ಚೋಳ ಗಂಗ ಪದ್ಮ ದೇವಸುತ ಸೆಲ್ವಾಗಂಗ ಉಲ್ಲೇಖಿತರಾಗಿದ್ದಾರೆ.ಗಂಗವಂಶದ

ಮುಖ್ಯಧಾರೆಯೊಡನೆ ಇವರುಗಳ ಸಂಬಂಧ ಖಚಿತವಾಗಿಲ್ಲ. ಚೋಳರು ಕ್ರಿ.ಶ.1004ರಲ್ಲಿ ಪಶ್ಚಿಮ ಗಂಗರ ರಾಜಧಾನಿ ತಲಕಾಡನ್ನು ವಶಪಡಿಸಿ ಕೊಂಡ ನಂತರ ಅವರ ಆಳ್ವಿಕೆಖಿಲವಾಯಿತು.

### 9. ನೊಳಂಬ ಪಲ್ಲವರು :

ನೊಳಂಬರು ಅಥವಾ ನೊಳಂಬ ಪಲ್ಲವರು ಎಂದು ಕರೆಯಲಾದ ಮತ್ತೊಂದು ವಂಶವೂ ಈ ಪ್ರದೇಶದ ಆಳ್ವಿಕೆಯೊಡನೆ ಸಂಬಂಧಿಸಿದ್ದಿತು.ಈ ವಂಶದಲ್ಲಿ ಹನ್ನೊಂದು ಮಂದಿ ರಾಜರು ಆಗಿ ಹೋದರು, ಇವರು ನೊಳಂಬವಾಡಿ-32000 ಅಧಿಪತಿಗಳಾಗಿದ್ದರು.ಇವರು ಬಾಣ,ವೈದುಂಬ, ಚೋಳ,ರಾಷ್ಟ್ರಕೂಟರೊಡನೆ ತಾಕಲಾಟದಲ್ಲಿ ತೊಡಗಿದ್ದರು.

ಕ್ರಿ.ಶ.878 ರಲ್ಲಿ ನೊಳಂಬವಂಶದ ಮಹೇಂದ್ರ 1 ನ ಆಳ್ವಿಕೆಯಿಂದ ನೊಳಂಬ ವಂಶ ಪ್ರಮುಖವಾಯಿತು. ಈತ ನೊಳಂಬರಲ್ಲಿಯೇ ಅತಿ ಪ್ರಭಾವಶಾಲಿ. ತನ್ನ ರಾಜ್ಯವನ್ನು ಎಲ್ಲ ದಿಕ್ಕಿನಲ್ಲೂ ವಿಸ್ತರಿಸಿದ. ತನ್ನ ಒಡೆಯನಾದ ಒಂದನೇ ರಾಚಮಲ್ಲನ ಅಪ್ಪಣೆಯಂತೆ ಪಶ್ಚಿಮ ಗಂಗರ ತಲಕಾಡನ್ನು ಹಿಡಿಯಲು ಹೊರಟು,ಆ ಹಾದಿಯಲ್ಲಿನ ಪುಲಿನಾಡನ್ನು ಆಕ್ರಮಿಸಲು ತನ್ನ ದಳಪತಿಗಳಾದ ಕಾಡುವೆಟ್ಟಿ, ಮತ್ತು ಮದುವವೆಠಿಗೆ ಹೇಳಿದ.ಕಾಡುವೆಟ್ಟಿಯು ಕೊಯರೂರನ್ನು ಆಕ್ರಮಿಸಿ ವಶಪಡಿಸಿಕೊಂಡ (ಪುಂಗನೂರಿನ ಬಳಿಯ ಲದ್ದಿಗಂ) ಇದನ್ನು ತಿಳಿದ ಬಾಣರಾಜ ವಿಜಯಾದಿತ್ಯ ವೀರ ಚೂಡಾಮಣಿ ಪ್ರಭುವು ತನ್ನ ಸೈನ್ಯದೊಡನೆ ಬಂದು ಶತ್ರುಸೈನ್ಯವನ್ನು ಧೂಳೀಪಟ ಮಾಡಿದ. ಕಾಳಗ ಭಯಂಕರವಾಗಿ ಹಲವು ಪ್ರಮುಖರು ಮರಣಿಸಿದರು. ಈ ಜಿಲ್ಲೆಯಲ್ಲಿ ದೊರೆತ ಇತರ ಶಾಸನಗಳು ಇನ್ನೊಬ್ಬ ದೊರೆ ಎರಡನೇ ವೀರಮಹೇಂದ್ರನವು. ಚೋಳ ರಾಜ್ಯದ ತೊಂಡಮಂಡಲದ ಮೇಲೆ ಇವನು ದಂಡೆತ್ತಿ ನಡೆದ. ಅಲ್ಲಿಂದ ತಿರುಗಿ ಬಂದ ವೀರ ಮಹೇಂದ್ರನು ಮೊಳಾಲವಾಡಿಗೆ ಬಂದು ಕೋಲಾರದಲ್ಲಿ ಪಾಳಯ ಹೂಡಿ ಒಬ್ಬನಿಗೆ ಅಧಿಕಾರ ನೀಡಿ ಪುಲಿನಾಡುವಿನ ಒಂದು ಗ್ರಾಮವನ್ನು ಬಳುವಳಿಯಾಗಿ ನೀಡಿದ.ಮತ್ತೊಬ್ಬ ನೊಳಂಬ ರಾಜ-ಇರಿವನೊಳಂಬ-11-ಕ್ರಿ.ಶ.10 ನೇ ಶತಮಾನದ ಮಧ್ಯದಲ್ಲಿ ಪುಲಿನಾಡುವಿನ ಮತ್ತೊಂದು ಗ್ರಾಮವನ್ನು ಓರ್ವ ವರ್ತಕನಿಗೆ ಬಳುವಳಿಯಾಗಿ ನೀಡುವವರೆಗೆ ಪುಲಿನಾಡು ನೊಳಂಬರ ಅಧೀನದಲ್ಲಿಯೇ ಇದ್ದಿತೆಂದು ತೋರುತ್ತದೆ.

(- ಮುಂದುವರಿಯುವುದು)

## ತಿರುಪತಿಯಲ್ಲಿ ದರ್ಶನೀಯ ಆಲಯಗಳು :

### ಶ್ರೀಗೋವಿಂದರಾಜಸ್ವಾಮಿ ಆಲಯ:

ಇತಿಹಾಸದ ಪ್ರಕಾರ ಈ ಕ್ಷೇತ್ರವನ್ನು ಶ್ರೀವೈಷ್ಣವಾಚಾರ್ಯರಾದ ರಾಮಾನುಜರು ಪ್ರತಿಷ್ಠಿಸಿದರೆಂದು ಪ್ರತೀತಿ. ಗೋವಿಂದರಾಜಸ್ವಾಮಿ ಆದಿಶೇಷನಮೇಲೆ ಶಯನ ಭಂಗಿಯಲ್ಲಿ ದರ್ಶನ ಕೊಡುತ್ತಾರೆ. ಆಂಡಾಳ್, ಪಾರ್ಥಸಾರಥಿ ಮತ್ತು ವೆಂಕಟೇಶ್ವರಸ್ವಾಮಿ ಗುಡಿಗಳು ಗೋವಿಂದರಾಜಸ್ವಾಮಿ ಆಲಯ ಪ್ರಾಂಗಣದಲ್ಲಿವೆ. ವಿಜಯನಗರ ರಾಜರ ಶಿಲ್ಪಕಳಾಚಾತುರ್ಯಕ್ಕೆ ಪ್ರಸಿದ್ಧಿಯಾಗಿದೆ ಈ ಆಲಯ.

### ಶ್ರೀಕೋದಂಡರಾಮಸ್ವಾಮಿ ಆಲಯ:

ತಿರುಪತಿ ರೈಲ್ವೇನಿಲ್ದಾಣದಿಂದ ಒಂದು ಕಿಲೋಮೀಟರು ದೂರದಲ್ಲಿರುವ ಈ ಆಲಯದಲ್ಲಿ ಕೋದಂಡರಾಮಸ್ವಾಮಿ ನೆಲೆಸಿದ್ದಾನೆ. ರಾವಣ ಸಂಹಾರದನಂತರ ಸೀತಾಲಕ್ಷ್ಮಣರೊಡನೆ ಶ್ರೀರಾಮನು ಈ ಸ್ಥಳದಲ್ಲಿ ಕೆಲವು ಕ್ಷಣ ಇದ್ದ ನೆನಪಿಗಾಗಿ ಈ ಆಲಯ ನಿರ್ಮಿಸಲಾಗಿದೆ.

### ಶ್ರೀಕಪಿಲೇಶ್ವರಸ್ವಾಮಿ ಆಲಯ:

ತಿರುಪತಿ ಪಟ್ಟಣಕ್ಕೆ 3 ಕಿ.ಮೀ ದೂರದಲ್ಲಿ ಪ್ರಸಿದ್ಧ ಶೈವ ಕ್ಷೇತ್ರವಿದೆ. ಕಪಿಲ ಮಹರ್ಷಿ ಪೂಜಿಸಿದ ಶಿವಲಿಂಗವಾದುದರಿಂದ ಕಪಿಲೇಶ್ವರನೆಂದು ಇಲ್ಲಿರುವ ತೀರ್ಥ ಕಪಿಲತೀರ್ಥ ಎಂದು ಕರೆಯಲಾಗಿದೆ

### ಅಲಮೇಲುಮಂಗಾಪುರ (ತಿರುಚಾನೂರು):

ತಿರುಪತಿಗೆ 5 ಕಿ.ಮೀ. ದೂರದಲ್ಲಿರುವ ಪ್ರಾಚೀನವಾದ ಕ್ಷೇತ್ರ ತಿರುಚಾನೂರು. ಇದನ್ನೇ ಅಲಮೇಲು ಮಂಗಾಪುರವೆಂದು ಕರೆಯುತ್ತಾರೆ. ಶ್ರೀ ವೆಂಕಟೇಶ್ವರಸ್ವಾಮಿಯ ಪತ್ನಿಯಾದ ಶ್ರೀ ಪದ್ಮಾವತಿ ಅಮ್ಮನವರಿಗೆ ಇಲ್ಲಿ ಪೂಜೆ ನಡೆಯುತ್ತಿವೆ. ತಿರುಮಲೆಗೆ ಬಂದ ಯಾತ್ರಿಕರು ತಿರುಚಾನೂರು ಅಮ್ಮನವರನ್ನು ದರ್ಶಿಸಿದರೆ ತಮ್ಮ ಯಾತ್ರೆ ಫಲವಂತವಾಗುತ್ತದೆಯೆಂದು ಪ್ರಸಿದ್ಧಿ. ಕಾರಣ ತಿರುಮಲೆಯ ಯಾತ್ರಿಕರು, ತಿರುಚಾನೂರುಗೆ ಹೋಗಿ ಶ್ರೀಪದ್ಮಾವತಿಯನ್ನು ಪೂಜಿಸುತ್ತಾರೆ. ತಿರುಚಾನೂರಿನಲ್ಲಿರುವ ಪವಿತ್ರ ಪುಷ್ಕರಿಣಿ "ಪದ್ಮಸರೋವರ" ದಲ್ಲಿ ಶ್ರೀ ಪದ್ಮಾವತಿ ಅಮ್ಮನವರು ಆವಿರ್ಭವಿಸಿದಳೆಂದು ಸ್ಥಳ ಪುರಾಣ.



# ಶ್ರೀ ಸಂಕಟನಾಶನ ಗಣೇಶ ಸ್ತೋತ್ರಂ

## ನಾರದ ಉವಾಚ ।

ಪ್ರಣಮ್ಯ ಶಿರಸಾ ದೇವಂ ಗೌರೀಪುತ್ರಂ ವಿನಾಯಕಮ್ ।
ಭಕ್ತಾವಾಸಂ ಸ್ಮರೇನ್ನಿತ್ಯಂ ಆಯುಷ್ಕಾಮಾರ್ಥಸಿದ್ಧಯೇ ॥೧॥

ಪ್ರಥಮಂ ವಕ್ರತುಂಡಂ ಚ ಏಕದಂತಂ ದ್ವಿತೀಯಕಮ್ ।
ತೃತೀಯಂ ಕೃಷ್ಣಪಿಂಗಾಕ್ಷಂ ಗಜವಕ್ತ್ರಂ ಚತುರ್ಥಕಮ್ ॥೨॥

ಲಂಬೋದರಂ ಪಂಚಮಂ ಚ ಷಷ್ಠಂ ವಿಕಟಮೇವ ಚ ।
ಸಪ್ತಮಂ ವಿಘ್ನರಾಜಂ ಚ ಧೂಮ್ರವರ್ಣಂ ತಥಾಷ್ಟಕಮ್ ॥೩॥

ನವಮಂ ಬಾಲಚಂದ್ರಂ ಚ ದಶಮಂ ತು ವಿನಾಯಕಮ್ ।
ಏಕಾದಶಂ ಗಣಪತಿಂ ದ್ವಾದಶಂ ತು ಗಜಾನನಮ್॥೪॥

ದ್ವಾದಶೈತಾನಿ ನಾಮಾನಿ ತ್ರಿಸಂಧ್ಯಂ ಯಃ ಪಠೇನ್ನರಃ
ನ ಚ ವಿಘ್ನಭಯಂ ತಸ್ಯ ಸರ್ವಸಿದ್ಧಿಕರಂ ಪರಮ್ ॥೫॥

ವಿದ್ಯಾರ್ಥೀ ಲಭತೇ ವಿದ್ಯಾಂ ಧನಾರ್ಥೀ ಲಭತೇ ಧನಮ್ ।
ಪುತ್ರಾರ್ಥೀ ಲಭತೇ ಪುತ್ರಾನ್ಮೋಕ್ಷಾರ್ಥೀ ಲಭತೇ ಗತಿಮ್ ॥೬॥

ಜಪೇದ್ಗಣಪತಿ ಸ್ತೋತ್ರಂ ಷಡ್ಭಿರ್ಮಾಸೈಃ ಫಲಂ ಲಭೇತ್ ।
ಸಂವತ್ಸರೇಣ ಸಿದ್ಧಿಂ ಚ ಲಭತೇ ನಾತ್ರ ಸಂಶಯಃ॥೭॥

ಅಷ್ಟಭ್ಯೋ ಬ್ರಾಹ್ಮಣೇಭ್ಯಶ್ಚ - ಇತಿ ಪಾಠಭೇದಃ
ಬ್ರಾಹ್ಮಣಾನಾಂ ಚ ಲಿಖಿತ್ವಾ ಯಃ ಸಮರ್ಪಯೇತ್ ।
ತಸ್ಯ ವಿದ್ಯಾ ಭವೇತ್ಸರ್ವಾ ಗಣೇಶಸ್ಯ ಪ್ರಸಾದತಃ ॥೮॥

ಇತಿ ಶ್ರೀ ನಾರದಪುರಾಣೇ ಸಂಕಟನಾಶನಂ ನಾಮ ಗಣೇಶ ದ್ವಾದಶನಾಮ ಸ್ತೋತ್ರಂ

# ಶ್ರೀ ಕೃಷ್ಣಾಷ್ಟೋತ್ತರ ಶತನಾಮಾವಳಿ

ಓಂ ಕೃಷ್ಣಾಯ ನಮಃ
ಓಂ ಕಮಲಾನಾಥಾಯ ನಮಃ
ಓಂ ವಾಸುದೇವಾಯ ನಮಃ
ಓಂ ಸನಾತನಾಯ ನಮಃ
ಓಂ ವಸುದೇವಾತ್ಮಜಾಯ ನಮಃ
ಓಂ ಪುಣ್ಯಾಯ ನಮಃ
ಓಂ ಲೀಲಾಮಾನುಷ ವಿಗ್ರಹಾಯ ನಮಃ
ಓಂ ಶ್ರೀವತ್ಸ ಕೌಸ್ತುಭಧರಾಯ ನಮಃ
ಓಂ ಯಶೋದಾವತ್ಸಲಾಯ ನಮಃ
ಓಂ ಹರಯೇ ನಮಃ ॥10॥
ಓಂ ಚತುರ್ಭುಜಾತ್ತ ಚಕ್ರಾಸಿಗದಾ
ಶಂಖಾಂದ್ಯುದಾಯುಧಾಯ ನಮಃ
ಓಂ ದೇವಕೀನಂದನಾಯ ನಮಃ
ಓಂ ಶ್ರೀಶಾಯ ನಮಃ
ಓಂ ನಂದಗೋಪ ಪ್ರಿಯಾತ್ಮಜಾಯ ನಮಃ
ಓಂ ಯಮುನಾ ವೇಗಸಂಹಾರಿಣೇ ನಮಃ
ಓಂ ಬಲಭದ್ರ ಪ್ರಿಯಾನುಜಾಯ ನಮಃ
ಓಂ ಪೂತನಾ ಜೀವಿತಹರಾಯ ನಮಃ
ಓಂ ಶಕಟಾಸುರ ಭಂಜನಾಯ ನಮಃ
ಓಂ ನಂದವ್ರಜ ಜನಾನಂದಿನೇ ನಮಃ
ಓಂ ಸಚ್ಚಿದಾನಂದ ವಿಗ್ರಹಾಯ ನಮಃ ॥20॥
ಓಂ ನವನೀತ ವಿಲಿಪ್ತಾಂಗಾಯ ನಮಃ
ಓಂ ನವನೀತ ನಟಾಯ ನಮಃ
ಓಂ ಅನಘಾಯ ನಮಃ
ಓಂ ನವನೀತ ನವಾಹಾರಾಯ ನಮಃ
ಓಂ ಮುಚುಕುಂದ ಪ್ರಸಾದಕಾಯ ನಮಃ
ಓಂ ಷೋಡಶಸ್ತ್ರೀ ಸಹಸ್ರೇಶಾಯ ನಮಃ
ಓಂ ತ್ರಿಭಂಗಿನೇ ನಮಃ
ಓಂ ಮಧುರಾಕೃತಯೇ ನಮಃ
ಓಂ ಶುಕವಾಗಮೃತಾಬ್ಧೀಂದವೇ ನಮಃ
ಓಂ ಗೋವಿಂದಾಯ ನಮಃ ॥30॥
ಓಂ ಯೋಗಿನಾಂ ಪತಯೇ ನಮಃ
ಓಂ ವತ್ಸವಾಟಚರಾಯ ನಮಃ
ಓಂ ಅನಂತಾಯ ನಮಃ
ಓಂ ಧೇನುಕಾಸುರ ಭಂಜನಾಯ ನಮಃ
ಓಂ ತೃಣೀಕೃತ ತೃಣಾವರ್ತಾಯ ನಮಃ
ಓಂ ಯಮಳಾರ್ಜುನ ಭಂಜನಾಯ ನಮಃ
ಓಂ ಉತ್ತಾಲತಾಲಭೇತ್ರೇ ನಮಃ
ಓಂ ತಮಾಲ ಶ್ಯಾಮಲಾಕೃತಯೇ ನಮಃ
ಓಂ ಗೋಪಗೋಪೀಶ್ವರಾಯ ನಮಃ
ಓಂ ಯೋಗಿನೇ ನಮಃ ॥40॥
ಓಂ ಕೋಟಿಸೂರ್ಯ ಸಮಪ್ರಭಾಯ ನಮಃ
ಓಂ ಇಲಾಪತಯೇ ನಮಃ
ಓಂ ಪರಂ ಜ್ಯೋತಿಷೇ ನಮಃ
ಓಂ ಯಾದವೇಂದ್ರಾಯ ನಮಃ
ಓಂ ಯದೂದ್ವಹಾಯ ನಮಃ
ಓಂ ವನಮಾಲಿನೇ ನಮಃ
ಓಂ ಪೀತವಾಸಸೇ ನಮಃ
ಓಂ ಪಾರಿಜಾತಾಪಹಾರಕಾಯ ನಮಃ
ಓಂ ಗೋವರ್ಧನಾಚಲೋದ್ಧರ್ತ್ರೇ ನಮಃ
ಓಂ ಗೋಪಾಲಾಯ ನಮಃ ॥50॥
ಓಂ ಸರ್ವಪಾಲಕಾಯ ನಮಃ
ಓಂ ಅಜಾಯ ನಮಃ
ಓಂ ನಿರಂಜನಾಯ ನಮಃ
ಓಂ ಕಾಮಜನಕಾಯ ನಮಃ
ಓಂ ಕಂಜಲೋಚನಾಯ ನಮಃ
ಓಂ ಮಧುಘ್ನೇ ನಮಃ
ಓಂ ಮಧುರಾನಾಥಾಯ ನಮಃ
ಓಂ ದ್ವಾರಕಾನಾಯಕಾಯ ನಮಃ
ಓಂ ಬಲಿನೇ ನಮಃ
ಓಂ ಬೃಂದಾವನಾಂತ ಸಂಚಾರಿಣೇ ನಮಃ ॥60॥
ಓಂ ತುಲಸೀದಾಮ ಭೂಷಣಾಯ ನಮಃ
ಓಂ ಶ್ಯಮಂತಕ ಮಣೇರ್ಹರ್ತ್ರೇ ನಮಃ
ಓಂ ನರನಾರಾಯಣಾತ್ಮಕಾಯ ನಮಃ
ಓಂ ಕುಬ್ಜಾಕೃಷ್ಣಾಂಬರಧರಾಯ ನಮಃ
ಓಂ ಮಾಯಿನೇ ನಮಃ
ಓಂ ಪರಮಪುರುಷಾಯ ನಮಃ
ಓಂ ಮುಷ್ಟಿಕಾಸುರ ಚಾಣೂರ ಮರ್ದನಾಯ ನಮಃ
ಓಂ ಮಲ್ಲಯುದ್ಧ ವಿಶಾರದಾಯ ನಮಃ
ಓಂ ಸಂಸಾರವೈರಿಣೇ ನಮಃ
ಓಂ ಕಂಸಾರಯೇ ನಮಃ ॥70॥
ಓಂ ಮುರಾರಯೇ ನಮಃ
ಓಂ ನರಕಾಂತಕಾಯ ನಮಃ
ಓಂ ಅನಾದಿ ಬ್ರಹ್ಮಚಾರಿಣೇ ನಮಃ

ಓಂ ಕೃಷ್ಣಾವ್ಯಸನ ಕರ್ಶಕಾಯ ನಮಃ
ಓಂ ಶಿಶುಪಾಲ ಶಿರಶ್ಛೇತ್ರೇ ನಮಃ
ಓಂ ದುರ್ಯೋಧನ ಕುಲಾಂತಕಾಯ ನಮಃ
ಓಂ ವಿದುರಾಕ್ರೂರ ವರದಾಯ ನಮಃ
ಓಂ ವಿಶ್ವರೂಪ ಪ್ರದರ್ಶಕಾಯ ನಮಃ
ಓಂ ಸತ್ಯವಾಚೇ ನಮಃ
ಓಂ ಸತ್ಯ ಸಂಕಲ್ಪಾಯ ನಮಃ ॥80॥
ಓಂ ಸತ್ಯಭಾಮಾರತಾಯ ನಮಃ
ಓಂ ಜಯಿನೇ ನಮಃ
ಓಂ ಸುಭದ್ರಾ ಪೂರ್ವಜಾಯ ನಮಃ
ಓಂ ಜಿಷ್ಣವೇ ನಮಃ
ಓಂ ಭೀಷ್ಮ ಮುಕ್ತಿ ಪ್ರದಾಯಕಾಯ ನಮಃ
ಓಂ ಜಗದ್ಗುರವೇ ನಮಃ
ಓಂ ಜಗನ್ನಾಥಾಯ ನಮಃ
ಓಂ ವೇಣುನಾದ ವಿಶಾರದಾಯ ನಮಃ
ಓಂ ವೃಷಭಾಸುರ ವಿಧ್ವಂಸಿನೇ ನಮಃ
ಓಂ ಬಾಣಾಸುರ ಕರಾಂತಕಾಯ ನಮಃ ॥90॥
ಓಂ ಯುಧಿಷ್ಠಿರ ಪ್ರತಿಷ್ಠಾತ್ರೇ ನಮಃ
ಓಂ ಬರ್ಹಿಬರ್ಹಾಸಂತಸಕಾಯ ನಮಃ
ಓಂ ಪಾರ್ಥಸಾರಥಯೇ ನಮಃ
ಓಂ ಅವ್ಯಕ್ತಾಯ ನಮಃ
ಓಂ ಗೀತಾಮೃತ ಮಹೋದಧಯೇ ನಮಃ
ಓಂ ಕಾಳೀಯ ಫಣಿಮಾಣಿಕ್ಯ ರಂಜಿತ
ಶ್ರೀ ಪದಾಂಬುಜಾಯ ನಮಃ
ಓಂ ದಾಮೋದರಾಯ ನಮಃ
ಓಂ ಯಜ್ಞ್ನಭೋಕ್ರೇ ನಮಃ
ಓಂ ದಾನವೇಂದ್ರ ವಿನಾಶಕಾಯ ನಮಃ
ಓಂ ನಾರಾಯಣಾಯ ನಮಃ ॥100॥
ಓಂ ಪರ ಬ್ರಹ್ಮಣೇ ನಮಃ
ಓಂ ಪನ್ನಗಾಶನ ವಾಹನಾಯ ನಮಃ
ಓಂ ಜಲಕ್ರೀಡಾಸಮಾಸಕ್ತ ಗೋಪೀವಸ್ತ್ರಾಪಹಾರಕಾಯ ನಮಃ
ಓಂ ಪುಣ್ಯ ಶ್ಲೋಕಾಯ ನಮಃ
ಓಂ ತೀರ್ಥಪಾದಾಯ ನಮಃ
ಓಂ ವೇದವೇದ್ಯಾಯ ನಮಃ
ಓಂ ದಯಾನಿಧಯೇ ನಮಃ
ಓಂ ಸರ್ವತೀರ್ಥಾತ್ಮಕಾಯ ನಮಃ
ಓಂ ಸರ್ವಗ್ರಹರೂಪಿಣೇ ನಮಃ
ಓಂ ಪರಾತ್ಪರಾಯ ನಮಃ



ಇತಿ ಶ್ರೀ ಕೃಷ್ಣಾಷ್ಟೋತ್ತರ
ಶತನಾಮಾವಳಿಃ ಸಮಾಪ್ತಾ ॥




25-07-2021 ರಂದು ಚಾತುರ್ಮಾಸ್ಯ ವ್ರತದೀಕ್ಷೆಯನ್ನು ಸ್ವೀಕರಿಸುತ್ತಿರುವ ಶ್ರೀ ಶ್ರೀ ಶ್ರೀ ದೊಡ್ಡ ಜೀಯರ್, ಶ್ರೀ ಶ್ರೀ ಶ್ರೀ ಚಿಕ್ಕ ಜೀಯರ್ ಸ್ವಾಮಿಯವರಿಗೆ ಹಣ್ಣುಗಳನ್ನು ನೀಡುತ್ತಿರುವ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಡಾ॥ ಕೆ.ಎಸ್.ಜವಹರ್ ರೆಡ್ಡಿಯವರು ಐ.ಎ.ಎಸ್., ಈ ಕಾರ್ಯಕ್ರಮದಲ್ಲಿ ತಿ.ತಿ.ದೇ. ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ, ಐ,ಡಿ.ಈ.ಎಸ್ ಮತ್ತು ಉನ್ನತಾಧಿಕಾರಿಗಳು ಪಾಲ್ಗೊಂಡರು. ಈ ಸಂದರ್ಭದಲ್ಲಿ ಇಬ್ಬರು ಜೀಯರ್‌ಗಳು ಸ್ವಾಮಿಯವರ ದರ್ಶನ ಪಡೆದರು.




2021 ಜುಲೈ 16 ರಿಂದ 24 ರ ವರೆಗೆ ನಡೆದ ತಿರುಚಾನೂರು ಪದ್ಮಾವತಿ ಅಮ್ಮನವರ ಆಲಯದಲ್ಲಿ ಶಾಸ್ತ್ರೋಕ್ತವಾಗಿ ನಡೆದ ಕನಕಾಂಬರ ಸಹಿತ ಕೋಟಿ ಮಲ್ಲಿಗೆಯ ಪುಷ್ಪ ಮಹಾಯಾಗದಲ್ಲಿ ಪಾಲ್ಗೊಂಡ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಡಾ॥ ಕೆ.ಎಸ್.ಜವಹರ್ ರೆಡ್ಡಿ ಐ.ಎ.ಎಸ್., ರವರು ತಿ.ತಿ.ದೆ. ಸಿ.ವಿ. ಅಂಡ್. ಎಸ್. ಓ. ಶ್ರೀ ಗೋಪಿನಾಥ್ ಜೆಟ್ಟಿ ಐ.ಪಿ.ಎಸ್.




ತಿರುಮಲೆಯಲ್ಲಿ ನಡೆದ ಸುಂದರಕಾಂಡ ಪಾರಾಯಣ ದೃಶ್ಯ.




25-07-2021 ರಂದು ಅಪ್ಪಲಾಯಗುಂಟ, ಉಭಯದೇವಿಯರೊಂದಿಗೆ ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರಿಗೆ ನಡೆದ ಪುಷ್ಪಯಾಗ ಮಹೋತ್ಸವ, ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ., ಸಂಯುಕ್ತಕಾರ್ಯನಿರ್ವಹಣಾಧಿಕಾರಿ ಶ್ರೀಮತಿ. ಸದಾ ಭಾರ್ಗವಿ ಐ.ಎ.ಎಸ್., ರವರು

# ಮಹಿಮಾನ್ವಿತ ಕ್ಷೇತ್ರ ಮಂತ್ರಾಲಯ

– ಡಾ|| ಸುಮನಾ ಬದರೀನಾಥ್



ಪುಣ್ಯ ಭೂಮಿಯಾದ ಭಾರತ ದೇಶದ ಪವಿತ್ರ ತೀರ್ಥ ಕ್ಷೇತ್ರಗಳ ಮಾಲಿಕೆಯಲ್ಲಿ ಗುರು ರಾಘವೇಂದ್ರ ಸ್ವಾಮಿಗಳು ನೆಲಸಿರುವ ಮಂತ್ರಾಲಯ ರತ್ನ ಪ್ರಾಯವಾಗಿ ಕಂಗೊಳಿಸುತ್ತಿದೆ. ಸುರಪನಾಲಯದಂತೆ ವಿರಾಜಿಸುವ ಮಂತ್ರಾಲಯದ ಮಹಿಮೆ ದಿಗಂತ ವಿಶ್ರಾಂತವಾಗಿದೆ. ಮಂಗಳದ ರಾಶಿಯನ್ನೇ ಅನುಗ್ರಹಿಸುವ ಮಹಾ ಮಹಿಮೋಪೇತರಾದ ರಾಘವೇಂದ್ರ ಗುರುಸಾರ್ವಭೌಮರು ವಿರಾಜಿಸುತ್ತಿರುವ ಮಂಗಳ ಕ್ಷೇತ್ರ ಮಂತ್ರಾಲಯ. ಗುರುರಾಜರು ಜನುಮ ಜನುಮಾಂತರಗಳಲ್ಲಿ ಪ್ರಹ್ಲಾದರಾಜರಾಗಿಯೂ, ವ್ಯಾಸರಾಯರಾಗಿಯೂ, ರಾಘವೇಂಧ್ರರಾಗಿಯೂ ಅನುಷ್ಠಾನ ಮಾಡಿದ ಹರಿಭಕ್ತಿಯ ಎಲ್ಲಾ ಮಹಾ ಮಂತ್ರಗಳ ಜಪತಪಗಳ ಮಹಾಶ್ಯಕ್ತಿ ಪ್ರಕಟಗೊಳ್ಳುತ್ತಿರುವ ಮಂತ್ರ ಸಿದ್ಧಿಯ ಕ್ಷೇತ್ರ ಮಂತ್ರಾಲಯ. ಕಷ್ಟ ಕಳೆದು ಇಷ್ಟಾರ್ಥ ನೀಡುವ ಗುರುಗಳ ದರ್ಶನಕ್ಕಾಗಿ ಭಕ್ತ ಸಂದೋಹ ಅರಸಿ ಧಾವಿಸಿ ಬರುವ ಪರಮ ಪವಿತ್ರ ತೀರ್ಥ ಕ್ಷೇತ್ರ ಮಂತ್ರಾಲಯ ಸುರಪನಾಲಯದಂತೆ ಮಂತ್ರಾಲಯ ಕರೆಸುವುದು ಕಂಗೊಳಿಸುವುದು ನೋಳ್ಪ ಜನಕೆ ಎಂದು ಹರಿದಾಸರಿಂದ ಹೊಗಳಲ್ಪಟ್ಟಿರುವ ಕ್ಷೇತ್ರ ಮಂತ್ರಾಲಯ.

ಮಂತ್ರಾಲಯ ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಯ ಆದವಾನಿ ತಾಲೂಕಿನಲ್ಲಿ, ಆದವಾನಿಯಿಂದ ೫೫ ಕಿ.ಮಿ. ದೂರದಲ್ಲಿ ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳ ಗಡಿಭಾಗದಲ್ಲಿದೆ. ಮುಂಬೈ ಬೆಂಗಳೂರು ರೈಲು ಮಾರ್ಗದ ತುಂಗಭದ್ರಾ ಅಥವಾ ಮಂತ್ರಾಲಯಂ ರೋಡ್ ರೈಲ್ವೆ ನಿಲ್ದಾಣದಿಂದ ೧೪ ಕಿ.ಮೀ. ದೂರದಲ್ಲಿದೆ. ರಾಜ್ಯದ ಎಲ್ಲೆಡೆಯಿಂದ ಬಸ್ ಸೌಕರ್ಯವೂ ಚೆನ್ನಾಗಿದೆ. ಯಾತ್ರೆ ಬರಲು ಅತಿ ಸುಲಭವಾದ ಸುಗಮವಾದ ಕ್ಷೇತ್ರವಿದು.

ಯುಗ ಯುಗಗಳಿಂದಲೂ ಚತುರ್ಯುಗಗಳಲ್ಲೂ ಮಂತ್ರಾಲಯ ಕ್ಷೇತ್ರವು ತಪಶ್ಯಕ್ತಿಯ ಮಂತ್ರ ಸಿದ್ಧಿಯ ತಾಣವಾಗಿದೆ. ಕೃತ ಯುಗದಲ್ಲಿ ನರಸಿಂಹ ರೂಪಿ ಶ್ರೀಹರಿಯನ್ನು ಸಾಕ್ಷಾತ್ಕರಿಸಿಕೊಂಡ ಭಾಗವತೋತ್ತಮರಾದ ಮಹಾ ಹರಿಭಕ್ತರಾದ ಪ್ರಹ್ಲಾದ ರಾಜರು ಈ ಸ್ಥಳದಲ್ಲಿಯೇ ಅನೇಕ ಯಜ್ಞ ಯಾಗಾದಿಗಳನ್ನು ಮಾಡಿದರು ಅವರ ಕುಲ ದೇವತೆಯಾದ ಮಂಚಾಲಾಂಬಿಕೆಯ ಸನ್ನಿಧಾನವಿದ್ದು ಇಲ್ಲಿಯೇ ಹಿರಣ್ಯಕಶ್ಯಪು ಮತ್ತು ಹಿರಣ್ಯಾಕ್ಷರು ಘೋರ ತಪಸ್ಸನ್ನು ಆಚರಿಸಿ ಪರಮಶಿವನನ್ನು ಸಾಕ್ಷಾತ್ಕರಿಸಿಕೊಂಡಿದ್ದು ಮಂತ್ರಾಲಯ ಕ್ಷೇತ್ರದ ಸುತ್ತಮುತ್ತಲಿನ ಪ್ರಾಂತದಲ್ಲಿಯೇ, ಅಂದು ಇದು ಸಿದ್ಧಿಪ್ರದವಾದ ತಪೋ ಭೂಮಿಯಾಗಿತ್ತು ಶ್ರೀರಾಮಚಂದ್ರ ದೇವರು ಲಕ್ಷ್ಮಣ ಸಹಿತ ತ್ರೇತಾಯುಗದಲ್ಲಿ ಸೀತಾನ್ವೇಷಣೆಯ ಸಮಯದಲ್ಲಿ ಈ ಕ್ಷೇತ್ರದ ಸುತ್ತ ಮುತ್ತ ಸಂಚರಿಸಿದ್ದಾರೆ. ಹೀಗೆ ಸಂಚರಿಸುತ್ತಾ ಮಂತ್ರಾಲಯದಿಂದ ಎಂಟು ಕಿ.ಮೀ. ದೂರದಲ್ಲಿರುವ ಮಾಧವರಂ (ಮಹಾದ್ವಾರ) ಬಳಿಯಿರುವ ಪ್ರದೇಶದಲ್ಲಿನ ಶಿಲೆಯಲ್ಲಿ ಕುಳಿತು ವಿಶ್ರಾಂತಿ ಪಡೆದಿದ್ದರು. ಶ್ರೀರಾಮದೇವರು ಮಂತ್ರಾಲಯದಲ್ಲಿ ಶ್ರೀರಾಮಲಿಂಗೇಶ್ವರನನ್ನು ಪ್ರತಿಷ್ಠಾಪಿಸಿದರು. ಹೀಗೆ ಈ ಕ್ಷೇತ್ರವು ಶ್ರೀ ರಾಮಲಕ್ಷ್ಮಣರ ಚರಣ ಧೂಳಿಯಿಂದ ಪರಮಪಾವನವಾಯಿತು. (ಆ ಕಲ್ಲಿನ ಮಹಿಮೆಯನ್ನು ತಿಳಿದಿದ್ದ ಶ್ರೀರಾಘವೇಂದ್ರ ಸ್ವಾಮಿಗಳೂ ಮುಂದೆ ತಮ್ಮ ಬೃಂದಾವನವನ್ನು ಈ ಶ್ರೀರಾಮನ ಪಾದ ಸ್ಪರ್ಶದ ಶಿಲೆಯಿಂದಲೇ ಮಾಡಿಸಿಕೊಂಡರು.

ದ್ವಾಪರ ಯುಗದಲ್ಲೂ ಈ ಕ್ಷೇತ್ರ ಶ್ರೀಕೃಷ್ಣನ ಚರಣ ಧೂಳಿಯಿಂದ ಪರಮ ಪವಿತ್ರವಾಯಿತು. ಧರ್ಮರಾಜನು ಅಶ್ವಮೇಧ ಯಾಗ ಮಾಡಿದಾಗ, ಕುದುರೆಯು ಈ ಪ್ರದೇಶಕ್ಕೆ ಬಂದಾಗ ಅಲ್ಲಿ ರಾಜ್ಯವಾಳುತ್ತಿದ್ದ ಅನುಸಾಲ್ವನೆಂಬ ರಾಜನು ಕುದುರೆಯನ್ನು ಕಟ್ಟಿ ಹಾಕಿದನು. ಅನುಸಾಲ್ವನು ಪ್ರಹ್ಲಾದನು ಹಿಂದೆ ಯಾಗವನ್ನು ಆಚರಿಸುತ್ತಿದ್ದ ಯಜ್ಞ ಕುಂಡದ ಮೇಲೆ ನಿಂತು ಯುದ್ಧ ಮಾಡುತ್ತಿದ್ದುದರಿಂದ ಅರ್ಜುನನಿಗೆ ಅವನನ್ನು ಸೋಲಿಸಲು ಆಗಲಿಲ್ಲ. ಆ ಸ್ಥಳದ ಮಹಿಮೆ ಹಾಗಿತ್ತು. ಸ್ಥಳದ ಮಹಿಮೆಯಿಂದಾಗಿ ಹೀಗಾಗಿರುವುದಾಗಿ ರಥವನ್ನು ಹಿಂತೆಗೆದುಕೊಂಡಲ್ಲಿ ಮಾತ್ರ ಆ ಸ್ಥಳವನ್ನು ಬಿಟ್ಟು ಮುನ್ನುಗ್ಗುವ ಅನುಸಾಲ್ವನನ್ನು ಸೋಲಿಸಬಹುದು

ಎಂದು ಶ್ರೀಕೃಷ್ಣ ಪರಮಾತ್ಮನು ಸಲಹೆ ಮಾಡಲು ಅರ್ಜುನನು ಅದರಂತೆಯೇ ರಥವನ್ನು ಹಿಂತೆಗೆದುಕೊಂಡನು ಯಜ್ಞ ಕುಂಡವಿದ್ದ ಸ್ಥಳವನ್ನು ಬಿಟ್ಟು ಮುಂದೆ ಬಂದ ಅನುಸಾಲ್ವನನ್ನು ಸುಲಭವಾಗಿ ಸೋಲಿಸಿದನು. ಹೀಗೆ ಜಗದೇಕ ವೀರನಾದ ಅರ್ಜುನನನ್ನೇ ಸೋಲಿನ ಹೊಸ್ತಿಲಿಗೆ ಹಾಗೂ ಸಾಧಾರಣನಾದ ಒಬ್ಬ ರಾಜನನ್ನು ವಿಜಯದ ಮಾರ್ಗಕ್ಕೆ ತಂದು ನಿಲ್ಲಿಸಿದ ಮಹಾ ಮಹಿಮೋಪೇತವಾದ ಸ್ಥಳವಿದು.

ಕಲಿಯುಗದಲ್ಲೂ ಮಹಾನ್ ಮಹಿಮೆಯುಳ್ಳ ಕ್ಷೇತ್ರವಿದು. ದ್ವೈತ ಸಿದ್ಧಾಂತವನ್ನು ಸ್ಥಾಪಿಸಿದ ಶ್ರೀಮಧ್ವಾಚಾರ್ಯರು ಈ ಸ್ಥಳದಲ್ಲಿ ಸಂಚರಿಸಿದ್ದಾರೆ. ಅದೇ ಮೂಲ ಪರಂಪರೆಯಲ್ಲಿ ಬಂದ ರಾಯರಿಗಿಂತ ಪ್ರಾಚೀನರಾದ ಶ್ರೀವಿಬುಧೇಂದ್ರ ತೀರ್ಥರಿಗೆ ಕನ್ನಡ ಸಾಮ್ರಾಟರು ಈ ಗ್ರಾಮವನ್ನು ದಾನ ಮಾಡಿದರು. ಈ ಸ್ಥಳದ ಮಹಿಮೆಯನ್ನು ತಿಳಿದು ಜ್ಞಾನಿಗಳಾದ ವಿಬುಧೇಂದ್ರ ತೀರ್ಥರು, ಯಜ್ಞವೇದಿಕೆಯಿದ್ದ ಸ್ಥಳದಲ್ಲಿ ಬಹು ಕಾಲ ತಪಸ್ಸನ್ನು ಆಚರಿಸಿದರು. ಆದರೆ ಮುಂದೆ ವಿಜಯನಗರ ಪತನವಾದ ಮೇಲೆ ಈ ಪ್ರಾಂತವು ವಿಜಾಪುರ ಸುಲ್ತಾನರ ವಶವಾದ್ದರಿಂದ ಈ ಗ್ರಾಮವು ಮಹಾ ಸಂಸ್ಥಾನದ ಕೈ ತಪ್ಪಿ ಹೋಯಿತು. ರಾಯರ ಪರಮ ಗುರುಗಳಾದ ವಿಜಯೀಂದ್ರ ತೀರ್ಥರು ಮತ್ತು ರಾಯರ ಗುರುಗಳಾದ ಶ್ರೀ ಸುಧೀಂದ್ರ ತೀರ್ಥರು ಸಹ ಈ ಕ್ಷೇತ್ರಕ್ಕೆ ಭೇಟಿ ನೀಡಿದ್ದರು.

ಈ ಮಂತ್ರಾಲಯ ಕ್ಷೇತ್ರವನ್ನು ಪರಿಪಾಲಿಸುತ್ತಿದ್ದ ಆದವಾನಿಯ ನವಾಬನಾದ ಸಿದ್ದಿ ಮಸೂದ್ ಖಾನನು ತನ್ನ ಗುರುಗಳಾದ ಖಾಜಿ ಸಾಹೇಬರಿಗೆ ಮೊದಲು ಈ ಮಂತ್ರಾಲಯ ಕ್ಷೇತ್ರವನ್ನು ದಾನವಾಗಿ ಕೊಟ್ಟಿದ್ದನು. ನಂತರ ರಾಯರ ಭಕ್ತನಾದ ತನ್ನ ಆಸ್ಥಾನದ ದಿವಾನನಾಗಿರುವ ವೆಂಕಣ್ಣನ ಮೂಲಕ ರಾಯರ ಮಹಿಮೆಯನ್ನು ತಿಳಿದು, ಅವರನ್ನು ಪರೀಕ್ಷಿಸಬೇಕೆಂದು ನವಾಬನು ಮಾಂಸಾದಿಗಳನ್ನು ತಂದು ಶ್ರೀ ಗುರುರಾಯರಿಗೆ ಸಮರ್ಪಿಸಿದನು. ಮಂತ್ರ ಜಲ ಪ್ರೋಕ್ಷಣೆಯಿಂದ ಶ್ರೀರಾಘವೇಂದ್ರ ಸ್ವಾಮಿಗಳು ಅವುಗಳನ್ನು ಫಲಪುಷ್ಪಗಳನ್ನಾಗಿ ಪರಿವರ್ತಿಸಿದರು. ಆಶ್ಚರ್ಯಚಕಿತನಾದ ನವಾಬನು ಕ್ರಮೇಣ ಗುರುರಾಯರ ಶಿಷ್ಯನಾಗಿ, ಭಕ್ತನಾಗಿ, ಗುರು ರಾಯರಿಗೆ ಗುರು ಕಾಣಿಕೆ ನೀಡುವೆನೆಂದು ಬೇಡಿಕೊಂಡಾಗ, ರಾಯರು ಮಂತ್ರಾಲಯ ಕ್ಷೇತ್ರವನ್ನು ಅಪೇಕ್ಷಿಸಿದರು. ನವಾಬನು ತನ್ನ ಗುರುಗಳಾದ ಖಾಜಿ ಸಾಹೇಬರಿಗೆ ಮಂತ್ರಾಲಯ ಸಮೀಪದ ಬಗರೂರು ತಿಮ್ಮಾಪುರವನ್ನು ದಾನವಾಗಿ ಕೊಟ್ಟು ಮಂತ್ರಾಲಯ ಕ್ಷೇತ್ರವನ್ನು ತನ್ನ ಗುರುಗಳಿಂದ ಹಿಂಪಡೆದು ಗುರು ರಾಜರಿಗೆ ಸಮರ್ಪಿಸಿದನು. ಇಂತು ಮಂತ್ರಾಲಯ ಕ್ಷೇತ್ರದ ಮಹಿಮೆ ನಾಲ್ಕು ಯುಗಗಳಲ್ಲೂ ಹರಡಿದೆ.

ಮಂತ್ರಾಲಯ ಕ್ಷೇತ್ರದಲ್ಲಿ ಭಾರತದ ಪ್ರಸಿದ್ಧ ಪುಣ್ಯ ನದಿಗಳಲ್ಲೊಂದಾದ ತುಂಗಭದ್ರ ಪ್ರವಹಿಸುತ್ತದೆ. ಗುರುರಾಘವೇಂದ್ರರು ತುಂಗಾ ತೀರ ವಿರಾಜಂ ಎಂದೇ ಪ್ರಸಿದ್ಧರಾಗಿದ್ದಾರೆ. ಕರ್ನಾಟಕದ ಪೌರಾಣಿಕ, ಚಾರಿತ್ರಿಕ, ಸಾಂಸ್ಕೃತಿಕ ಇತಿಹಾಸದೊಡನೆ ತುಂಗಭದ್ರೆಯ ಹರಿವು ಅವಿಭಾಜ್ಯವಾಗಿ ಬೆಸೆದುಕೊಂಡಿದೆ.ಆದಿ ಕಾವ್ಯವಾದ ರಾಮಾಯಣದ ಪಂಪಾ ನದಿ ಇದೇ.ಮಹಾಭಾರತದಲ್ಲಿ, ಮತ್ಸ್ಯಪುರಾಣ, ಮಾರ್ಕಾಂಡೇಯ ಪುರಾಣ, ಭಾಗವತ ಪುರಾಣಗಳಲ್ಲಿ, ತುಂಗಭದ್ರೆಯ ಉಲ್ಲೇಖವಿದೆ. ಕಾವ್ಯಗಳಲ್ಲಿ ಗ್ರಂಥಗಳಲ್ಲಿ, ಹರಿದಾಸರ ಕೃತಿಗಳಲ್ಲಿ, ಜನಪದ ಗೀತೆಗಳಲ್ಲಿ ತುಂಗಭದ್ರೆಯ ಮಹಿಮೆ ಅನೇಕ ವಿಧದಲ್ಲಿ ವರ್ಣಿತಗೊಂಡಿದೆ.ತುಂಗ ಭದ್ರೆ ಕರ್ನಾಟಕದ ಶಿವಮೊಗ್ಗ ಜಿಲ್ಲೆಯಲ್ಲಿರುವ ಸಹ್ಯಾದ್ರಿ ಪರ್ವತ ಶ್ರೇಣಿಯ ವರಾಹ ಪರ್ವತದಲ್ಲಿ ಶೃಂಗೇರಿಯಿಂದ ೧೦ ಮೈಲಿ ದೂರದಲ್ಲಿರುವ ಗಂಗಾ ಮೂಲ ಎಂಬಲ್ಲಿ ಹುಟ್ಟುತ್ತದೆ. ಅವಳ ಹುಟ್ಟುವಿಕೆಯ ಹಿನ್ನಲೆಯ ಕಥೆ ಹೀಗಿದೆ. ಶ್ರೀಮನ್ನಾರಾಯಣನು ವರಾಹಾವತಾರ ಮಾಡಿದಾಗ ಹಿರಣ್ಯಾಕ್ಷನ ವಧೆಯ ನಂತರ ಇಲ್ಲಿ ವಿಶ್ರಮಿಸಿದನು ಆಯಾಸಗೊಂಡ ಅವನ ದೇಹದಿಂದ ಬೆವರು ಹರಿದು ನದೀ ರೂಪತಾಳಿತು. ವರಾಹ ದೇವರ ಬಲದಾಡೆ ಉನ್ನತವಾಗಿದ್ದು ತುಂಗ ಆಗಿದ್ದರಿಂದ ಆದರಿಂದ ಹುಟ್ಟಿದ ನದಿ ತುಂಗಾ ಎಂದು ಪ್ರಸಿದ್ಧವಾಯಿತು.ದೇವರ ಎಡದಾಡೆ ಭದ್ರವಾಗಿದ್ದುದರಿಂದ ಆದರಿಂದ ಹುಟ್ಟಿದ ನದಿಗೆ ಭದ್ರಾ ಎಂದು ಹೆಸರಾಯಿತು. ತುಂಗೆ ಮತ್ತು ಭದ್ರ ಪೂರ್ವ ಮುಖಿಯಾಗಿ ಪ್ರವಹಿಸಿದವು. ತುಂಗೆ ಶೃಂಗೇರಿ, ತೀರ್ಥಹಳ್ಳಿ, ಮಹಿಷಿ, ಶಿವಮೊಗ್ಗೆಗಳ ಮೂಲಕ ಹರಿದು ಕೂಡಲಿಗೆ ಬರುತ್ತದೆ. ಭದ್ರೆ ಬಾಬಾ ಬುಡನ್ಗಿರಿ ತಪ್ಪಲು ಹೊರನಾಡು, ಭದ್ರಾವತಿ, ಹೊಳೆಹೊನ್ನೂರುಗಳ ಮೂಲಕ ಹರಿದು ಕೊಡಲಿಗೆ ಬರುತ್ತದೆ.ಅಲ್ಲಿ ಇವೆರಡರ ಸಂಗಮ. ಮುಂದೆ ಹೊನ್ನಾಳಿ, ಹರಿಹರ, ಹಂಪೆಗಳ ಮೂಲಕ ಹರಿದು ಪ್ರಸಿದ್ಧ ಕ್ಷೇತ್ರ ಮಂತ್ರಾಲಯಕ್ಕೆ ಬರುತ್ತದೆ. ಮಂತ್ರಾಲಯದಲ್ಲಿ ಸಾವಿರಾರು ಜನ ತುಂಗಭದ್ರೆಯಲ್ಲಿ ಮಿಂದು ಪವಿತ್ರರಾಗಿ ಗುರು ರಾಘವೇಂದ್ರರ ದರ್ಶನ ಮಾಡುತ್ತಾರೆ. ನದೀ ಪೂಜೆ ಸಲ್ಲಿಸಿ ಧನ್ಯರಾಗುತ್ತಾರೆ. ೧೨ ವರ್ಷಗಳಿಗೊಮ್ಮೆ ತುಂಗ ಭದ್ರೆಗೆ ಪುಷ್ಕರ ಪರ್ವ ಕಾಲವು ಸನ್ನಿಹಿತವಾಗುತ್ತದೆ.ಇದೀಗ ತುಂಗಭದ್ರಾ ಪುಷ್ಕರ ಪರ್ವಕಾಲವೇ ಆಗಿದೆ.ಮಂತ್ರಾಲಯದಲ್ಲಿ ತುಂಗಭದ್ರಾ ಸ್ನಾನಕ್ಕೆ ಮತ್ತೂ ಮಹತ್ವ ಬಂದಿದೆ.

ಸುರಪನಾಲಯದಂತೆ ಕಂಗೊಳಿಸುವ ಮಂತ್ರಾಲಯದಲ್ಲಿ, ಈ ಪವಿತ್ರ ಕ್ಷೇತ್ರದ ಬಿಂದುವಾಗಿರುವ ಗುರುಗಳ ಪಾವನ ಬೃಂದಾವನವಿರುವ ಗರ್ಭಗುಡಿ ಚಿಂತಾಮಣಿಯಿರುವ ರತ್ನ ಸಂಪುಟದಂತೆ ಪರಿಶೋಭಿಸುತ್ತದೆ. ದಿವ್ಯಾಲಂಕಾರ ಭರಿತವಾದ ಬೃಂದಾವನದೆದುರು ಕೈ ಮುಗಿದು ನಿಂತರೆ ಭಕ್ತಿಯ ಉದ್ರೇಕದಿಂದ ಮೈ ಮನಗಳು ಪುಲಕಿತಗೊಳ್ಳುತ್ತದೆ. ಅದೊಂದು ದೈವಿಕ ಅನುಭವ. ಶ್ರೀರಾಮಚಂದ್ರ ಸ್ವಾಮಿಯ ಪಾದ ಸ್ಪರ್ಶದಿಂದ ಪವಿತ್ರಗೊಂಡ ಶಿಲೆಯಿಂದ ನಿರ್ಮಿತವಾದ ದಿವ್ಯ ಭವ್ಯವಾದ ಬೃಂದಾವನ. ಬೃಂದಾವನದ ಮೇಲ್ಭಾಗದಲ್ಲಿ ಶ್ರೀಲಕ್ಷ್ಮೀನರಸಿಂಹ ದೇವರು ಹೃದಯ ಭಾಗದಲ್ಲಿ ಕುಲದೇವರಾದ ವೆಂಕಟೇಶ್ವರ ದೇವರ ಪ್ರತಿಮೆಗಳಿವೆ.ಗುರುರಾಜರ ಬೃಂದಾವನದಲ್ಲಿ ನೂರಾರು ಭಗವದ್ರೂಪಗಳು ಸನ್ನಿಹಿತವಾಗಿದೆ. ಬೃಂದಾವನದ ಮೇಲ್ಭಾಗದಲ್ಲಿ ೭೦೦ ಸಾಲಿಗ್ರಾಮಗಳು ಇಡಲ್ಪಟ್ಟಿದೆ. ಬೃಂದಾವನದ ನಾಲ್ಕು ದಿಕ್ಕಿನ ವಿವಿಧ ಸ್ಥಾನಗಳಲ್ಲಿ ಅನೇಕ

ದೇವಾನು ದೇವತೆಗಳು ನೆಲಸಿದ್ದಾರೆ ಎನ್ನಲಾಗಿದೆ. ತುಸು ಎತ್ತರವಾದ ಪೀಠದ ಮೇಲೆ ಸ್ಥಾಪಿತಗೊಂಡಿದೆ.ಉತ್ಕೃಷ್ಟ ಶೋಭೆಯಿಂದ ವಿರಾಜಮಾನವಾಗಿದೆ.ದಿವ್ಯ ಪುಷ್ಪಮಾಲೆಗಳಿಂದ ಅಲಂಕೃತವಾದಾಗಿನಂತೆ ಏನೂ ಅಲಂಕಾರವಿಲ್ಲದ ವಿಶ್ವರೂಪ ದರ್ಶನವೂ ಶೋಭಾಯಮಾನವಾಗಿರುತ್ತದೆ. ರಜತಕವಚ, ಸುವರ್ಣಕವಚ, ತುಳಸಿ ಮಣಿಮಾಲೆಗಳು, ರಜತ ಸುವರ್ಣ ಹಾರಗಳು, ದ್ವಾದಶ ಪುಂಡ್ರಗಳು, ಬೃಂದಾವನದ ಅಲಂಕಾರ ದಿವ್ಯಮಂಗಳ ಸೌಂದರ್ಯದಿಂದ ರಾರಾಜಿಸುತ್ತದೆ. ಅದು ಅದ್ಭುತ ಶಿಲ್ಪ ಸೌಂದರ್ಯದಿಂದಲೂ ಕೂಡಿದೆ. ಪಂಚಾಮೃತಾಭಿಷೇಕ ಮಾಸುವಾಗಲಂತೂ ತೋರಿಬರುವ ದೃಶ್ಯ ಅತ್ಯುದ್ಭುತ. ಒಮ್ಮೆ ಶ್ರೀರಾಘವೇಂದ್ರರ ಬೃಂದಾವನದ ಪ್ರದಕ್ಷಿಣೆ ಸಕಲ ಯಾತ್ರೆಗಳ ಫಲವನ್ನು ತಂದು ಕೊಡುವುದು. ಸರ್ವ ಯಾತ್ರಾ ಫಲಾನಾಪ್ತ್ಯೈಯಥಾ ಶಕ್ತಿ ಪ್ರದಕ್ಷಿಣಮ್.ಅಂತಹ ದಿವ್ಯ ಶಕ್ತಿ ತುಂಬಿ ನಿಂತಿದೆ ಗುರುರಾಜರ ಬೃಂದಾವನದಲ್ಲಿ.

ಶ್ರೀರಾಘವೇಂದ್ರ ಸ್ವಾಮಿಗಳವರ ಬೃಂದಾವನದ ಪಕ್ಕದಲ್ಲಿಯೇ ಅಷ್ಟೇ ಎತ್ತರದ ಕಲಾಪೂರ್ಣವಾದ ಸುಂದರ ಬೃಂದಾವನವಿದೆ.ಅದು ವಾದೀಂದ್ರ ತೀರ್ಥರದು. ವಾದೀಂದ್ರರು ರಾಯರ ಮರಿಮೊಮ್ಮಕ್ಕಳು ಅಂದರೆ ರಾಘವೇಂದ್ರರ ಮಗನಾದ ಲಕ್ಷ್ಮೀನಾರಾಯಣಾಚಾರ್ಯರ ಮಗನಾದ ಪುರುಷೋತ್ತಮಾಚಾರ್ಯರ ಪುತ್ರ.ಶ್ರೀನಿವಾಸನೆಂಬುದು ಪೂರ್ವಾಶ್ರಮದ ನಾಮ. ಸನ್ಯಸ್ತ ಶಿಷ್ಯರೂ ಹೌದು. ಇವರೂ ಮಹಾನ್ ತಪಸ್ವಿಗಳು, ಜ್ಞಾನಿಗಳೂ ಮತ್ತು ರಾಯರ ಪರಮ ಭಕ್ತರು. ವಾದೀಂದ್ರರು ತಾವೇ ಶ್ರೀರಾಯರ ಮೇಲೆ ರಚಿಸಿದ ಶ್ರೀಗುರು ಗುಣ ಸ್ತವನ ಎಂಬ ಖಂಡಕಾವ್ಯವನ್ನು ಶ್ರೀರಾಯರ ಬೃಂದಾವನವು ಅಲುಗಾಡಿತೆಂದು ಇತಿಹಾಸವೆ ಇದೆ. ಉಭಯ ವಂಶಾಬ್ಧಿಚಂದ್ರಮರೆಂದು ಪ್ರಖ್ಯಾತರಾಗಿದ್ದಾರೆ. ಆದವಾನಿಯ ನವಾಬನು ಶ್ರೀರಾಯರಿಗೆಂದು ಮಾಡಿಸಿದ ಬೃಂದಾವನವನ್ನು ಶ್ರೀರಾಯರ ಆದೇಶದಂತೆ ವಾದೀಂದ್ರ ತೀರ್ಥರಿಗೆ ಮೀಸಲಿಡಲಾಗಿತ್ತು ಅದೇ ಬೃಂದಾವನವೇ ಇದು. ರಾಯರ ನಂತರ ಪಂಚಾಮೃತ, ಹಸ್ತೋದಕ, ಮಂಗಲಾರತಿ ಮುಂತಾದ ಸೇವೆಗಳು ಇವರಿಗೂ ಸಲ್ಲುತ್ತದೆ.

ಶ್ರೀರಾಯರ ಬೃಂದಾವನದ ಎದುರಿಗೆ ವಿರಾಜಿಸುತ್ತದೆ ಮುಖ್ಯ ಪ್ರಾಣ ದೇವರ (ಹನುಮಂತನ) ಸನ್ನಿಧಿ ಶ್ರೀರಾಯರ ಶಿಷ್ಯರಾದ ಶ್ರೀಯೋಗೀಂದ್ರ ತೀರ್ಥರ ಕಾಲದಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಈ ಸನ್ನಿಧಾನವು ಅತಿ ಜಾಗೃತವಾದುದು.ರಾಯರನ್ನು ಸತತವಾಗಿ ಅನುಗ್ರಹಿಸುತ್ತಿರುವಂತಿದೆ.ನಿಂತ ನಿಲುವಿನ ಉಬ್ಬು ಶಿಲ್ಪದ ಪ್ರಾಣ ದೇವರ ವಿಗ್ರಹವು ಬಹು ಸುಂದರವಾಗಿದೆ. ಶ್ರೀರಾಮ ದೇವರು ಕುಳಿತ ಕಲ್ಲಿನಿಂದ ಶ್ರೀ ರಾಯರ ಬೃಂದಾವನವನ್ನು ನಿರ್ಮಿಸಿ ಉಳಿದ ಕಲ್ಲಿನಿಂದ ಈ ಪ್ರಾಣ ದೇವರ ಮೂರ್ತಿಯನ್ನು ನಿರ್ಮಿಸಲಾಗಿದ್ದು, ಮಹಾ ಸನ್ನಿಧಾನ ಯುಕ್ತವಾಗಿದೆ. ಪ್ರಾಣದೇವರಿಗೆ ಪಂಚಾಮೃತ, ನೈವೇದ್ಯ ಮಂಗಳಾರತಿ ಸಲ್ಲಿಸಿದ ನಂತರವೇ ರಾಯರಿಗೆ ಸೇವೆಗಳು ಸಲ್ಲುತ್ತದೆ.ಇಲ್ಲಿ ಸಲ್ಲುವ ಅತಿ ವಿಶೇಷ ಸೇವೆಯೆಂದರೆ ಮಧು ಅಭಿಷೇಕ,ಪ್ರತಿ ಶನಿವಾರ ಶ್ರೀವಾಯುಸ್ತುತಿ ಘನಶ್ಚರಣ ಪೂರ್ವಕವಾಗಿ ಜೇನುತುಪ್ಪದ ಅಭಿಷೇಕ. ವಿಶೇಷ ಫಲದಾಯಕ, ಸಕಲಾಭೀಷ್ಟಪ್ರದಾಯಕ,ಸರ್ವದುರಿತ ನಿವಾರಕ.ಇವುಗಳಲ್ಲದೆ ಬೃಂದಾವನ ಸನ್ನಿಧಾನದ ಪ್ರಾಕಾರದಲ್ಲಿ ಮಠದ ಪರಂಪರೆಯಲ್ಲಿ ಬಂದ ಶ್ರೀಸುಧರ್ಮೇಂದ್ರ ತೀರ್ಥರು,ಸುವ್ರತೀಂದ್ರ ತೀರ್ಥರು,ಸುಯಮೀಂದ್ರ ತೀರ್ಥರು, ಸುಜಯೀಂದ್ರ ತೀರ್ಥರು, ಶ್ರೀ ಸುಶಮೀಂದ್ರತೀರ್ಥರು ಮತ್ತು ಸುಯತೀಂದ್ರ ತೀರ್ಥರ ಬೃಂದಾವನಗಳಿದ್ದು,ಷಟ್ ಬೃಂದಾವನ ಸ್ಥಳಗಳೆಂದು ಹೆಸರಾಗಿವೆ.ಬಹು ಪ್ರಾಚೀನವಾದ ಅಶ್ವತ್ಥವೃಕ್ಷ,ನಾಗರ ಕಟ್ಟೆಗಳೂ ಇಲ್ಲಿವೆ.ಭಕ್ತರು ಇಲ್ಲಿಯೂ ದೀಪ ಹಚ್ಚುವಿಕೆ, ನಮಸ್ಕಾರಾದಿ ಸೇವೆಗಳನ್ನು ಸಲ್ಲಿಸುತ್ತಾರೆ.

ಮಂತ್ರಾಲಯದಲ್ಲಿ ಮಂಚಾಲಾಂಬಿಕೆಯ ದಿವ್ಯ ಸನ್ನಿಧಾನವಿದೆ. ಶ್ರೀ ಮಹಾಲಕ್ಷ್ಮೀದೇವಿಯೇ ಮಂಚಾಲಮ್ಮನಾಗಿ ಈ ಗ್ರಾಮ ದೇವತೆಯಾಗಿ ನೆಲಸಿದ್ದಾಳೆ. ಆದ್ದರಿಂದಲೇ ಮಂತ್ರಾಲಯವನ್ನು ಮಂಚಾಲೆ ಎಂದೂ ಕರೆಯಲಾಗಿದೆ. ಶ್ರೀ ಗುರುರಾಜರು ಮಂತ್ರಾಲಯದಲ್ಲಿ ಸಜೀವ ಬೃಂದಾವನ ಪ್ರವೇಶ ಮಾಡುವ ಮೊದಲು ಈ ದೇವಿಯನ್ನು ಪೂಜಿಸಿ ಆಕೆಯ ಅಪ್ಪಣೆ ಪಡೆದು ಬೃಂದಾವನ ಪ್ರವೇಶಿಸಿದ್ದಾರೆ. ಕ್ಷೇತ್ರಕ್ಕೆ ಬರುವ ಸಮಸ್ತ ಭಕ್ತರೂ ಈ ದೇವಿಯ ದರ್ಶನವನ್ನು ಮೊದಲು ಪಡೆಯಬೇಕು. ಇದು ಇಲ್ಲಿನ ಸಂಪ್ರದಾಯ. ಪ್ರಹ್ಲಾದ ರಾಜರು ಯಾಗ ಮಾಡಿದ ಯಜ್ಞಕುಂಡದಲ್ಲಿ ಸನ್ನಿಹಿತಳಾಗಿದ್ದ ಪ್ರಹ್ಲಾದರ ಕುಲದೇವತೆಯೂ ಕ್ಷೇತ್ರ ದೇವತೆಯೂ ಆಗಿದ್ದ ದುರ್ಗಾದೇವಿಯನ್ನು ಮಂತ್ರಾಲಯಾಂಬಿಕೆಯನ್ನು ಶ್ರೀರಾಘವೇಂದ್ರರು ಸುತ್ತಿಸಿ ದೇವಿಯು ಪ್ರತ್ಯಕ್ಷಳಾಗಿ ವರವಿತ್ತಳು.ತನ್ನ ಗುರುತಾಗಿ ಆಲಯದ ಮಹಾ ದ್ವಾರದ ಒಳಭಾಗದಲ್ಲಿ ಮಸ್ತಕಗಳನ್ನು ಸ್ಥಾಪಿಸಿ ಅದು ಸಕಲ ದುಷ್ಟ ಶಕ್ತಿಗಳನ್ನು ನಿಗ್ರಹಿಸುತ್ತದೆ ಎಂದು ವರವಿತ್ತಳು. ಮಂತ್ರಾಲಯದಲ್ಲಿ ರಾಯರ ಗುಡಿಯ ಹಿತ್ತಾಳೆಯ ಮಹಾ ದ್ವಾರದ ಒಳಭಾಗದಲ್ಲಿ ದೇವಿಯ ಅಣತಿಯಂತೆ ಶ್ರೀರಾಯರು ಸ್ಥಾಪಿಸಿದ ಮೇಷ ಪುಸ್ತಕಗಳನ್ನು ಕಾಣಬಹುದಾಗಿದೆ. ಇದೀಗ ದೇವಿಗೆ ಭವ್ಯವಾದ ಮಂದಿರ ನಿರ್ಮಿಸಲಾಗಿದೆ. ದೇವಿಯ ಮೂರ್ತಿಯದು ಬಹು ಸುಂದರವಾದ ದಿವ್ಯ ಮಂಗಳ ಸ್ವರೂಪ. ಮಂಗಳವಾರ, ಶುಕ್ರವಾರ, ಶ್ರಾವಣಮಾಸ, ನವರಾತ್ರಿಯಲ್ಲಿ ವಿಶೇಷ ಸೇವೆಗಳು ನಡೆಯುತ್ತದೆ. ಭಕ್ತರು ದೇವಿಗೆ ಅರಶಿನ ಕುಂಕುಮ, ಸೀರೆ ಕುಬುಸ, ಉಡಿ ತುಂಬುವ ಸಾಮಾನುಗಳನ್ನು ವಿಶೇಷವಾಗಿ ಅರ್ಪಿಸುತ್ತಾರೆ. ಅಮೂಲ್ಯವಾದ ವಸ್ತ್ರಾಭರಣಗಳಿಂದ ಅಲಂಕೃತವಾಗಿರುವ ದೇವಿಯ ದಿವ್ಯಮಂಗಳ ಸ್ವರೂಪ ಭಕ್ತಿ ಪ್ರಚೋದಕವಾಗಿದೆ.

ಅಷ್ಟೇಕೆ ಬೃಂದಾವನ ಸನ್ನಿಧಾನದಲ್ಲಿರುವ ಕಣ ಕಣವೂ ಶ್ರೇಷ್ಠವಾಗಿದೆ. ಮಹಿಮೋಪೇತವಾಗಿದೆ. ರಾಯರ ಭಕ್ತರೆಲ್ಲರೂ ಒಮ್ಮೆಯಾದರೂ ಯಾತ್ರೆ ಮಾಡಲೇಬೇಕಾದ ಪವಿತ್ರ ಪರಮ ಪಾವನ ಮಂತ್ರ ಸಿದ್ಧಿಯ ಜಾಗೃತ ಕ್ಷೇತ್ರ ಶ್ರೀ ಮಂತ್ರಾಲಯ.

# ಆಯುರ್ವೇದ ಮತ್ತು ನಾವು

- ಡಾ ॥ ಪ್ರದೀಪ್ ಕುಮಾರ್ ಹೆಬ್ರಿ
98440 18457

3



ಆಯುರ್ವೇದ ವೈದ್ಯ ಪದ್ಧತಿಯು ಮಾನವನಿಗೆ ಸಿದ್ದಿಸಿದ ಕುರಿತಾದ ಅನೇಕ ಕತೆಗಳು ಪ್ರಚಲಿತದಲ್ಲಿದೆ. ಇದರಲ್ಲಿ ಮುಖ್ಯವಾದ ಕಥೆಯಿದು:

ಭೂಲೋಕದಲ್ಲಿ ಮಾನವರನ್ನು ಅನೇಕ ರೋಗರುಜಿನಗಳು ಬಾಧೆಗೆ ಒಳಪಡಿಸುವುದನ್ನರಿತ ಭರದ್ವಾಜಾದಿ ಅನೇಕ ಮಹರ್ಷಿಗಳು ಇಂತಹ ರೋಗ ರುಜಿನಗಳಿಂದ ಮಾನವರು ಸದಾ ಪೀಡಿಸಲ್ಪಡುತ್ತಿದ್ದರೆ ಅದರಿಂದ ತಮ್ಮ ಪುರುಷಾರ್ಥ ಸಾಧನೆಗೆ ತೊಂದರೆಯಾಗುತ್ತದೆಂದು ಹಿಮಾಲಯದ ತಪ್ಪಲಲ್ಲಿ ಸಭೆ ಸೇರಿದರು. ಅಲ್ಲಿ ಮೂಡಿ ಬಂದ ಒಕ್ಕೊರಲಿನ ತೀರ್ಮಾನದಂತೆ ಭರದ್ವಾಜ ಮುನಿಯು ದೇವಲೋಕದ ದೇವೇಂದ್ರನಲ್ಲಿಗೆ ತೆರಳಿ ಆಯುರ್ವೇದ ವೈದ್ಯ ವಿದ್ಯೆಯನ್ನರಿತು ಬಂದರು. ತದನಂತರ ಅದನ್ನು ಇತರ ಮಹರ್ಷಿಗಳಿಗೂ ತಿಳಿಯಪಡಿಸಿದರು. ಋಷಿಸಭೆ ಸೇರಿಸಿ ಆಯುರ್ವೇದವನ್ನು ಎಲ್ಲರಿಗೂ ಮನದಟ್ಟಾಗುವಂತೆ ವಿವರಿಸಿದರು. ಈ ಋಷಿಸಭೆಯನ್ನು ನಮ್ಮ ಭರತ ಖಂಡದ ಮೊತ್ತ ಮೊದಲ ವೈದ್ಯ ಸಮ್ಮೇಳನ ಎನ್ನಬಹುದು.

ಈ ಋಷಿ ಸಭೆಯಲ್ಲಿ ಅನೇಕ ದೇಶದ ಪಂಡಿತರು.ವಿದ್ವಾಂಸರು. ಯೋಗಿಗಳು ಭಾಗವಹಿಸಿದ್ದರು. ಭಾಗವಹಿಸಿದ್ದ ಋಷಿಗಳಲ್ಲಿ ಪುನರ್ವಸು ಆತ್ರೇಯ ತನ್ನ ಆರುಜನ ಶಿಷ್ಯರಾದ ಅಗ್ನಿವೇಶ, ಭೇಡ , ಜತೂಕರ್ಣ, ಪರಾಶರ, ಹಾರೀತ ಮತ್ತು ಕ್ಷಾರಪಾಣಿ ಇಷ್ಟು ಮಂದಿಗೆ ಆಯುರ್ವೇದ ಶಾಸ್ತ್ರವನ್ನು ಹೇಳಿಕೊಟ್ಟರು. ಅಧ್ಯಯನ ಮಾಡಿದ ಈ ಆರು ಮಂದಿ ಪ್ರತ್ಯೇಕವಾಗಿ ಗ್ರಂಥಗಳನ್ನು ರಚಿಸಿದರು. ಈ ಗ್ರಂಥಗಳಲ್ಲಿ ಅಗ್ನಿವೇಶನ ತಂತ್ರವೇ ಶ್ರೇಷ್ಠವೆನಿಸಿತು.

ಕ್ರಿ.ಸ್ತ. ಪೂರ್ವ ೨-೩ನೇ ಶತಮಾನದಲ್ಲಿ ಚರಕಾಚಾರ್ಯ ಎಂಬ ಋಷಿಯು ಈ ತಂತ್ರವನ್ನು ಪರಿಷ್ಕರಿಸಿದರು. ಹಾಗಾಗಿ ಇದಕ್ಕೆ "ಚರಕ ಸಂಹಿತೆ" ಎಂದು ಹೆಸರಾಯಿತು.ಚರಕನಂತೆಯೇ ಪರಾಶರಮುನಿಯೂ ಹಸ್ತಾಯುರ್ವೇದದಲ್ಲೂ ನಿಪುಣನಾಗಿದ್ದನು.

ತ್ರಿದೋಷ ಸಿದ್ಧಾಂತವನ್ನು ಕ್ರಮಬದ್ಧ ರೂಪಕ್ಕೆ ತಂದವರೆಂದರೆ ಪುನರ್ವಸು ಆತ್ರೇಯ. ಈತ ಈ ಹಿಂದೆ ಮೂಲಿಕಾದಿಗಳನ್ನು ಅನುಭವದಿಂದ ಉಪಯೋಗಿಸುತ್ತಿದ್ದುದನ್ನು ಮಾರ್ಪಡಿಸಿದ . ಅವುಗಳ ರಸ, ಗುಣ, ವೀರ್ಯ, ವಿಪಾರ ಮತ್ತು ಪ್ರಭಾವಗಳನ್ನು ಕಂಡು ಹಿಡಿದು ದೋಷಗಳಗೆ ಅನುಸಾರವಾಗಿ ಚಿಕಿತ್ಸೆ ಮಾಡುವ ಕ್ರಮವನ್ನು ಜಾರಿಗೆ ತಂದನು. 'ರಸಗಳು ಆರು ಮಾತ್ರ ' ಎಂದು ದೃಢ ಪಡಿಸಲು ಒಂದು ಸಮ್ಮೇಳನವನ್ನೇ ನಡೆಸಿದ. ಆದರೆ ಆತ್ರೇಯನ ತೀರ್ಮಾನವೇ ಅಂತಿಮವಾಗಿತ್ತು. ಈ ಪುನರ್ವಸು ಆತ್ರೇಯ ಸುಮಾರು ಕ್ರಿ.ಪೂ. 87ನೇ ಶತಮಾನದವನೆಂದು ತಿಳಿಯಲಾಗಿದೆ. ಈತನ ಪಂಥದವರು ವಿಶೇಷವಾಗಿ ಕಾಯಚಿಕಿತ್ಸೆಗೆ ಪ್ರಾಧಾನ್ಯತೆ ನೀಡಿದ್ದರು.

ಆಯುರ್ವೇದದಲ್ಲಿ ಸರ್ವಪೂಜಿತನಾದವನು ಭಗವಾನ್ ಧನ್ವಂತರಿ. ಈತ ಸಮುದ್ರಮಥನ ಕಾಲದಲ್ಲಿ ಉದ್ಭವಿಸಿದನೆಂದೂ, ಕೈಯಲ್ಲಿ ಅಮೃತ ಕಳಶವನ್ನು ಇಟ್ಟುಕೊಂಡು ಬಂದ ಆದಿದೇವನೆಂದೂ ರಾಮಾಯಣ,ಮಹಾಭಾರತ, ಹರಿವಂಶ ಪುರಾಣಾದಿಗಳಲ್ಲಿ ತಿಳಿಸಲಾಗಿದೆ. ಧನ್ವಂತರಿಯನ್ನು ಮಹಾವಿಷ್ಣುವಿನ ಅವತಾರವೆಂದು ವೈದ್ಯರು ಪೂಜಿಸುವ ಸಂಪ್ರದಾಯವನ್ನು ಇರಿಸಿಕೊಂಡಿದ್ದಾರೆ ವಿಷ್ಣು, ಬ್ರಹ್ಮ ವೈವರ್ತ ಮತ್ತು ವಾಯುಪುರಾಣಗಳಿಂದ ಧನ್ವಂತರಿಯು ಸೂರ್ಯದೇವನಿಂದ ಆಯುರ್ವೇದವನ್ನು ಕಲಿತನೆಂಬುದು ತಿಳಿದು ಬಂದಿದೆ.

ಸ್ಕಾಂದ, ಗರುಡ ಮತ್ತು ಮಾರ್ಕಂಡೇಯ ಪುರಾಣಗಳಿಂದ ಸಾಲವ ಮಹರ್ಷಿಯ ಮಗ ಸರ್ವಶಾಸ್ತ್ರ ಸಂಪನ್ನನಾಗಿದ್ದನೆಂದು ತಿಳಿದಿದೆ. ಈತ ಅಶ್ವಿನಿ ದೇವತೆಗಳ ಶಿಷ್ಯನಾಗಿ ಧನ್ವಂತರಿ, ಎಂಬ ಹೆಸರನ್ನು ಪಡೆದನು. ಸುಶ್ರುತ ಸಂಹಿತೆಯ ಪ್ರಕಾರ ಕಾಶೀರಾಜ ದಿವೋದಾಸ ಆದಿದೇವ ಧನ್ವಂತರಿ ಅವತಾರ ಪುರುಷನೆಂದೂ, ಪ್ರಧಾನವಾಗಿ ಶಲ್ಯತಂತ್ರವನ್ನು ಉಪದೇಶ ಮಾಡಲು ಭೂಲೋಕಕ್ಕೆ ಪುನಃ ಬಂದನೆಂದೂ ಹೇಳಲಾಗಿದೆ.

# ಹೆಳವನಕಟ್ಟೆ ಗಿರಿಯಮ್ಮ ಚರಿತ್ರೆ

ಶ್ರೀಮತಿ– ಪ್ರಿಯಾಪ್ರಾಣೇಶ ಹರಿದಾಸ
8050436752



ಹರಿದಾಸ ಸಾಹಿತ್ಯದಲ್ಲಿ ಹರಿದಾಸರ ಜೊತೆ ಹರಿದಾಸಿಯರ ಕೊಡುಗೆಯು ಬಹಳ ಅಪಾರವಿದೆ. ಮೊದಲಿಗೆ ಎಲ್ಲರ ಮನದಲ್ಲಿ ನೆನಪಾಗುವುದೇ'' ಹೆಳವನಕಟ್ಟೆ ಗಿರಿಯಮ್ಮ''. ಕರ್ನಾಟಕದ "ಮೀರಾ'' ಎಂದೇ ಪ್ರಖ್ಯಾತವಿದೆ. ಹರಿಭಕ್ತಿಯ ಸ್ವರೂಪವಾಗಿದ್ದಾಳೆ, ಎಂದು ವಿದ್ವಾಂಸರು ಹೇಳುತ್ತಾರೆ ಹೆಣ್ಣು ಕುಲದ ಅಭಿಮಾನ ಹೆಮ್ಮೆಯವರಾಗಿದ್ದಾರೆ.

ಗಿರಿಯಮ್ಮನ ಜನನ ಕ್ರಿ.ಶ. ೧೭೫೦ ಸುಮಾರಿಗೆ ಜೀವಿಸಿದ್ದರು. ಅಥವಾ ೧೮ ನೇ ಶತಮಾನದ ಪೂರ್ವಾರ್ಧದಲ್ಲಿ ಜೀವಿಸಿದ್ದರು ಎಂಬ ಊಹೆ ಇದೆ. ಇವಳ ಜನನದ ಮಾಹಿತಿ ನಿಖರವಾಗಿ ಸಿಕ್ಕಿಲ್ಲ.

ತಂದೆ ಹಾವೇರಿ ಜಿಲ್ಲೆಯ ರಾಣೀ ಬೆನ್ನೂರಿನ ಭೀಷ್ಟಪ್ಪ, ತಾಯಿ ತುಂಗವ್ವರಿಗೆ ಬಹಳ ವರುಷಗಳಿಂದ ಮಕ್ಕಳಾಗದ ಕಾರಣ ತಿರುಪತಿ ತಿಮ್ಮಪ್ಪನ ಸೇವೆ ಮತ್ತು ಹರಕೆಯ ಫಲವಾಗಿ ಪುತ್ರಿರತ್ನ ಜನನವಾಯಿತು. ಸೇವೆಯ ಫಲದಿಂದ ಹುಟ್ಟಿದ್ದಕ್ಕೆ, ಈ ಮಗುವಿಗೆ "ಗಿರಿಯಮ್ಮ'' ಎಂದು ನಾಮಕರಣ ಮಾಡಿದರು.

ಗಿರಿಯಮ್ಮ ನಾಲ್ಕು ವರುಷ ಇರುವಾಗಲೇ ತಾಯಿ ತೀರಿಹೋದರು. ಸ್ವಲ್ಪ ದಿನಗಳಲ್ಲಿ ತಂದೆಯು ತೀರಿಹೋದರು. ಇವಳು ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆದಳು. ಬಾಲ್ಯದಿಂದಲೇ ದೈವಭಕ್ತಿ, ಪರೋಪಕಾರ ಗುಣ, ವೃದ್ಧರ ಸೇವೆಯ ಗುಣ ಎಲ್ಲವೂ ಅಭಿವೃದ್ಧಿಯಾಗಿ ಸುಗುಣಗಳ ಗಣಿಯಾಗಿದ್ದಳು.

ಮಲೆಬೆನ್ನೂರಿನ ತಿಪ್ಪರಸನೊಂದಿಗೆ ವಿವಾಹವಾಯಿತು. ವಿವಾಹವಾದರೂ ಸಂಸಾರ ವ್ಯಾಮೋಹಕ್ಕೆ ಎಂದು ಒಳಗಾಗಲಿಲ್ಲ. ಹೆಳವನಕಟ್ಟೆ ರಂಗನಾಥನನ್ನು ಬಹಳ ಅನನ್ಯ ಭಕ್ತಿಯಿಂದ ಸೇವೆ ಮಾಡುತ್ತಿದ್ದಳು. ಹೇಳವನಕಟ್ಟೆ ರಂಗನಾಥ ಹೆಸರು ಬರಲು ಕಾರಣವೇನೆಂದರೆ ಕಮಾರನಹಳ್ಳಿ ಗ್ರಾಮದಲ್ಲಿ ಭಿಕ್ಷೆಗಾಗಿ ಒಬ್ಬ "ಹೆಳವ'' ಕುಡುತ್ತಿದ್ದನು. ಅಲ್ಲಿನ ಜನರು ತಮ್ಮ ದನಗಳನ್ನು ಹೆಳವ ಕುಡುವ ಸ್ಥಳದಲ್ಲಿ ನೋಡಿಕೊಳ್ಳಲು ಬಿಟ್ಟು ತಮ್ಮ ತಮ್ಮ ಕೆಲಸಕ್ಕೆ ಹೋಗುತ್ತಿದ್ದರು. ಇವನ ನಿಷ್ಠೆಯಿಂದ ಕಾಲಕ್ರಮೇಣ ಜನರು ಇವನಿಗೆ ಒಂದು ಗುಡಿಸಲು, ದನಗಳ ಹಾಲು ಕೊಡುತ್ತಿದ್ದರು, ಗುಡಿಸಲು ಪಕ್ಕದಲ್ಲಿಯೇ ಗೋಕಟ್ಟೆ ಕಟ್ಟಲು ಗೋಲ್ಲರಲ್ಲಿ ವಿನಂತಿಸಿದಾಗ, ಗೋಕಟ್ಟೆ ನಿರ್ಮಾಣವಾಯಿತು. ಕ್ರಮೇಣ ಜನ ವಸತಿ ಬೆಳೆಯಿತು ಹೆಳವ ಕಟ್ಟಿಸಿದ ಈ ಕಟ್ಟೆಗೆ "ಹೆಳವನ ಕಟ್ಟೆ'' ಎಂದು ಹೆಸರಾಯಿತು. ಇಲ್ಲಿ ಪಕ್ಕದಲ್ಲಿ ಒಂದು ಹುತ್ತವಿತ್ತು. ಹಸುಗಳು ಕೆಚ್ಚಲು ಭಾರವಾದಾಗ, ಆ ಹುತ್ತದ ಮೇಲೆ ಹಾಲು ಕರೆಯುತ್ತಿದ್ದವು. ಒಂದು ದಿನ ಹೆಳವನಿಗೆ ಸ್ವಪ್ನಾದೇಶವಾಯಿತು. ಈ ಹುತ್ತದಲ್ಲಿ ಮೂರ್ತಿಗಳಿರುವುದಾಗಿ, ಅದರಂತೆ ಬಗೆದು ನೋಡಿದಾಗ ಅಲ್ಲಿ ಹರಿಹರ ಬ್ರಹ್ಮರ ಮೂರ್ತಿಗಳು ದೊರೆತವು. ಕಾಲಾಂತರದಲ್ಲಿ ದೇವಸ್ಥಾನ ನಿರ್ಮಾಣವಾಯಿತು. ಮುಂದೇ ಪುಂಗನೂರಿನ ಅರಸರಿಂದ ನಿರ್ಮಾಣವಾಗಿರಬೇಕೆಂಬುದು ವಿದ್ವಾಂಸರ ಅನಿಸಿಕೆ.

ಗಿರಿಯಮ್ಮಾ ಇದೇ ಹೆಳವನಕಟ್ಟೆ ರಂಗನಾಥನನ್ನು ನೇಮ ನಿಷ್ಠೆಯಿಂದ ಭಕ್ತಿ ಗೈಯುತ್ತಿದ್ದಳು. ಮುಂದೆ ಇವಳಿಗೆ ದೈವಿ ಬಲದಿಂದ ವಾಕ್ ಸಿದ್ಧಿಯಾಯಿತು. ನುಡಿಯುವ ಒಂದೊಂದು ಮಾತು ಸತ್ಯವಾಗ ತೊಡಗಿದವು. ಇವರಲ್ಲಿ ಪರಿಹಾರ ಕೇಳಲು ಬರುತ್ತಿದ್ದರು. ಇವರ ಮೃದು ಮಾತು, ಮಮತೆಯ ಸ್ವರ ನೊಂದ ಜೀವಕ್ಕೆ ಅಮೃತ ಸಿಂಚನದಂತಾಗುತ್ತಿತ್ತು. ಮನಸ್ಸಿಗೆ ಮುದ ನೀಡಿ ಮೊಗದಲ್ಲಿ ಉಲ್ಲಾಸ ಸಂತೋಷ ಮೂಡುತ್ತಿತ್ತು. ನೊಂದ ಜನರು, ತಾಯಿಯಲ್ಲಿ ಮಗು ಓಡಿ ಬರುವಂತೆ, ಇವರಲ್ಲಿ ಓಡಿ ಬರುತ್ತಿದ್ದರು. ಅಷ್ಟು ಇವರ ಮೇಲೆ ನಂಬಿಕೆ ಮತ್ತು ಭಕ್ತಿ.

ಹೀಗೆ ರಂಗನಾಥನ ಸೇವೆಯಲ್ಲಿ ತೊಡಗಿ, ಸನ್ಯಾಸಿಯಂತೆ ಇದ್ದಳು.ಇವಳ ಪತಿ ಇವಳ ಮನ ಇಂಗಿತ ಅರಿತು ಯಾವ ಕಾರ್ಯ

ಸಾಧನೆಗೂ ಅಡ್ಡಿ ಬರಲಿಲ್ಲ. ಮುಂದೆ ಗಿರಿಯಮ್ಮ ಮನೆಯ ಹಿರಿಯರನ್ನು ಮತ್ತು ಪತಿಯನ್ನು ಎರಡನೇ ಮದುವೆಗೆ ಒಪ್ಪಿಸಿ, ಸ್ವತಃ ತಾನೇ ಮುಂದು ನಿಂತು ಎರಡನೇ ಮದುವೆ ಮಾಡಿಸಿದಳು. ತನ್ನ ಬಳಿ ಇದ್ದ ಎಲ್ಲ ಒಡವೆ ವಸ್ತುಗಳನ್ನು ಅವಳಿಗೆ ಉಡುಗೊರೆಯಾಗಿ ಕೊಟ್ಟು ಆಶೀರ್ವದಿಸಿ,ಭಗವಂತನ ಕಾರ್ಯ ಸೇವೆಗಾಗಿ ತನ್ನ ಜೀವ ಮುಡುಪಾಗಿ ಇಟ್ಟಳು.

ಒಮ್ಮೆ ಮಲೇಬೆನ್ನೂರಿಗೆ ಗೋಪಾಲದಾಸರ ಆಗಮನವಾಯಿತು. ಭಕ್ತರು ಸೇರಿದರು ಕೀರ್ತನೆಗಳು, ಪೂಜೆ ನಡೆಯಿತು. ಎಲ್ಲರಂತೆ ಗಿರಿಯಮ್ಮನು ಪೂಜೆ, ಕೀರ್ತನೆಯಲ್ಲಿ ಪಾಲ್ಗೊಂಡಿದ್ದಳು. ಗಿರಿಯಮ್ಮ ರಂಗವಲ್ಲಿಯಲ್ಲಿ ರಂಗನಾಥನ ಚಿತ್ರ ಬಿಡಿಸಿದ್ದಳು. ಅದರಲ್ಲಿ ರಂಗನಾಥನ ಮಂಗಳಮೂರ್ತಿ ದರ್ಶನವಾಗಿ ಆಶ್ಚರ್ಯದಿಂದ ಆನಂದಭಾಷ್ಪ ಬಂದವು. ಗಿರಿಯಮ್ಮಳ ಭಕ್ತಿಗೆ ಮೆಚ್ಚಿ ಅವಳಿಗೆ ಉಪದೇಶ ನೀಡಿ ಶ್ರೀ ಗೋಪಾಲ ಮೂರ್ತಿಯನ್ನು ನೀಡಿ ಅನುಗ್ರಹಿಸಿದರು. ಮುಂದೆ ಇವಳ ಸಿದ್ಧಿಯ ಫಲವಾಗಿ ರಂಗನಾಥ ಸ್ವಾಮಿಯು ತನ್ನ ಎಲ್ಲ ರೂಪಗಳ ಅಟವನ್ನು ಪ್ರಕಟ ಮಾಡತೊಡಗಿದನು. ಹೀಗೆ ಇವಳ ಭಕ್ತಿ ಮತ್ತು ಪವಾಡಗಳು ಹಬ್ಬಿದವು.

ಮಲೇಬೆನ್ನೂರಿಗೆ ಶ್ರೀರಾಘವೇಂದ್ರ ಮಠದ ಶ್ರೀ ಸುಮತೀಂದ್ರ ತೀರ್ಥರು ಬಂದಾಗ, ಇವಳ ಹರಿಭಕ್ತಿ ತಪಃ ಪ್ರಭಾವಕ್ಕೆ ಮೆಚ್ಚಿ ಆಶೀರ್ವದಿಸಿದರು. ಗಿರಿಯಮ್ಮ ತನಗೆ ತಪ್ತ ಮುದ್ರಾಧಾರಣ ಮಾಡಿಸಬೇಕೆಂದು ಸ್ವಾಮಿಗಳಲ್ಲಿ ಭಿನ್ನವಿಸಿಕೊಂಡಾಗ "ಶ್ರೀ ಹರಿಯೇ ಚಕ್ರಾಂಕನ ಮಾಡಿರುವಾಗ, ನನ್ನದೇನೂ ಅಧಿಕಾರ ಇಲ್ಲಮ್ಮ" ಎಂದು ಸುಮತೀಂದ್ರ ಸ್ವಾಮಿಗಳು ಹೇಳಿದರಂತೆ,. ಕಸ್ತೂರಿಯ ಗಂಧ ಮುಚ್ಚಿಡಲು ಹೇಗೆ ಸಾಧ್ಯವಿಲ್ಲವೊ! ಹಾಗೇ ಇವಳ ಪವಾಡ ಮತ್ತು ಸೇವೆ ಹಬ್ಬಿತು. ಕೃಷ್ಣನನ್ನು ತನ್ನ ಮಗ ಎಂದು ಇವಳನ್ನು "ಯಶೋದೆಯಮ್ಮಾ" ಎಂದು ಕರೆದಿದ್ದಾರೆ.

## ಪವಾಡಗಳು

೧) ಒಮ್ಮೆ ರಂಗನಾಥ ದೇವರ ಕೈಯಲ್ಲಿ ಉಂಗರ ಕಳುವಾದಾಗ ಅದು ಪೂಜಾರಿಯ ಮೇಲೆ ಅಪರಾಧ ಬಂತು. ಗಿರಿಯಮ್ಮನಲ್ಲಿ, ಪೂಜಾರಿ ತಾನು ನಿರಪರಾಧಿಯೆಂದು ತನ್ನನ್ನು ಪಾರು ಮಾಡಲು ಕೇಳಿಕೊಂಡನು. ಗಿರಿಯಮ್ಮ ಇವನು ನಿಷ್ಕಳಂಕನಿರುವನೆಂದು ದಿವ್ಯದೃಷ್ಟಿಯಿಂದ ಅರಿತಳು. ಆಗ ರಂಗನಾಥನಲ್ಲಿ ಭಕ್ತಿಯಿಂದ ಸುತ್ತಿಸಿದಳು.

"ಹೊನ್ನು ತಾ ಗುಬ್ಬಿ ಹೊನ್ನು ತಾ ನಮ್ಮ ಚಿನುಮಯಮೂರುತಿ ಚೆಲುವ ರಂಗನ ಕೈಗೆ... " ಎಂಬ ಹಾಡು ಮುಗಿಯುವುದರಲ್ಲಿಯೆ ಎಲ್ಲಿಂದಲೋ ಬಂದ ಗುಬ್ಬಿ ತನ್ನ ಬಾಯಿಂದ ಕಚ್ಚಿ ಹಿಡಿದ ಉಂಗುರವನ್ನು ಚೆಲ್ಲಿ ಹೋಯಿತು ಇದನ್ನು ನೋಡಿದ ಎಲ್ಲರಿಗೂ ತಮ್ಮ ತಪ್ಪಿನ ಅರಿವಾಯಿತು. ಪದ್ಯ ಹಾಡಿದಾಗ ಇಳಗೆ ಮಳೆ ಬಂದು ಕೊಳೆ ಹೋಗಿ ಕಳೆ ತಂದಿತು.

೨) ಮಳೆ ಬಾರದೇ ನೀರಿಗಾಗಿ ಆಹಾಕಾರ ಉಂಟಾದಾಗ "ಮಳೆಯ ದಯ ಮಾಡೋ ರಂಗ.." ಎಂಬ ಪದ್ಯ ಹಾಡಿದಾಗ ಇಳೆಗೆ ಮಳೆ ಬಂದು ಕೊಳೆ ಹೋಗಿ ಕಳೆ ತಂದಿತು.

೩)ಶಾನುಭೋಗ ಮಾಡುತ್ತಿದ್ದ ಮೈದುನ ವೆಂಕಟರಾಯನಿಗೆ ಕುತಂತ್ರಿಗಳ ತಂತ್ರದಿಂದ ಬಂಧನಕ್ಕೆ ಒಳಗಾದ ಗಿರಿಯಮ್ಮ ಬಂಧನ ಮೋಚಕನಾದ ರಂಗನಾಥನನ್ನು ಪ್ರಾರ್ಥಿಸಿದಳು.ಮೇಲಧಿಕಾರಿಗೆ ಸ್ವಪ್ನಾದೇಶವಾಗಿ ಸತ್ಯ ಬಯಲಿಗೆಳೆದು ಮೈದನನು ನಿರಪರಾಧಿ ಎಂದು ಸಾಬೀತಾವಾಯಿತು.

೪) ಪುಂಗನೂರಿನ ರಾಜಕುಮಾರನಿಗೆ ಎಳೇ ವಯಸ್ಸಿನಲ್ಲಿ ಕಣ್ಣು ಹೋಗಿದ್ದವು. ಆಗ ಪರಮಾತ್ಮನನ್ನು ಅನನ್ಯ ಭಕ್ತಿಯಿಂದ "ತೋರಬಾರದೇ ನಿಮ್ಮ ಚರಿತೆಯನರರೊಳು ನಗೆಗೇಡು ಮಾಡದೇ ಕಲ್ಲೊಳು ಕಾಂತೆಯ ಮಾಡಿದವನೆಂದೆಲ್ಲರು ಜಗದೊಳು ಪೇಳುವರು/ ಎಂದು ಹಾಡುತ್ತಾ ದೇವರಿಗೆ ಹಚ್ಚುವ ದೀಪದ ಕಾಡಿಗೆಯನ್ನು ಲೇಪಿಸಿ ಕಣ್ಣು ತೆರಿಸಿದಳು. ಹೀಗೆ ನಿರಂತರ ನೊಂದು ಬಂದ ಭಕ್ತರಿಗೆ ಸ್ವಾಂತನದಿಂದ ಪರಿಹರಿಸುತ್ತಿದ್ದಳು.

ಗಿರಿಯಮ್ಮ ಸಾವಿರಾರು ಕೀರ್ತನೆಗಳನ್ನು ರಚಿಸಿದ್ದಾರೆ. ಹಾಗೇ ಕೆಲವು ಕಥೆಗಳನ್ನು ಸಾಂಗತ್ಯಛಂದದಲ್ಲಿ ರಚಿಸಿದ್ದಾಳೆ. "ಚಂದ್ರಹಾಸಚರಿತೆ", ಸೀತಾ ಕಲ್ಯಾಣ,ಇವೇ ಮೊದಲಾದ ಕಾವ್ಯಗಳು. ಬ್ರಹ್ಮ ಕೊರವಂಜಿ, ಲವಕುಶರ ಕಾಳಗ, ಉದ್ದಾಲಕನಹಾಡು, ಶಂಕರ ಗಂಡನ ಕಥೆ, ಕೃಷ್ಣ - ಕೊರವಂಜಿ, ಗಜೇಂದ್ರ ಮೋಕ್ಷ, ಗಿಳಿ - ಪಾರಿಜಾತ , ಇವೇ ಮೊದಲಾದ ಅನೇಕ ಕಥನ ಕಾವ್ಯಗಳು. ಉದ್ದಾಲಕನ ಹಾಡು ಇದರಲ್ಲಿ ಐದನೂರು ಪದ್ಯಗಳಿದ್ದು ದೀರ್ಘ ಕಾವ್ಯವಾಗಿದೆ. ಹರಿಹರ ಭೇದವೆಣಿಸದೇ ಅನೇಕ ಕೀರ್ತನೆಗಳನ್ನು ಬರೆದು ಹಾಡಿದ್ದಾರೆ.

ಗಿರಿಯಮ್ಮ ತನ್ನ ಕೊನೆಯ ದಿನಗಳಲ್ಲಿ ಹೊನ್ನಾಳಿಯ ಸಮೀಪದ ಕಮ್ಮಾರ ಗಟ್ಟೆಯ ತುಂಗಭದ್ರ ತೀರದಲ್ಲಿ ಪ್ರಾಣ ದೇವರ ದೇವಸ್ಥಾನ ಸ್ಥಾಪಿಸಿದಳು. ಮುಂದೆ ಶ್ರಾವಣ ಶುದ್ಧ ಪಂಚಮಿಯಂದು ತುಂಗೆಯಲ್ಲಿ ಭೌತಿಕ ದೇಹವನ್ನು ತ್ಯಜಿಸಿ ಇಂದಿಗೂ ಜನ ಮಾನಸದಲ್ಲಿ ಅಚ್ಚಳಿಯದೇ ಇದ್ದಾರೆ.

ಗಿರಿಯಮ್ಮ ಸ್ಥಾಪಿಸಿದ ಪ್ರಾಣ ದೇವರ ರಥೋತ್ಸವವಾಗುತ್ತದೆ. ಹಾಗೇ ಶ್ರೀ ರಂಗನಾಥ ದೇವಸ್ಥಾನದ ಆವರಣದಲ್ಲಿ ಭಕ್ತರು ಇವಳಿಗೂ ಗುಡಿ ಕಟ್ಟಿ ತಮ್ಮ ಭಕ್ತಿಯನ್ನು ಸಮರ್ಪಿಸುತ್ತಿದ್ದಾರೆ. ಒಟ್ಟಾರೆ ಗಿರಿಯಮ್ಮ ಸ್ತ್ರೀ ಕುಲಕ್ಕೆ ಕಳಶವಾಗಿದ್ದಾರೆ. ದಾಸಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನದಿಂದ ಮನ್ನಣೆ ಪಡೆದಿದ್ದಾರೆ.

ಧಾರಾವಾಹಿ - 2



# ವೇದದಲ್ಲಿ ಗಣಿತ

- ರಮೇಶ್ ಕುಮಾರ್ ಬನ್ನೂರು
99018 02587

ವೇದಕಾಲದಲ್ಲಿ ರೂಢಿಯಲ್ಲಿದ್ದ ಗಣಿತಶಾಸ್ತ್ರಕ್ಕೆ ಸಂಬಂಧಿತ ಸಿದ್ಧಾಂತಗಳಿಗೆ, ವಿಧಿವಿಧಾನಗಳಿಗೆ "ವೇದಗಣಿತ" ಎನ್ನಲಾಗುತ್ತದೆ. ವೇದಗಳನ್ನು ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ವರ್ಗಾಯಿಸಲಾಗುತ್ತಿತ್ತು. ಕ್ರಿ.ಪೂ. 1500-900 ರ ಅವಧಿಯಲ್ಲಿ ವೇದಗಳು ಲಿಖಿತ ರೂಪವನ್ನು ಪಡೆದವು. ಈ ಪುರಾತನ ಭಾರತೀಯ ಗ್ರಂಥಗಳು ಅಂದಿನ ಜನಾಂಗದ ಸಂಸ್ಕೃತಿ, ನಾಗರೀಕತೆ, ಅನುಭವ ಮತ್ತು ಅರಿವಿನ ದಾಖಲೆಗಳಾಗಿವೆ.

ವೇದಕಾಲದಲ್ಲಿ ಅಂಕುರಾರ್ಪಣೆಗೊಂಡು, ಇತ್ತೀಚಿನ ಶತಮಾನಗಳಲ್ಲಿ ವಿಶೇಷತಃ ಪರಕೀಯರ ಆಕ್ರಮಣ ಮತ್ತು ಆಡಳಿತದ ಕಾಲದಲ್ಲಿ ಮೂಲೆ ಗುಂಪಾಗಿ, ವಿನಾಶದ ಅಂಚಿಗೆ ದೂಡಲ್ಪಟ್ಟಿದ್ದ ಗಣಿತಶಾಸ್ತ್ರಕ್ಕೆ ಸಂಬಂಧಿತ ಸಿದ್ಧಾಂತಗಳ ಗೂಡಾರ್ಥಗಳನ್ನು ಗ್ರಹಿಸುವ ಪ್ರಕ್ರಿಯೆ ಪ್ರಾರಂಭವಾದದ್ದು 20 ನೇ ಶತಮಾನದ ಆದಿಯಲ್ಲಿ.

ಅಂದಿನ ಕಾಲದ ಗಣಿತ ಸೂತ್ರಗಳಿದ್ದ ಗ್ರಂಥಗಳಲ್ಲಿ ವಿಶೇಷತಃ ಅಥರ್ವಣವೇದದ ಗ್ರಂಥಗಳಲ್ಲಿ ಗೂಡಾರ್ಥಗಳಿಂದ ಕೂಡಿದ ಗಣಿತದ ತರ್ಕಬದ್ಧ ಶ್ಲೋಕಗಳಿದ್ದರೂ ಅದರಲ್ಲಿ ಗಣಿತದ ಅಂಕಿ-ಸಂಖ್ಯೆಗಳು ಗೋಚರಿಸದ ಕಾರಣ ಅವುಗಳನ್ನು ಉಪೇಕ್ಷಿಸಲಾಯಿತು. ಅದರಿಂದಾಗಿ ವೇದಗಣಿತದ ಮೂಲ ಸೂತ್ರಗಳು ಜನಮಾನಸದಿಂದ ದೂರವೇ ಉಳಿಯಿತು.

ಈಗಾಗಲೇ ತಿಳಿಸಿರುವಂತೆ "ವೇದಗಣಿತ" ಪುರಾತನ ಗಣಿತಶಾಸ್ತ್ರದ ವ್ಯವಸ್ಥೆಯಾಗಿದ್ದು ಅಂಕಗಣಿತ (Arithmetics) ಬೀಜಗಣಿತ (Algebra) ರೇಖಾಗಣಿತ (Geometry) ತ್ರಿಕೋನಮಿತಿ, (Trigonometry) ಕಲನಶಾಸ್ತ್ರ, (Calculus) ಮುಂತಾದ ಗಣಿತದ ಸಮಸ್ಯೆಗಳನ್ನು ಬಿಡಿಸುವ ಸರಳ ಹಾಗೂ ಸುಲಭವಾದ ನೀತಿ, ನಿಯಮ, ಸೂತ್ರ ಮತ್ತು ತಾಂತ್ರಿಕ ವಿಧಾನಗಳನ್ನು (Techniques) ಒಳಗೊಂಡ ಗ್ರಂಥಭಾಗವಾಗಿತ್ತು.

ವೇದಗಣಿತದ ಪುನಶ್ಚೇತನ ಪವಾಡ ಸದೃಶ ಕಾರ್ಯ. ಈ ಪುರಾತನ ಗ್ರಂಥಗಳಿಂದ ಗಣಿತದ ಪ್ರಮೇಯ ಮತ್ತು ಉಪಸಿದ್ಧಾಂತಗಳನ್ನು ಹೆಕ್ಕಿ ತೆಗೆಯಲು ಪ್ರಪ್ರಥಮವಾಗಿ ಈ ಪವಿತ್ರ ಗ್ರಂಥಗಳನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ, ಅಭ್ಯಸಿಸಿ, ಅರ್ಥೈಸಿಕೊಂಡು ಮುಂದುವರಿಯಲು ಅಪಾರ ಜ್ಞಾನ ತಿಳುವಳಿಕೆ ಹಾಗೂ ಸೂಕ್ಷ್ಮಬುದ್ಧಿ ಅವಶ್ಯಕವಾಗಿತ್ತು.

ಹೀಗೆ ಪುರಾತನ ಗ್ರಂಥಗಳನ್ನು ಅನೇಕ ವರ್ಷಗಳ ಅಧ್ಯಯನ ಮಾಡಿ, ಅಭ್ಯಸಿಸಿ, ಸೂಕ್ಷ್ಮವಾಗಿ ಸಂಶೋಧನೆ ನಡೆಸಿ ವೇದ ಕಾಲದ ಗಣಿತದ ಸೂತ್ರಗಳನ್ನು ಜನಸಾಮಾನ್ಯರಿಗೆ ತಿಳಿಯುವಂತೆ ಮರುರಚನೆ ಮಾಡಿದ ಶ್ರೇಯ ಶ್ರೀ ಶ್ರೀ ಶ್ರೀ ಭಾರತೀ ಕೃಷ್ಣ ತೀರ್ಥ ಸ್ವಾಮೀಜಿಯವರಿಗೆ ಸಲ್ಲಬೇಕು.


### ವೇದಗಣಿತದ ಬಗ್ಗೆ ಹೆಚ್ಚುತ್ತಿರುವ ಆಸಕ್ತಿ

ಗಮನಾರ್ಹವಾದ ಗಣಿತದ ಈ ಸುಲಭ ಮತ್ತು ಸರಳ ವಿಧಾನಗಳು ಶಿಕ್ಷಣ ಕ್ಷೇತ್ರದಲ್ಲಿ ಅಪಾರವಾದ ಆಸಕ್ತಿಯನ್ನು ಕೆರಳಿಸಿರುವುದು ಮಾತ್ರವಲ್ಲದೆ ವಿದ್ಯಾರ್ಥಿ ಸಮುದಾಯ ಈ ವಿಧಾನಗಳತ್ತ ಆಕರ್ಷಿತರಾಗಿದ್ದಾರೆ. ಗಣಿತದ ಸಮಸ್ಯೆಗಳನ್ನು ವೇಗವಾಗಿ ಬಿಡಿಸುವ ನಿಟ್ಟಿನಲ್ಲಿ ಭಾರತೀಯ ತಾಂತ್ರಿಕ ಸಂಸ್ಥೆಗಳ (IIT)ವಿದ್ಯಾರ್ಥಿಗಳೂ ಸಹ ಈ ಕ್ರಮಗಳನ್ನು ಅನುಸರಿಸುವತ್ತ ಒಲವು ತೋರುತ್ತಿರುವುದು ವೇದಗಣಿತದಲ್ಲಿ ಹೆಚ್ಚುತ್ತಿರುವ ಆಸಕ್ತಿಗೆ ದ್ಯೋತಕವಾಗಿದೆ.

(ಮುಂದುವರಿಯುವುದು)

# ಐಜಿ. ಸ್ವಾಮಿ ಶ್ರೀ ವ್ಯಾಸ ತತ್ವಜ್ಞರು

– ಶ್ರೀಧರ ರಾಯಸಂ
98453 27129



ಶ್ರೀರಾಘವೇಂದ್ರ ಸ್ವಾಮಿಗಳ ಗುರು ಪರಂಪರೆಯಲ್ಲಿದ್ದ ಶ್ರೀಭುವನೇಂದ್ರ ತೀರ್ಥರಿಂದ ಸನ್ಯಾಸಾಶ್ರಮ ಸ್ವೀಕರಿಸಿದ ಮಹಾನುಭಾವರು ವೇಣಿಸೋಮಪುರದ ಶ್ರೀವ್ಯಾಸತತ್ವಜ್ಞರು ದ್ವೈತ ವೇದಾಂತದ ವ್ಯಾಸ, ದಾಸ ಸಾಹಿತ್ಯ ಎರಡರಲ್ಲೂ ಸಮಾನ ಪಾಂಡಿತ್ಯ ಪಡೆದ ಮಹಾನ್‌ಯತಿಗಳು.

ಕ್ರಿ.ಶ. 1704 ರಲ್ಲಿ ವೆಂಕಟರಾಮಾಚಾರ್ಯರೆಂಬ ಹೆಸರಿನಲ್ಲಿ ವೆಂಕಟನರಸಿಂಹಾಚಾರ್ಯರಿಗೆ ಪುತ್ರರಾಗಿ, ತೆಲಂಗಾಣದ ಗದ್ವಾಲ್ ವ್ಯಾಪ್ತಿಯ ಕೃಷ್ಣಾ ತುಂಗಭದ್ರಾ ನದಿಗಳ ನಡುವೆ ಇರುವ ಐಜಿ ಎಂಬ ಗ್ರಾಮದಲ್ಲಿ ಜನಿಸಿದರು. ಪೂರ್ವಾಶ್ರಮದಲ್ಲಿ ಐಜಿ ಗ್ರಾಮದಲ್ಲಿ ವಾಸವಾಗಿದ್ದುದರಿಂದ, ಸ್ಥಳೀಯರು “ಐಜಿ ಸ್ವಾಮಿ ಎಂದೇ ಸಂಬೋಧಿಸಿದರು. ನಂತರ ಐಜಿ ಗ್ರಾಮ ಬಿಟ್ಟು, ವೇಣಿಸೋಮಪುರದಲ್ಲಿ ನೆಲೆಸಿ ಪ್ರಸಿದ್ಧರಾದರು. ತಮಗೆ ಒಲಿದ ಶ್ರೀವೇಣುಗೋಪಾಲ ಕೃಷ್ಣನ ಶಿಲಾ ಪ್ರತಿಮೆಯನ್ನು ಅಲ್ಲಿ ಪ್ರತಿಷ್ಠಾಪಿಸಿದರು. ವೆಂಕಟರಾಮಾಚಾರ್ಯರು ವೇಣಿಸೋಮಪುರದಲ್ಲಿದ್ದಾಗ, ಅನೇಕ ಶಿಷ್ಯರು ವಿದ್ಯಾರ್ಜನೆಗೆ ಇವರನ್ನು ಆಶ್ರಯಿಸಿದರು ಆಚಾರ್ಯರಿಗೆ ಪುತ್ರ ಸಂತಾನವಿಲ್ಲದೆ ಇದ್ದಾಗ,ವರದ ಗೋಪಾಲದಾಸರು ಸಂತಾನ ಭಾಗ್ಯ ಕರುಣಿಸುವ ವೇಣುಗೋಪಾಲನನ್ನು ಪ್ರತಿಷ್ಠಾಪಿಸಿದರೆ, ಸಂತಾನ ಪ್ರಾಪ್ತಿಯಾಗುವುದೆಂದು ತಿಳಿಸಿದರು.ವೆಂಕಟರಾಮಾಚಾರ್ಯರು ಸಮೀಪದ ವಲ್ಲೂರು ಎಂಬ ಗ್ರಾಮಕ್ಕೆ ಪ್ರವಚನ ಮಾಡಲು ಹೋಗಿದ್ದಾಗ ರಾತ್ರಿ ಸ್ವಪ್ನದಲ್ಲಿ ಗೋಪಾಲ ಕೃಷ್ಣ ದೇವರೇ ದರ್ಶನ ನೀಡಿ, ನಾನು ಇದೇ ಗ್ರಾಮದ ಕೆರೆ ತೂಬಿನ ಕೆಳಗೆ ಇದ್ದೇನೆ, ನನ್ನನ್ನು ತೆಗೆದುಕೊಂಡು ಹೋಗಿ ನೀನು ನೆಲೆಸಿರುವ ವೇಣಿ ಸೋಮಪುರದಲ್ಲಿ ಪ್ರತಿಷ್ಠಾಪಿಸು, ನಿನಗೆ ಸಂತಾನ ಪ್ರಾಪ್ತಿಯಾಗುವುದೆಂದು ತಿಳಿಸಿದಂತಾಯಿತು. ಮರುದಿನ ಭೂಮಿ ಅಗೆದಾಗ ವೇಣುಗೋಪಾಲ ದೇವರ ವಿಗ್ರಹ ದೊರಕಿತು. ಆಚಾರ್ಯರು ಆ ವಿಗ್ರಹವನ್ನು ತಂದು ವೇಣಿಸೋಮಪುರದಲ್ಲಿ ವೈಶಾಖ ಶುದ್ಧ ದಶಮಿಯಂದು ಪ್ರತಿ ಷ್ಠಾಪಿಸಿದರು.

ಗೃಹಸ್ಥಾಶ್ರಮದ ಬಳಿಕ ಆಚಾರ್ಯರು ಲೌಕಿಕ ಸಂಸಾರದಲ್ಲಿ ವಿರಕ್ತಿ ಹೊಂದಿ, ಸನ್ಯಾಸಾಶ್ರಮ ಸ್ವೀಕರಿಸಲು ನಿರ್ಧರಿಸಿದರು! ಶ್ರೀರಾಘವೇಂದ್ರ ಸ್ವಾಮಿಗಳ ಗುರು ಪರಂಪರೆಯ ಯತಿಗಳಾದ ಶ್ರೀಭುವನೇಂದ್ರತೀರ್ಥರು, ಶ್ರೀ ವೆಂಕಟರಾಮಾಚಾರ್ಯರಿಗೆ ಸನ್ಯಾಸಾಶ್ರಮ ನೀಡಿ“ ಶ್ರೀ ವ್ಯಾಸತತ್ವಜ್ಞರು” ಎಂಬ ನಾಮಕರಣ ಮಾಡಿ, ಯತಿ ದೀಕ್ಷೆ ಅನುಗ್ರಹ ಮಾಡಿದರು. ಕೆಲವು ದಿವಸ ಶ್ರೀಭುವನೇಂದ್ರ ತೀರ್ಥರ ಜೊತೆಗೆ ಮಂತ್ರಾಲಯದಲ್ಲಿ ನೆಲೆಸಿ, ಅನೇಕ ಗ್ರಂಥಗಳನ್ನು ಓದಿ, ಪಾಂಡಿತ್ಯ ಪಡೆದರು. ಶ್ರೀಭುವನೇಂದ್ರ ತೀರ್ಥರು ದಯಪಾಲಿಸಿದ ಅಪರೂಪದ ದೇವರ ಪ್ರತಿಮೆಗಳನ್ನು ಭಕ್ತಿಯಿಂದ ಪೂಜಿಸಿದರು. ನಂತರ ಗುರುಗಳ ಅನುಮತಿ ಪಡೆದು, ನಿತ್ಯ ಪೂಜೆಗೆ ನೀಡಿದ ಅವರು ಪೂಜೆ ಮಾಡಿದ್ದ “ಷೋಡಶಬಾಹು ನರಸಿಂಹ ದೇವರ” ವಿಗ್ರಹವನ್ನು ಸ್ವೀಕರಿಸಿ,ವೇಣಿಸೋಮಪುರಕ್ಕೆ ಬಂದರು.ವೇಣಿಸೋಮಪುರ ಶ್ರೀವ್ಯಾಸತತ್ವಜ್ಞರ ಸಾಧನಾ ತಾಣವಾಗಿ, ಅನೇಕ ಶಿಷ್ಯರು ಇವರಲ್ಲಿ ವಿದ್ಯಾಭ್ಯಾಸಕ್ಕೆ ಬಂದಿದ್ದು ವಿಶೇಷ ವಾಗಿತ್ತು, ಶ್ರೀ ರಾಘವೇಂದ್ರ ಸ್ವಾಮಿಗಳ ಅಂತರಂಗದ ಭಕ್ತರಾಗಿ, ಮಾನಸಸ್ಮೃತಿ, ಸುಧಾದ್ಯುಕ್ತಿ ರಹಸ್ಯ. ಚಂದ್ರಿಕಾ, ಶರದಾಗಮ, ಮುಂತಾದ ಅನೇಕ ಅಮೂಲ್ಯ ಕೃತಿಗಳನ್ನು ರಚಿಸಿ, ವಾಂಙ್ಮಯ ಜಗತ್ತಿಗೆ ನೀಡಿದ ಮಾಧ್ವ ಮಹಾನುಭಾವರು.“ವಾಸುದೇವವಿಠಲ” ಎಂಬ ಅಂಕಿತನಾಮದಿಂದ ನೂರಾರು ಕೀರ್ತನೆಗಳನ್ನು ಸುಳಾದಿಗಳನ್ನು ರಚಿಸಿದ್ದಾರೆ.

ಶ್ರಾವಣ ಮಾಸ ಕೃಷ್ಣ ಪಕ್ಷ ನವಮಿ, ಇವರ ಆರಾಧನೆ ವೇಣಿಸೋಮಪುರದಲ್ಲಿ ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ಜರುಗುವುದು.

### ಮೂಲ ಸ್ತೋತಕ್ಕೆ ಸಂಬಂಧಿಸಿದ ಹುಟ್ಟು - ಸಾವು

ಪರಾಶರರು ಮುಂದುವರೆಸುತ್ತಾರೆ. "ಬ್ರಹ್ಮ, ವಿಷ್ಣು ಹಾಗೂ ಶಿವ ಎಂಬುದು ಪರಮಾತ್ಮನ ಬಹಳ ಶಕ್ತಿಶಾಲಿ ಊರ್ಜೆಗಳು. ಅವರ ನಂತರ ದೇವತಾ ವರ್ಗ ದಕ್ಷ ಮತ್ತವನಂತಿರುವವರು ಮಾನವರು ಪ್ರಾಣಿಗಳು ಪಕ್ಷಿಗಳು, ಕೀಟ ಗಳು ತರಕಾರಿಗಳು ಇತ್ಯಾದಿ. ಮೂಲ ಸ್ತೋತದಿಂದ ದೂರ ಸರಿದಂತೆ ಪ್ರತಿಯೊಂದು ದುರ್ಬಲವಾಗುತ್ತಾ ಹೋಗುತ್ತವೆ. ಈ ರೀತಿ, ಉದಾಹರಿಸಿದ ಬ್ರಹ್ಮನ್ ಎಂಬುದೇ ವ್ಯಕ್ತವಾಗಿ ಈ ಜಗತ್ತಾಗಿದೆ. ಅದು ಅಮರ ಅಜರವಾಗಿದ್ದರೂ ಗೋಚರಾಗೋಚರವಾಗುತ್ತಾ ಜನನ ಮರಣಗಳಿಗೆ ಸಿಲುಕಿದೆಯೋ ಎಂಬಂತೆ ಭಾಸವಾಗುತ್ತದೆ."

ಈಗ ಈ ಸಾಲುಗಳಲ್ಲಿ ಬ್ರಹ್ಮನನ್ನು ಗುರುತ್ವದಿಂದ, ವಿಷ್ಣುವನ್ನು ಜಡ ಸ್ಥಿತಿಯ (ಇನರ್ಷಿಯಾ) ಹಾಗೂ ಶಿವನನ್ನು ಕಪ್ಪು ಊರ್ಜೆಯಿಂದ ಬದಲಿಸಿ ಪುನಃ ಓದೋಣ.

ಪರಾಶರರು ಮುಂದುವರೆಸುತ್ತಾರೆ, "ಗುರುತ್ವ, ಜಡಸ್ಥಿತಿ ಹಾಗೂ ಕಪ್ಪು ಊರ್ಜೆ ಎಂಬುದು ಬಹಳ ಶಕ್ತಿಶಾಲಿ ವಿಕಾಸಗಳು. ಅವುಗಳ ನಂತರ ದೇವತಾವರ್ಗ;ದಕ್ಷ ಮತ್ತವನಂತಿರುವವರು; ಮಾನವರು; ಪ್ರಾಣಿಗಳು, ಪಕ್ಷಿಗಳು, ತರಕಾರಿಗಳು ಇತ್ಯಾದಿ. ಮೂಲ ಸ್ತೋತದಿಂದ ದೂರ ಸರಿದಂತೆ ಪ್ರತಿಯೊಂದು ದುರ್ಬಲವಾಗುತ್ತಾ ಹೋಗುತ್ತವೆ. ಈ ರೀತಿ ಉದಾಹರಿಸಿದ ಮೂಲ ಸ್ತೋತ ಎಂಬುದು ವ್ಯಕ್ತವಾಗಿ ಈ ಜಗತ್ತಾಗಿದೆ. ಅದು ಅಮರ ಅಜರವಾಗಿದ್ದರೂ ಗೋಚರಾಗೋಚರವಾಗುತ್ತಾ ಜನನ ಮರಣಗಳಿಗೆ ಸಿಲುಕಿದೆಯೋ ಎಂಬಂತೆ ಭಾಸವಾಗುತ್ತದೆ."

ಹೀಗೆ ಪರಾಶರರು ಬಹಳ ಸೊಗಸಾಗಿ ಮೃತ್ಯುವಿನ ಸಿದ್ಧಾಂತವನ್ನು ವಿವರಿಸಿದ್ದಾರೆ.

ಮೂಲ ಸ್ತೋತ್ರವೇ ಪರಮ ಪ್ರಜ್ಞೆ. ಅದು ಅವಿನಾಶಿ ಹಾಗೂ ನಿತ್ಯ. ಅದರಿಂದ ಗುರುತ್ವ, ಜಡತ್ವ, ಕಪ್ಪು ಊರ್ಜೆಗಳು ಉದಯಿಸುತ್ತವೆ. ಅವುಗಳು ವಿಶ್ವದ ಕಾಲದಲ್ಲಿ ಅವಿನಾಶಿ ಹಾಗೂ ನಿತ್ಯವಾಗಿರುತ್ತವೆ. ನಂತರ ಬರುವುದೇ ಕ್ವಾರ್ಕ್ - ಗ್ಲೂ ಆನ್ ಪ್ಲಾಸ್ಮಾ ಹಾಗೂ ಇತರೆ ಅವಪರಮಾಣುಕ ಕಣಗಳು (ಸಬ್-ಅಟಾಮಿಕ್ ಪಾರ್ಟಿಕಲ್ಸ್). ಅವುಗಳು ಈ ಬಲಗಳಿಗಿಂತ ಹೆಚ್ಚು ವಿನಾಶಿ. ಆದರೆ ಪರಮಾಣು ಮತ್ತು ಧಾತುಗಳಿಗಿಂತ ಹೆಚ್ಚು ಅವಿನಾಶಿ ಪರಮಾಣುಗಳು ಹಾಗೂ ಧಾತುಗಳಾದರೋ ಅವಪರಮಾಣುಕ ಕಣಗಳಿಗಿಂತ ಹೆಚ್ಚು ವಿನಾಶಿ,ಆದರೆ ಯೌಗಿಕಗಳಿಗಿಂತ (ಕಾಂಪೌಡ್ಸ್) ಹೆಚ್ಚು ಅವಿನಾಶಿ. ಯೌಗಿಕದಿಂದ ವಿಕಾಸ ಹೊಂದುವ ಜೀವರಾಶಿಗಳು ಈ ಯೌಗಿಕಗಳಿಗಿಂತ ಹೆಚ್ಚು ವಿನಾಶಿ.ಹಾಗಾಗಿ ಹೇಗೆ ದ್ರವ್ಯ ಹಾಗೂ ಜೀವಿಗಳು ಹೆಚ್ಚು ಸಂಕೀರ್ಣ ರೂಪಗಳಾಗಿ ವಿಕಾಸ ಹೊಂದುತ್ತವೋ, ಅವು ಆ ಮೂಲ ಸ್ತೋತದಿಂದ ದೂರ ಸಾಗುತ್ತಾ, ಬೇಗ ಅವಸಾನ ಹೊಂದುತ್ತವೆ ಹಾಗೂ ಪುನರುತ್ಪತ್ತಿ/ಪುನರ್ಜನ್ಮ ಪಡೆಯುತ್ತವೆ.



# ಬ್ರಹ್ಮ ಗುರುತ್ವ

– ಹೇಮಂತ್ ಕುಮಾರ್ ಜಿ.

ಜೀವ ಪ್ರಭೇದಗಳಾದ ಬ್ಯಾಕ್ಟೀರಿಯಾಗಳು ಹಾಗೂ ಇನ್ನಿತರೆ ಆದಿಮ ರೂಪಗಳು ಸಂಕೀರ್ಣ ಜೀವಿಗಳಿಗಿಂತ ದೀರ್ಘ ಕಾಲ ಬಾಳುತ್ತವೆ. ಉದಾ-ಕೆಲ ಆದಿಮ ರೂಪಗಳು ಕೇವಲ ವಿಭಜನೆ ಹೊಂದುತ್ತವೆ. ಆ ನಿಟ್ಟಿನಲ್ಲಿ ಈ ರೂಪಗಳು ಸಸ್ಯ ರೂಪಗಳಿಗಿಂತ ಹೆಚ್ಚು ಕಾಲ ಬಾಳುತ್ತವೆ. ಸಸ್ಯ ರೂಪಗಳಾದರೋ ಪ್ರಾಣಿ ರೂಪುಗಳಿಗಿಂತ ಹೆಚ್ಚು ಕಾಲ ಬಾಳುತ್ತವೆ. ಇದಕ್ಕೆ ಅಪವಾದವೆಂದರೆ ಹೆಚ್ಚು ಪ್ರಮಾಣದ ಬುಧ್ಧಿ ಸಂಗ್ರಹಿಸಿದ ಮಾನವ ಜೀವಿಗಳು. ಮಾನವರು ಹಲವು ಜೀವ ರೂಪಗಳಿಗಿಂತ ಹೆಚ್ಚು ಕಾಲ ಬಾಳುತ್ತಾರೆ. ಏಕೆಂದರೆ ಅವರು ಉನ್ನತ ಬೌದ್ಧಿಕತೆಯನ್ನು ಪಡೆದು ಪರಮ ಚೈತನ್ಯದತ್ತ ಹಿಂತಿರುಗುತ್ತಿದ್ದಾರೆ. ಇತರೆ ಶಬ್ದಗಳಲ್ಲಿ ಹೇಳುವುದಾದರೆ ಮಾನವರು ಪರಮಾತ್ಮನನ್ನು ಅರಿಯುವತ್ತ ವಿಕಾಸದ ಹಂತದಲ್ಲಿದ್ದಾರೆ. ಅವರು ಪರಮ ಪ್ರಜ್ಞೆಯತ್ತ ಹೋದಂತೆಲ್ಲಾ ಹೆಚ್ಚೆಚ್ಚು ದೀರ್ಘಕಾಲ ಬಾಳುತ್ತಾರೆ.

### ಗುರುತ್ವದಕಾಲ ವಿಸ್ತಾರಣ (ಗ್ರ್ಯಾವಿಟೇಶನಲ್ ಟೈಮ್ ಡೈಲೇಶನ್)

ಪುರಾಣಗಳಲ್ಲಿರುವ ಕಥೆಗಳ ಹೇಳಿಕೆಯಂತೆ ಬ್ರಹ್ಮ ಲೋಕದಲ್ಲಿ ೧ ದಿನವು ೧ ಕಲ್ಪಕ್ಕೆ ಸಮ, ಅದು ಭೂಮಿಯಲ್ಲಾದರೆ ಕೋಟ್ಯಂತರ ವರ್ಷಗಳಾಗುತ್ತದೆ; ಕಾರಣ, ಭೂಮಿಯು ಗುರುತ್ವದ ಕಾಲ ವಿಸ್ತಾರಣೆಯಿಂದ ಮೇಲ್ಬರಲು ಬೇಕಾಗುವ ದೀರ್ಘಕಾಲ. ವಿಜ್ಞಾನದ ಪ್ರಕಾರ ಸ್ಥೂಲ ಕಾಯಗಳಿಂದ (ಮ್ಯಾಸೀವ್ ಆಬ್ಜೆಕ್ಟ್ಸ್ ಅಥವಾ ಉನ್ನತ ಗುರುತ್ವ ವಿಭವ ) ದೂರವಿರುವ ಗಡಿಯಾರಗಳು ವೇಗದಲ್ಲಿ ಓಡುತ್ತವೆ ಹಾಗೂ ಸ್ಥೂಲ ಕಾಯಗಳಿಗೆ (ಅಥವಾ ಕೆಳ ಗುರುತ್ವ ವಿಭವ) ಹತ್ತಿರವಿರುವ ಗಡಿಯಾರಗಳು ನಿಧಾನವಾಗಿ ನಡೆಯುತ್ತವೆ. ಪೌರಾಣಿಕ ಕಥೆಗಳಂತೆ ಬ್ರಹ್ಮನು ಗುರುತ್ವವೆಂಬ ತಥ್ಯದಿಂದ ಉದಯಿಸಿರಬೇಕು. ವಿಷ್ಣು ಪುರಾಣದಲ್ಲಿ ತುಲನಾತ್ಮಕ ಅಧ್ಯಯನ ಮಾಡಿದಂತೆ, ಮೇಲಿನ ವಾಕ್ಯಗಳನ್ನು ಉನ್ನತ ಗುರುತ್ವಾಕರ್ಷಣ ವಿಭವವನ್ನು ಪರಬ್ರಹ್ಮನಿಗೆ ಹೊಂದಿಸಿ ಓದೋಣ.

ವಿಜ್ಞಾನ ಹೇಳುತ್ತದೆ, ಗುರುತ್ವದ ಮೂಲ ಸ್ರೋತದಿಂದ ದೂರವುಳ್ಳ ಗಡಿಯಾರಗಳು ವೇಗದಲ್ಲಿ ಸಾಗಿದರೆ, ಅದಕ್ಕೆ ಹತ್ತಿರವುಳ್ಳವು ನಿಧಾನವಾಗಿ ಚಲಿಸುತ್ತವೆ. ಇದನ್ನೇ ಪುರಾಣ ಕಥೆಗಳೂ ತಮ್ಮದಾದ ಧಾಟಿಯಲ್ಲಿ ಹೇಳಿವೆ.

### ಶಿವ, ಸ್ಕಂದ, ಹರಿ ಹಾಗೂ ವಿಷ್ಣುಗಳಲ್ಲಿರುವ ವ್ಯತ್ಯಾಸ

ವಿಜ್ಞಾನದ ಪ್ರಕಾರ, ಪ್ರಚ್ಛನ್ನ ಹಾಗೂ ಚಲನಗಳು ಊರ್ಜೆಗೆ ಸಂಬಂಧಿಸಿವೆ. ಬಲ-ಕ್ಷೇತ್ರಗಳು ಬಲಗಳಿಗೆ ಸಂಬಂಧಿಸಿವೆ. ಊರ್ಜೆಯು ಶಿವ ಹಾಗೂ ಸ್ಕಂದ. ಶಿವನು ಕಪ್ಪು ಊರ್ಜೆ ಹಾಗೂ ವಿಶ್ವವನ್ನು ವಿಸ್ತಾರಗೊಳಿಸುತ್ತಿರುವ ಬಲ. ಸ್ಕಂದನೆಂದರೆ ಕಪ್ಪು-ಊರ್ಜೆಯಿಂದ ಉಪನ್ಯಸ್ತ ಊರ್ಜೆ, ಸ್ಕಂದನ ಇನ್ನೊಂದು ಹೆಸರು ಷಣ್ಮುಖ, ಅಂದರೆ ವಿಶ್ವದಲ್ಲಿ ಕಾಣಸಿಗುವ ೬ ರೀತಿಯ ಊರ್ಜೆಗಳು, ಬಲಗಳು ಮತ್ತು ಕ್ಷೇತ್ರಗಳೇ ರುದ್ರರು.

ಸುಲಭವಾಗಿ ಅರ್ಥಮಾಡಿಕೊಳ್ಳಬೇಕೆಂದರೆ, ಕ್ಲಾಸಿಕಲ್ ಮೆಕಾನಿಕ್ಸ್ ಪ್ರಪಂಚದಲ್ಲಿ, ಊರ್ಜೆಯೆಂದರೆ ಬಲ ಮತ್ತು ದೂರದ ಗುಣಕ ಅಥವಾ ವಸ್ತುವಿನ ಮೇಲೆ ಬೀರುತ್ತಿರುವ ಬಲಗಳ ಏಕೀಕರಣ (ಇಂಟಿಗ್ರೇಷನ್) ಹಾಗಾಗಿ ಶಿವ, ಸ್ಕಂದ, ರುದ್ರರೆಲ್ಲಾ ಪರಸ್ಪರ ಸಂಬಂಧಿಗಳು.

ಊರ್ಜೆಯೊಂದಿಗೆ ಬೆಸೆದುಕೊಂಡಿರುವ ಪ್ರಚ್ಛನ್ನ ಮತ್ತು ಚಲನೆಗಳೇ ವಿಷ್ಣು. ವಿಜ್ಞಾನದ ಪ್ರಕಾರ, ಪ್ರಚ್ಛನ್ನ ಹಾಗೂ ಚಲನವು ಈ ಊರ್ಜೆಗಳ ಸ್ಥಿತಿಯನ್ನು ವ್ಯಾಖ್ಯಾನಿಸುತ್ತದೆ. ಇದಕ್ಕೆ 'ಪ್ರಕೃತಿ' ಕಾರಣ, ಪ್ರಚ್ಛನ್ನದಿಂದ ಚಲನೆಯಾಗಿ ಪರಿವರ್ತನೆಯಾಗಬೇಕೆಂದರೆ ಪ್ರಕೃತಿಯೇ ಕಾರಣ ಅಥವಾ ಸಂದರ್ಭಾನುಸಾರ ಕಾರಣವಿರುತ್ತದೆ.

ಆದರೆ ವೇದಗಳು ಹೇಳುವಂತೆ ಈ ಊರ್ಜೆಗೂ (ಶಿವ ಮತ್ತು ಸ್ಕಂದ) ಆಳದಲ್ಲಿ ಹಾಗೂ ಬಲ ಕ್ಷೇತ್ರಗಳ (ರುದ್ರರ) ಹಿಂದೆ ಪರಮ ಚೈತನ್ಯವಿದೆ. ಅದುವೇ ವಿಶ್ವದ ಪುಚ್ಛನ್ನ ಮತ್ತು ಚಲನ ಊರ್ಜೆಗಳ ಮೂಲ ಕಾರಣ. ಅದನ್ನು ಹರಿ ಎಂದು ಕರೆದರು.

ಹರಿ ಎಂಬ ಆ ಪರಮ ಚೈತನ್ಯವೇ ವಿಶ್ವದ ಆಂತರ್ಯದಲ್ಲಿ ಜಡವಾಗಿ (ಇನರ್ಷಿಯಾ /ವಿಷ್ಣು) ಉದಯಿಸುತ್ತದೆ. ಜಡವಾದರೋ (ಇನರ್ಷಿಯಾ /ವಿಷ್ಣು ) ಗುರುತ್ವವಾಗಿ (ಬ್ರಹ್ಮ) ಬಾಹ್ಯದಲ್ಲಿ ವ್ಯಕ್ತವಾಗುತ್ತದೆ. ಈ ಬ್ರಹ್ಮವೂ ಒಂದು ರುದ್ರವನ್ನು (ಬಲ - ಕ್ಷೇತ್ರ) ಸೃಷ್ಟಿಸುತ್ತದೆ. ಆಳದಲ್ಲಿ ನೋಡಿದರೆ ಹರಿ, ವಿಷ್ಣು, ಕೃಷ್ಣ, ಶಿವ, ರುದ್ರ, ಸ್ಕಂದ ಇನ್ನಿತರ ಎಲ್ಲಾ ಹೆಸರುಗಳು ಆ ಪರಮ ಚೈತನ್ಯಕ್ಕೆ ಅನ್ವಯಿಸುತ್ತದೆ ಅಥವಾ ಇವೆಲ್ಲವೂ ವಿಶ್ವದಲ್ಲಿ ಆ ಪರಮ ಪ್ರಜ್ಞೆಯ ವಿವಿಧ ರೂಪಗಳಾಗಿವೆ.

# ಶ್ರೀ ಕೃಷ್ಣ ಪರಮಾತ್ಮ



ವಸುದೇವಸುತಂ ದೇವಂ ಕಂಸಚಾಣೂರಮರ್ದನಮ್
ದೇವಕೀಪರಮಾನಂದಂ ಕೃಷ್ಣವಂದೇ ಜಗದ್ಗುರಮ್॥

ಬಿ.ಆರ್.ಶ್ರೀಕಂಠಯ್ಯ

ಪರಮಾತ್ಮನಾದ ಶ್ರೀ ಕೃಷ್ಣನು ಹುಟ್ಟಿದ್ದು ಕಾರಾಗೃಹದಲ್ಲಿ ದೇವಕಿ ಮತ್ತು ವಸುದೇವನ ಮಗನಾಗಿ ಎಲ್ಲರಿಗೂ ತಿಳಿದ ಹಾಗೆ ದೇವಕಿ ವಸುದೇವರ ವಿವಾಹದ ನಂತರ ಕಂಸನು ತನ್ನ ತಂಗಿಯನ್ನು ಪತಿಯೊಡನೆ ರಥದಲ್ಲಿ ಕುಳ್ಳಿರಿಸಿಕೊಂಡು ಹೋಗುತ್ತಿರುವಾಗ 'ಆಕಾಶವಾಣಿ' ಯು, ಕಂಸನನ್ನು ಸಂಬೋಧಿಸಿ ಹೇಳಿತು.

ಅಸ್ಯಾಸ್ತ್ವಾ ಮಷ್ಟಮೋ ಗರ್ಭೋ ಹಸ್ತಾ ಯಾಂ ವಹಸೇ ಬುಧ

'ಮೂರ್ಖನೇ! ನಿನ್ನ ತಂಗಿಯ ಗರ್ಭದಲ್ಲಿ ಹುಟ್ಟುವ 8 ನೆಯ ಶಿಶುವು ನಿನಗೆ ಮೃತ್ಯುವಾಗುತ್ತದೆ. ಎಂಟನೇಯ ಗರ್ಭದಿಂದ ಅವನ ಸಂಹಾರವಾಗುವುದು.ಈ ಕಾರಣದಿಂದ ಕಂಸನು ದೇವಕಿಯನ್ನು ಸಂಹರಿಸಲು ಮುಂದಾದಾಗ, ವಸುದೇವನು ದೈನ್ಯತೆಯಿಂದ ನೀನು ಕೊಲ್ಲಬೇಡ, ನಮಗೆ ಜನಿಸುವ ಎಲ್ಲ ಸಂತಾನವನ್ನು ನಿನಗೆ ಸಮರ್ಪಿಸುತ್ತೇವೆ ಎಂದು ವಚನವನ್ನು ಕೊಡುತ್ತಾನೆ. ಇದಕ್ಕೆ ಸಮ್ಮತಿಸಿ ಕಂಸನು ನೂತನ ದಂಪತಿಗಳನ್ನು ಕಾರಾಗೃಹದಲ್ಲಿರಿಸುತ್ತಾನೆ.

ದಂಪತಿಗಳು ತಮಗೆ ಜನಿಸಿದ ಆರು ಶಿಶುಗಳನ್ನು ಕಂಸನಿಗೆ ಅರ್ಪಿಸುತ್ತಾರೆ.ಕನಿಕರವಿಲ್ಲದೆ ಹಸುಗೂಸುಗಳನ್ನು ಸಂಹರಿಸುತ್ತಾನೆ. ಇತ್ತ ಭಗವಂತನು ಯೋಗಮಾತೆಯನ್ನು (ದುರ್ಗಾದೇವಿ)ಆಹ್ವಾನಿಸಿ ಆದೇಶಿಸುತ್ತಾನೆ. ನನ್ನ ಅಂಶವಾಗಿರುವ "ಆದಿಶೇಷ'ನು ದೇವಕಿಯ ಗರ್ಭದಲ್ಲಿದ್ದಾನೆ. ಶೇಷಾತ್ಮವಾಗಿರುವ ಗರ್ಭವನ್ನು ದೇವಕಿಯ ಗರ್ಭದಿಂದ ಸೆಳೆದು ಕೊಂಡು, ನಂದನ ಗೋಕುಲವು ಸುಶೋಭಿತ ಮತ್ತು ಗೋವುಗಳಿಂದ ಸಮೃದ್ಧಿಯಾಗಿದೆ.ನಂದಗೋಕುಲದಲ್ಲಿರುವ ರೋಹಿಣಿಯ ಗರ್ಭದಲ್ಲಿರಿಸು "ನಾನು ಪೂರ್ಣ ಸ್ವರೂಪದಿಂದ ದೇವಕಿ ದೇವಿ''ಯಲ್ಲಿ ಹುಟ್ಟುತ್ತೇನೆ. ನೀನು ನಂದಗೋಪನ ಪತ್ನಿಯಾದ "ಯಶೋದೆ''ಯ ಗರ್ಭದಲ್ಲಿ ಹುಟ್ಟುವೆ.

**ಶ್ರೀಕೃಷ್ಣನ ಜನ್ಮ:** ಮತ್ತೆ ದೇವಕಿಗೆ, ಗಂಡು ಶಿಶುವು ಜನಿಸುತ್ತದೆ. ವಿಷ್ಣು ರೂಪಿಯಾದ ಪರಮಾತ್ಮನು ಪ್ರತ್ಯಕ್ಷ ವಾಗಿ ತಾನು ನಿನ್ನ ಮಗನಾಗಿ ಜನ್ಮವಿತ್ತಿದ್ದೇನೆ ಎಂದು ಹೇಳುತ್ತಾನೆ. ಈ ಪರಮಾತ್ಮನೇ ವಸುದೇವನಿಗೆ ಕೆಲವು ಆದೇಶಗಳನ್ನು ನೀಡಿ ಅಂತರ್ಧಾನವಾಗುತ್ತಾನೆ. ದೈವ ಸಂಕಲ್ಪದಂತೆ ವಸುದೇವನು, ಕಾರಾಗೃಹದಲ್ಲಿ ಜನಿಸಿದ ಎಂಟನೆಯ ಮಗುವನ್ನು (ಕೃಷ್ಣಾವತಾರ) ತೆಗೆದುಕೊಂಡು ಹೋಗಿ ಅದನ್ನು ಗೋಕುಲದಲ್ಲಿ ನಂದನ ಪತ್ನಿಯಾದ "ಯಶೋದ''ಳ ಪಕ್ಕದಲ್ಲಿರಿಸಿ ಅಲ್ಲಿರುವ ಹೆಣ್ಣುಮಗುವನ್ನು (ದುರ್ಗಾದೇವಿ) ದೇವಕಿಯ ಪಕ್ಕದಲ್ಲಿ ಮಲಗಿಸುತ್ತಾನೆ.ಇವೆಲ್ಲವೂ ಪರಮಾತ್ಮನ ಅನುಗ್ರಹ ಮತ್ತು ಮಾಯೆಯಿಂದ ನಡೆದು ಹೋಗುತ್ತದೆ. ಇದು ಯಾರಿಗೂ ತಿಳಿಯುವುದಿಲ್ಲ. ನಂತರ ಕಂಸನು ಎಂಟನೇ ಮಗುವನ್ನು ಸಂಹರಿಸಲೂ ಬಂದಾಗ ಅದು "ಹೆಣ್ಣು ಮಗು''ಎಂದು ತಿಳಿಯುತ್ತದೆ.ಆದರೆ ಈ ಸಂದರ್ಭದಲ್ಲಿ ಆ ಶಿಶುವು ಮಾಯೆಯ ರೂಪದಲ್ಲಿ ಮಾಯವಾಗಿ 'ಹೇ ಕಂಸ, ನಿನ್ನ ಅಂತ್ಯ ಮಾಡುವ ಶಿಶು ಬೇರೆಯ ಕಡೆಯಲ್ಲಿ ಬೆಳೆಯುತ್ತಿದೆ ಎಂದು ಹೇಳುತ್ತದೆ.''

**ಕಂಸನ ಉಪಟಳ:** ಭಯದಿಂದ ಕೂಡಿದ ಕಂಸನು ಕುಪಿತನಾಗಿ, ಬಹಳ ದೀರ್ಘವಾಗಿ ಆಲೋಚಿಸಿ, ದೇವಕಿಯ ಎಂಟನೆಯ ಸಂತಾನವನ್ನು ಹುಡುಕಿ ಸಂಹರಿಸುವ ಉಪಾಯಗಳನ್ನು ಮಾಡುತ್ತಾನೆ.ಒಂದು ವರ್ಷದೊಳಗೆ ಹುಟ್ಟಿದ ಬಾಲಕರೆನ್ನೆಲ್ಲ ಕೊಂದು ಹಾಕು ಎಂದು ಬಾಲಹಂತಕಳಾದ 'ಪೂತನಾ '' ಎಂಬ ರಾಕ್ಷಸಿಗೆ ಆದೇಶ ಕೊಡುತ್ತಾನೆ. ಅವಳು ಪುರ - ಗ್ರಾಮ-ಹಳ್ಳಿಗಳಲ್ಲಿ ಸಿಕ್ಕಿದ ಬಾಲಕರೆಲ್ಲರನ್ನೂ ಹಿಡಿದು ಸಾಯಿಸುತ್ತಾ ಸಂಚರಿಸುತ್ತಿದ್ದಳು. ನಂದಗೋಪನ ಮನೆಗೂ ಬಂದಳು.ಈ ರಾಕ್ಷಸಿ ಪೂರ್ವ ಜನ್ಮದಲ್ಲಿ ಬಲಿಚಕ್ರವರ್ತಿಯ ಮಗಳು. ವಾಮನ ಅವತಾರದಲ್ಲಿ ಬಾಲಕನಿಗೆ

ಹಾಲುಣಿಸಬೇಕೆಂದು ಭಾವಿಸಿಕೊಂಡಲು,ಆಗ ವಿಷ್ಣು ರೂಪಿಯಾದ ವಾಮನ ನಿನಗೆ ದ್ವಾಪರಯುಗದಲ್ಲಿ ಅವಕಾಶ ಕಲ್ಪಿಸುತ್ತೇನೆ. ಎಂದು ಹೇಳುತ್ತಾನೆ. ಈ ಕಾರಣದಿಂದ, ಬಾಲಕನಿಗೆ ಹಾಲುಕೊಡಲು ಬಂದು, ಅವನಿಂದಲೇ ಮುಕ್ತಿಯನ್ನು ಪಡೆಯುತ್ತಾಳೆ.

**ಶ್ರೀ ಕೃಷ್ಣನ ಬಾಲಲೀಲೆಗಳು :**ಶ್ರೀಕೃಷ್ಣನ ಬಾಲಲೀಲೆಗಳನ್ನು ನೋಡುತ್ತಾ ಯಶೋದ,ನಂದಾ ಮತ್ತು ಇತರರು ಬಹಳ ಸಂತೋಷಪಡುತ್ತಿದ್ದರು. ಶ್ರೀಮದ್ಭಾಗವತವನ್ನು ಓದುವಾಗ ನಮಗೂ ಆನಂದವಾಗುತ್ತದೆ. ಕ್ರಮೇಣ ಬಲರಾಮ - ಕೃಷ್ಣರು ಅಂಬೆಗಾಲಿಡ ತೊಡಗಿದರು. ಅಂಬೆಗಾಲಿಕ್ಕುತ್ತಲೇ ಬಹಳ ಚೇಷ್ಟೆಗಳನ್ನು ಮಾಡುತ್ತಿದ್ದರು. ಹಸುವಿನ ಕೊಟ್ಟಿಗೆಗೆ ಹೋಗಿ ಕರುಗಳ ಬಾಲಗಳನ್ನು ಹಿಡಿದು ಎಳೆಯುತ್ತಿದ್ದ, ಉರುಯುತ್ತಿದ್ದ ಒಲೆಯಲ್ಲಿನ ಕಟ್ಟಿಗೆಗಳನ್ನು ಎಳೆಯುತ್ತಿದ್ದರು, ಗುಬ್ಬಚ್ಚಿ - ಗಿಣಿಗಳನ್ನು ಹಿಡಿಯಲು ಹೋಗುವುದು ಇತ್ಯಾದಿ. ಕ್ರಮೇಣ ಬಾಲಕರು ಪುಟ್ಟ ಪುಟ್ಟ ಹೆಜ್ಜೆಗಳ ನ್ನಿಡುತ್ತಾ ನಡೆಯತೊಡಗಿದರು.ಅವರ ಚೇಷ್ಟೆಗಳು ಇನ್ನೂ ಹೆಚ್ಚಾದವು. ಗೋಪಿಯರ ಮನೆಗಳಿಗೆ ಹೋಗಿ ಬೆಣ್ಣೆ ಕದಿಯುವುದು ಮಡಕೆಗಳನ್ನು ಒಡೆದು ಹಾಕುವುದು,ಸಿಕ್ಕಿಬಿದ್ದರೆ ನೀವೆ ಕಳ್ಳರು, ನಾನು ಕಳ್ಳನಲ್ಲ ಎಂದು ಭಯಗೊಂಡವನಂತೆ ನಟಿಸುತ್ತಿದ್ದ. ಗೋಪಿಯರು ಇವರ ತುಂಟತನವನ್ನು ತಡೆಯಲಾರದೆ, ಅವರ ಬಗ್ಗೆ ಯಶೋದಾ ಮಾತೆಗೆ ದೂರು ಕೊಡುವೆ ಸಲುವಾಗಿ ಎಲ್ಲರೂ ಆಕೆಯ ಬಳಿಗೆ ಹೋಗಿ ಹೇಳತೊಡಗಿದರು.ಆದರೆ ಮುದ್ದುಕೃಷ್ಣ, ಬಲರಾಮನೇ ಮೊದಲಾದ ಗೋಪಾಲಕರು ಆಟವಾಡು ತ್ತಿದ್ದರು. ಕೃಷ್ಣ ಮಣ್ಣುತಿಂದ ಎಂದು ಗೋಪಾಲಕರು ಯಶೋದೆಗೆ ದೂರಿತ್ತರು. ಆದರೆ, 'ಕಳ್ಳ ಕೃಷ್ಣ' ಸುಳ್ಳು ಎಂದು ವಾದಿಸಿದ ಮತ್ತು ಹೇಳುತ್ತಾನೆ. ಇವರು ಸುಳ್ಳು ಹೇಳುತ್ತಾರೆ. 'ನಾಹಂ ಭಕ್ಷಿತವಾನಮ್ಬ ಸರ್ವೇ ಮಿಥ್ಯಾಭಿಶಂಸಿನಃ ಯದಿ ಸತ್ಯಗಿರಸ್ತರ್ಹಿ ಸಮಕ್ಷಂ ಪಶ್ಯ ಮೇ ಮುಖಮ್ ಆಗ ಯಶೋದೆ ಬಾಯಿತೆರೆ ಎಂದು ಹೇಳಿ ನೋಡಿದಾಗ, ಅವಳು ಕಂಡಿದ್ದು 'ಸಂಪೂರ್ಣ ಜಗತ್ತನ್ನು ಆ ಪುಟ್ಟ ಬಾಯಲ್ಲಿ ಕಂಡಳು.ಅವಳಿಗೆ ಕೃಷ್ಣನು ಭಗವಂತನೆಂಬ ವಿಷಯವು ತಿಳಿದು ಹೋಯಿತು.ಆದರೆ, ಸ್ವಲ್ಪ ಸಮಯದಲ್ಲೇ ಶ್ರೀಕೃಷ್ಣನ ಸಂಕಲ್ಪದಿಂದ ಮಾಯೆಯುಮುಸುಕಿ ಅವಳಿಗೆ ಎಲ್ಲವೂ ಮರೆತುಹೋಯಿತು.ನಂತರ ತನ್ನ ಕಂದನೆ ಎಂದು ಮುದ್ದಾಡಿದಳು.

ಯಶೋದೆಯ ಕೃಷ್ಣನು, ಬೆಣ್ಣೆಕದಿಯುವುದು, ಮೊಸರಿನ ಮಡಕೆಯನ್ನು ಒಡೆಯುವುದು ಇತ್ಯಾದಿ ಚೇಷ್ಟೆಗಳನ್ನು ಮತ್ತು ತುಂಟಾಟ ವನ್ನು ತಡೆಯಲು, ಅವನನ್ನು ಒರಳುಕಲ್ಲಿಗೆ ಕಟ್ಟಿಹಾಕಿ ಬಿಟ್ಟಳು. ಅನಂತರ ಯಶೋದೆಯು ಬೇರೆ ಕೆಲಸದ ಮೇಲೆ ಹೊರಟುಹೋದಳು. ಇತ್ತ ನಮ್ಮ ಪೋರಕೃಷ್ಣ, ಅಂಬೆ ಗಾಲನಿಟ್ಟುಕೊಂಡು, ಒರಳುಕಲ್ಲು ಸಮೇತ ಅರ ಮನೆಯ ಹತ್ತಿರ ಒಂದು ಜೋಡಿ ಮತ್ತಿಮರಗಳ ಸಂದಿಯಲ್ಲಿ ನುಸುಳಿ ಹೋದನು. ಆಗ ಒರಳುಕಲ್ಲು ಸಿಕ್ಕಿಹಾಕಿಕೊಂಡಿತು. ಪೋರ ಬಲವಾಗಿ ಎಳೆಯಲು ಆ ಎರಡೂ ಮರಗಳೂ ದೊಡ್ಡಶಬ್ದದೊಂದಿಗೆ ಮುರಿದು ಬಿದ್ದವು. ಆ ಮರಗಳಿಂದ ಇಬ್ಬರು ದೇವತಾಪುರುಷರು ಹೊರಬಂದು ಕೃಷ್ಣನಿಗೆ ನಮಸ್ಕರಿಸಿ ಮಾಯವಾದರು. ಈ ದೇವತಾಪುರುಷರು ಕುಬೇರನ ಮಕ್ಕಳಾದ ನಳಕೂಬರ ಮಣಿಗ್ರೀವರು. ನಾರದರ ಶಾಪದಿಂದ ಮತ್ತಿಮರಗಳಾಗಿ ಹುಟ್ಟಿದರು. ಕೃಷ್ಣನ ಅನುಗ್ರಹದಿಂದ ಅವರಿಗೆ ಮುಕ್ತಿ ದೊರೆಯಿತು. ಯಶೋದೆಯು ಹೊಟ್ಟೆಗೆ ಹಗ್ಗವನ್ನು ಕಟ್ಟಿದ್ದರಿಂದ ಅವನಿಗೆ "ದಾಮೋದರ' ಎಂಬ ಹೆಸರಾಯಿತು.

ಅಕ್ರೂರನ ಜೊತೆ ಬಲರಾಮ - ಕೃಷ್ಣರು ಮತ್ತು ಎಲ್ಲಾ ಗೋಪಾಲಕರು ಪರಿವಾರ ಸಮೇತ ಮಥುರಾಗೆ ಬಂದರು. ಈ ನಗರವನ್ನು ನೋಡುತ್ತಾ, ಸಂತೋಷಪಡುತ್ತಾ,ಉತ್ತಮ ಪೋಷಾಕುಗಳನ್ನು ಧರಿಸಿಕೊಂಡು ರಾಜ ಬೀಧಿಯಲ್ಲಿ ಬರುತ್ತಿರುವಾಗ, ದಾರಿಯಲ್ಲಿ ಸ್ತ್ರೀಯನ್ನು ಕಂಡರು. ಅವಳು ಕುಬ್ಜೆಯಾಗಿದ್ದಳು ಮತ್ತು ಡೊಂಕುಶರೀರದವಳಾಗಿದ್ದಳು. ಅವಳನ್ನು ಎಲ್ಲರೂ ಕುಬ್ಜಾ-ತ್ರಿವಕ್ರಾ ಎಂದು ಕರೆಯುತ್ತಿದ್ದರು. ತಾನು ಕಂಸನಿಗೆ ಗಂಧ ಮೈಗೆ ಹಚ್ಚಿಕೊಳ್ಳಲು ಅಂಗರಾವನ್ನೂ ಸರಬರಾಜು ಮಾಡುವ ಸೈರಂಧ್ರಿಯೆಂದು ಪರಿಚಯಿಸಿಕೊಂಡಳು. ಸಹೋದರರು, ಆಕೆಯನ್ನು ನಮಗೆ ಕೊಡುವಿಯಾ ಎಂದಾಗ ಆಕೆ ಸಂತೋಷವಾಗಿ ಇದನ್ನು ಅರ್ಪಿಸುತ್ತೇನೆ ಎಂದು ಕೊಟ್ಟಳು.ಆದರಿಂದ ಅಲಂಕರಿಸಿಕೊಂಡು, ಶ್ರೀ ಕೃಷ್ಣನು ಕುಬ್ಜೆಯ ಕಾಲುಗಳನ್ನು ಮೆಟ್ಟಿಕೊಂಡು, ಅವಳ ಗಲ್ಲವನ್ನು ಹಿಡಿದೆತ್ತಿ ಎಳೆಯಲು ಕುಬ್ಜೆಯು ನೆಟ್ಟಗೆನಿಂತಳು, ಅವಳ ಗೂನು ಸರಿಹೋಯಿತು.

ಶ್ರೀ ಕೃಷ್ಣ - ಬಲರಾಮರು, ಮಹಾದ್ವಾರಕ್ಕೆ ಬರುತ್ತಿದ್ದಂತೆಯೇ , ಮೊದಲೇ ಮದಿಸಿದ ಆನೆಯನ್ನು ಕೆರಳಿಸಿ, ಕೃಷ್ಣನ ಮೇಲೆ ನುಗ್ಗಿಸಿದನು, ಪರಮಾತ್ಮನು,ಸೆಣಸಿ, ಆನೆಯ ದಂತವನ್ನೇ ಕಿತ್ತು ಆದರಿಂದಲೇ ಆನೆ ಮತ್ತು ಮಾವಟಿಗಳನ್ನು ಸಂಹರಿಸಿದನು. ನಂತರ ದ್ವಾರದ ಒಳಗೆ ಬಂದಾಗ, ಚಾಣೂರುನು, ಕೃಷ್ಣ, ನೀನು ಬಲಶಾಲಿ, ಬಲಿಷ್ಟವಾದ ಆನೆಯನ್ನು ಕೊಂದವ, ನೀನು ನನ್ನೊಡನೆ ಮತ್ತು ಬಲರಾಮನು ಮುಷ್ಟಿಕನೊಡನೆ ಹೋರಾಡಲಿ ಎಂದು ಹೇಳಿದನು. ಮಲ್ಲಯುದ್ಧವು ಪ್ರಾರಂಭವಾಯಿತು. ಅನೇಕ ವಿಧವಾದ ಪಟ್ಟು ಮತ್ತು ಸಾಹಸಗಳಿಂದ ಮಲ್ಲಯುದ್ಧವು ನಡೆಯುತ್ತಿತ್ತು. ಕೊನೆಗೆ , ಚಾಣೂರನು ಕೃಷ್ಣನ ಶೌರ್ಯದಿಂದ ಸತ್ತು ಬಿದ್ದನು. ಅದೇರೀತಿ ಮುಷ್ಟಿಕನನ್ನು ಬಲರಾಮನು ಸಂಹರಿಸಿದನು. ನಂತರ ಕಂಸನು ಆವೇಶದಿಂದ ಬುದ್ಧಿ ಭ್ರಮಣೆಯಾದವನಂತೆ, ದೇವಕಿ ವಸುದೇವರನ್ನು ಮತ್ತು ಉಗ್ರಸೇನರನ್ನೂ ಕೊಂದುಹಾಕಿರಿ ಎಂದು ಬೊಬ್ಬಿಡುತ್ತಾ ಸಿಂಹಾಸನದ ಮೇಲೆ ಕೂತಿದ್ದ ಕಂಸನು ಎದ್ದು ಬಂದು ಕತ್ತಿ - ಗುರಾಣಿಗಳನ್ನು ಹಿಡಿದುಕೊಂಡು ಕೃಷ್ಣನ ಹತ್ತಿರಬಂದು ತನ್ನ ಎಲ್ಲಾ ಪರಾಕ್ರಮವನ್ನು ತೋರಿಸಿದನು. ಕಂಸನನ್ನು ನೋಡಿ, ಶ್ರೀ ಕೃಷ್ಣನು ಕೋಪಗೊಂಡು, ಗರುಡನು ಹಾವನ್ನು ಹಿಡಿಯುವಂತೆ, ಲೀಲೆಯಿಂದಲೇ ಕಂಸನನ್ನು ಹಿಡಿದಾಗ, ಅವನ ತಲೆಯ ಮೇಲಿದ್ದ ಕಿರೀಟವು ಬಿದ್ದು ಹೋಯಿತು. ಆಗ ಪರಮಾತ್ಮನು, ಕಂಸನ ತಲೆಮುಡಿಯನ್ನು ಹಿಡಿದು ಎತ್ತರವಾದ ಮಂಚದಿಂದ ಕೆಳಗಿನ ರಂಗಭೂಮಿಯ ಮೇಲೆ ಬೀಳಿಸಿದನು. ಬಳಿಕ ಶ್ರೀಕೃಷ್ಣನು, ತಾನು ನಿಂತಿದ್ದ ಮಂಚದಿಂದ ಹಾರಿಬಂದು ಅವನ ಮೇಲೆ ಬೀಳುತ್ತಿದ್ದಂತೆಯೇ, ಕಂಸನ "ಪ್ರಾಣಪಕ್ಷಿ'ಯು ಹಾರಿಹೋಯಿತು. ಹೀಗೆ ಆಕಾಶವಾಣಿಯ ನುಡಿದಂತೆಯೇ , ಕಂಸನ ಸಂಹಾರ ದೇವಕಿಯ ಎಂಟನೆ ಯ ಗರ್ಭದಿಂದಲೇ ಆಯಿತು. ದೇವಾನುದೇವತೆಗಳು ಮತ್ತು ಎಲ್ಲಾ ಪುರಜನರು ಸಂತೋಷಪಟ್ಟರು.

ಸೆರೆಮನೆಗೆ ಹೋಗಿ, ಬಲರಾಮ - ಕೃಷ್ಣರು, ಮಾತಾ - ಪಿತೃಗಳಿಗೆ ನಮಸ್ಕರಿಸಿ ಅವರನ್ನು ಸೆರೆಯಿಂದ ಬಿಡಿಸಿ, ನಂತರ, ಶ್ರೀಕೃಷ್ಣನು,ದೇವಕಿಯ ದೊಡ್ಡಪ್ಪನಾದ ಉಗ್ರಸೇನನನ್ನು ಯಾದವರ ರಾಜನನ್ನಾಗಿ ಮಾಡಿಸಿದನು.ಶ್ರೀಕೃಷ್ಣಪರಮಾತ್ಮನು, ಅನೇಕ ರಾಕ್ಷಸರಾದ ನರಕಾಸುರ, ಶಿಶುಪಾಲ, ದಂತವಕ್ರ, ಲೋಕ ಕಂಟಕರಾದ ಅನೇಕ ರಾಕ್ಷಸರನ್ನು ಸಂಹಾರ ಮಾಡಿದನು. ಧರ್ಮಾತ್ಮರಾದ ಪಾಂಡವರಿಗೂ ಮತ್ತು ಕೌರವರಿಗೂ ಯುದ್ಧ ನಡೆದಾಗ ಪಾಂಡವರಿಗೆ ಸಹಾಯಮಾಡಿ, ಅರ್ಜುನನ ಸಾರಥಿಯಾದನು. ಈ ಸಂದರ್ಭದಲ್ಲಿಯೇ, ಶ್ರೀ ಕೃಷ್ಣನು, ಎಲ್ಲರಿಗೂ ಅನ್ವಯಿಸುವಂತಹ ಉಪದೇಶವನ್ನು ಅರ್ಜು ನನಿಗೆ ಮಾಡಿದನು. ಇದು "ಶ್ರೀಮದ್ಭಗವದ್ಗೀತಾ" ಎಂದು ಪ್ರಸಿದ್ಧಿಯಾಗಿದೆ. ಅದನ್ನು, ವ್ಯಾಸರು ೭೦೦ ಶ್ಲೋಕಗಳು ಮತ್ತು ಹದಿನೆಂಟು ಅಧ್ಯಾಯಗಳಂತೆ ವಿಂಗಡಿಸಿ, ಮಾನವ ಜನಾಂಗಕ್ಕೆ ಕೊಟ್ಟರು ಅದು ಇಂದಿಗೂ ಎಂದೆಂದಿಗೂ ಅನುಕೂಲವಾಗುವಂತೆ ತಿ.ತಿ.ದೇ., ಪ್ರಸಾರ ಮಾಡುತ್ತಿದೆ.ಈ ನಿಟ್ಟಿನಲ್ಲಿ ಎಲ್ಲರು ಪಾರಾಯಣದಲ್ಲಿ ಭಾಗವಹಿಸಿ ಧನ್ಯರಾಗೋಣ.

**" ಕೃಷ್ಣಂ ವಂದೇ ಜಗದ್ಗುರು ಎಂದು ನಮಿಸಿ,"**



# ಸಂಸ್ಕೃತ ಕಲಿಯೋಣ...!!

## दशमः पाठः

### ಹತ್ತನೆಯ ಪಾಠ

ರಚನೆ:- ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ
ನಿರ್ವಹಣೆ:- ಮಹಾ ಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ

1. देवाः = ದೇವನು 2. अन्यत्र = ಬೇರೆಡೆ 3. कुर्वन्ति= ಮಾಡಲಾಗುವುದು/ತ್ತದೆ. 4. देवं = ದೇವನನ್ನು 5. तथा = ಹಾಗೆಯೇ 6. कुरुथ = ನೀವುಮಾಡುವುದು 7. देवान् = ದೇವರಿಗೆ 8. सर्वत्र = ಎಲ್ಲೆಡೆಯು (ಎಲ್ಲಾಕಡೆ) 9. कुर्मः = ಮಾಡಲಾಗುವುದು

### ಪ್ರಶ್ನೆ

1. यूयं तत्र किं कुरुथ?
2. वयं तत्रास्म।
3. किमपि नास्ति।
4. ते तत्र किं कुर्वन्ति?
5. न किञ्चिदपि।
6. वयं किं कुर्मः?
7. देवाः कुत्रासन्?
8. कुत्रापि नासन्।
9. अग्रजाः के?
10. ते सर्वेऽपि अग्रजाः।

### ಉತ್ತರ

1. ತಾವೆಲ್ಲರೂ ಅಲ್ಲಿ ಏನು ಮಾಡುತ್ತಿದ್ದೀರಿ?
2. ನಾವೆಲ್ಲರೂ ಅಲ್ಲೇ ಇರುತ್ತೇವೆಯೇ?
3. ಇನ್ನೇನು ಇಲ್ಲ.
4. ಅವರು ಅಲ್ಲಿ ಏನು ಮಾಡುತ್ತಿದ್ದಾರೆ?
5. ಸ್ವಲ್ಪವೂ ಬೇಡ
6. ನಾವು ಏನು ಮಾಡೋಣ?
7. ದೇವರು ಎಲ್ಲಿರುವರು?
8. ಯಾರೂ ಕೂಡ ಇಲ್ಲ
9. ಯಾರು ಅಣ್ಣ?
10. ಅವರೆಲ್ಲರೂ ಅಣ್ಣಂದಿರು

### ಪ್ರಶ್ನೆ

1. ಅವರು ಏನು ಮಾಡುತ್ತಿದ್ದಾರೆ ?
2. ಅವರು ಬೇರೆಡೆ ಇದ್ದಾರೆ.
3. ಹಾಗೆಯೇ ಅಲ್ವಾ?
4. ಅಯ್ಯೋ! ತಾವೆಲ್ಲರೂ ಅಲ್ಲಿ ಏನು ಮಾಡುತ್ತಿದ್ದೀರಿ?
5. ಏನು ಇಲ್ಲ.
6. ಅಲ್ಲಿ ಯಾರಾದರೂ ಇದ್ದಾರೆಯೇ?
7. ಯಾರಾದರೊಬ್ಬರು ಅಲ್ಲಿ ಇದ್ದಾರೆಯೇ?
8. ನಾವೆಲ್ಲರೂ ಅಲ್ಲೇ ಇದ್ದೇವು
9. ಇವರೆಲ್ಲರೂ ದೇವರೇ .
10. ನಾವೆಲ್ಲರೂ ಏನನ್ನು ಮಾಡಿಲ್ಲ.

### ಉತ್ತರ

1. के किं कुर्वन्ति?
2. ते अन्यत्र सन्ति।
3. तथा वा!
4. हन्त! यूयमत्र किं कुरुथ?
5. किमपि नास्ति।
6. केचन तत्र न सन्ति।
7. कतिचन न सन्ति?
8. वयं सर्वेऽपि अत्रैव स्मः।
9. एते सर्वेऽपि देवाः इति।
10. वयं सर्वेऽपि किमपि न कुर्मः।

ಧಾರಾವಾಹಿ - 5

# ಶ್ರೀಮದ್ಭಗವದ್ಗೀತೆ

ತೆಲುಗು ಮೂಲ : ಕೆ. ವಿಶ್ವನಾಥ ಶರ್ಮ

ಅನುವಾದ : ಬಿ. ಪದ್ಮಜ



(ಕಳೆದ ಸಂಚಿಕೆಯಿಂದ)

ಅಂದರೆ ನೀವು ಪಾಂಡವರಿಗೆ ಹೆಚ್ಚು ಶ್ರದ್ಧೆಯಿಂದ ವಿದ್ಯಾಭ್ಯಾಸವನ್ನು ಮಾಡಿಸಿದ್ದೀರಿ. ನಮಗೆ ಸ್ವಲ್ಪ ಕಡಿಮೆ ಕಲಿಸಿದ್ದೀರಿ. ಅದರಲ್ಲೂ ನಿಮ್ಮ ಮಗನಿಗೂ ಕಲಿಸದ ಅಸ್ತ್ರಶಾಸ್ತ್ರಗಳನ್ನು ಆ ಅರ್ಜುನನಿಗೆ ಕಲಿಸಿದ್ದೀರಿ. ಅವನೇನೋ ನಿಮ್ಮ ಎದುರಿಗೇ ನಿಂತು ನಿಮ್ಮನ್ನು ಕೊಲ್ಲುತ್ತೇನೆ ಎಂದು ಬಂದಿದ್ದಾನೇ! ಇದೇನು ನಿಮ್ಮ ಬುದ್ಧಿವಂತಿಕೆ ಗುರುವಾರ್ಯಾ! ಎಂದ.

ದೊಡ್ಡ ಸೈನ್ಯ ಇದೆ ಎಂದರು. ಅವರಿಗೆ ಏಳು ಅಕ್ಷೋಹಿಣೀ ಸೈನ್ಯವಿದ್ದರೆ ಇವರಿಗೆ ಹನ್ನೊಂದು ಅಕ್ಷೋಹಿಣಿ ಸೈನ್ಯ ಇವೆ. ಇವರ ಸೈನ್ಯವೆ ಹೆಚ್ಚು ಅವರ ಸೈನ್ಯ ಕಡಿಮೆ ಇದೆ. ಅದರೇ ದುರ್ಯೋಧನನ ಮನದೊಳಗೆ ಅಸೂಯೆ ಎಂಬ ಹಿರಿದಾದ ಶತ್ರು ಮನೆಮಾಡಿಕೊಂಡಿದೆ ಅಸೂಯೆ ಏಕೆ? ಆ ಪಾಂಡವರು ರಾಜ್ಯವಿಲ್ಲದವರು,ರಾಜ್ಯಭ್ರಷ್ಟರು ಅವರಿಗೆಂತಾಹಾ ಸಂಪತ್ತು ಇಲ್ಲಾ ಅವರ ಪರವಾಗಿ ಯಾರು ನಿಲ್ಲುವುದಿಲ್ಲ ಎಂದು ಕೊಂಡಿದ್ದ ಆದರೆ ಪಾಂಡವರು ಅವರ ಧರ್ಮದೀಕ್ಷೆಯಿಂದಾಗಿ ಏಳು ಅಕ್ಷೋಹಿಣೆ ಸೈನ್ಯವನ್ನು ಕರೆತಂದಿದ್ದರು ಅವರ ಪರವಾಗಿ ನಿಲ್ಲುವವರಿದ್ದಾರೆ ವಿಶೇಷವಾಗಿ ಶ್ರೀಕೃಷ್ಣ ಪರಮಾತ್ಮ ಇದ್ದಾನೆ. ಆ ಅಸೂಯೆಯನ್ನು ತಡೆಯಲಾರದೆ ಮಹತೀಂ ಚಮೂಮ್ ಎನ್ನುತ್ತಿದ್ದ. ನಿಜವಾಗಿ ಹೇಳಬೇಕೆಂದರೆ ತನ್ನ ಸೈನ್ಯದ ಮೇಲೆ ನಂಬಿಕೆ ಇರಬೇಕು. ಆದರೆ ಅವನಿಗೆ ಎದುರಾಳಿ ಸೈನ್ಯದ ಮೇಲೆ ಹೆಚ್ಚು ನಂಬಿಕೆ ಇತ್ತು. ಈ ರೀತಿ ಮಾತನಾಡಿದ್ದು ಸ್ವಲ್ಪ ಆವೇಶಗೊಂಡಿದ್ದಾಗ ಅಥವಾ ನೋವಿನಲ್ಲಿ ಇರುವಾಗ ಎಂದರೆ ಸಹಜವೆಂದುಕೊಳ್ಳಬಹುದು. ನಂತರ ಮಾತನಾಡಿದ ರೀತಿ ಸಾಮಾನ್ಯರಿಗೂ ತಡೆಯಲಾರದಂತಹುದು.

“ವ್ಯೂಢಾಂ ದ್ರುಪದಪುತ್ರೇಣ'' ಎಂದು ಹೇಳುತ್ತಿದ್ದಾನೆ “ದ್ರುಪದ ಪುತ್ರೇಣ'' ಅಂದ್ರೆ ದೃಷ್ಟದ್ಯುಮ್ನ ಅಲ್ಲವೇ! ದ್ರುಪದ ಎಂಬ ಪದವನ್ನು ಬಳಸುವದರಲ್ಲಿ ಒಂದು ರೀತಿಯ ಹಿಂಸಾಪರರನ್ನು ಮಾತುಗಳಿಂದ ಹಿಂಸಿಸುವ ಭಾವದಿಂದ ಕೂಡಿದ ಪದ. ದ್ರುಪದ ಒಬ್ಬ ರಾಜ. ಆ ಮಹಾರಾಜ ಪಾಂಡವರಿಗೆ ಹೆಣ್ಣು ಕೊಟ್ಟ ಮಾವ. ಆತ ಮತ್ತು ದ್ರೋಣಾಚಾರ್ಯ ಚಿಕ್ಕಂದಿನ ಸ್ನೇಹಿತರು.ಇಬ್ಬರೂ ದ್ರೋಣಾಚಾರ್ಯನ ತಂದೆಯ ಬಳಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಅವರಿಬ್ಬರಿಗೆ ಬಹಳ ಸ್ನೇಹವಿದ್ದು ನಾನು ದೊಡ್ಡವನಾದ ಮೇಲೆ ರಾಜನಾಗುತ್ತೇನಲ್ಲವೇ ಆಗ ನೀನು ನನ್ನ ಜೊತೆಯಲ್ಲೇ ಇರು ನಾನು ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ದ್ರುಪದ ದ್ರೋಣಾಚಾರ್ಯನಿಗೆ ಹೇಳುತ್ತಿದ್ದ ಸ್ನೇಹಿತರಿಬ್ಬರು ನಕ್ಕೂ ಆ ಮಾತನ್ನು ಸಹಜವಾಗಿ ಸ್ವೀಕರಿಸಿದರು. ನಂತರ ವಿದ್ಯಾಭ್ಯಾಸ ಮುಗಿಯಿತು. ಅವರವರ ದಾರಿಗೆ ಅವರು ಹೋದರೂ ದ್ರುಪದ ಮಹಾರಾಜನಾದ ಅಷ್ಟರಲ್ಲಿ ದ್ರೋಣೆಗೆ ಕೃಪೀ ಎಂಬ ಕನ್ಯೆಯೊಂದಿಗೆ ವಿವಾಹವಾಯಿತು. ಅವರಿಗೆ ಅಶ್ವತ್ಥಾಮ ಎಂಬ ಮಗನೂ ಹುಟ್ಟಿದ. ಈ ದ್ರೋಣಾಚಾರ್ಯ ಅಡವಿಯಲ್ಲಿ ನಿವಾಸಿಸುತ್ತಿದ್ದ ಎಂತಹ ಅಡವಿ ಅಂದರೆ ಅಲ್ಲಿ ಹಸುಗಳೂ ಸಿಗದಂತಾ ಕಾರಡವಿ. ಅಲ್ಲಿ ಗ್ರಾಮೀಣಪ್ರಾಂತ್ಯದಲ್ಲಿ ಇರುವ ಪಶುಗಳು ಬದಕಲಾರವು ಅಲ್ಲಿ ಎಚ್ಚರಿಕೆಯಿಂದ ತಪಸ್ಸು ಮಾಡಿಕೊಳ್ಳುವ ವಂಶ ಅವರದು. ಮಗ ಹುಟ್ಟಿದ ನಂತರ ಮಗುವಿಗೆ ಹಾಲಿನ ರುಚಿ ತೋರಿಸಿರಲಿಲ್ಲ. ಅವರು ಅಶ್ವತ್ಥಾಮನಿಗೆ ಅರಣ್ಯದಲ್ಲಿ ಬೆಳೆಯುವ ಧಾನ್ಯವನ್ನು ತಂದು ಅದನ್ನು ಕುಟ್ಟಿ ಪುಡಿ ಮಾಡಿ ಆ ಪುಡಿಯನ್ನು ನೀರಿನಲ್ಲಿ ಬೆರೆಸಿ ಹಾಲು ಎಂದು ಕುಡಿಸುತ್ತಿದ್ದರು. ಆದರೆ ಅವನ ಸ್ನೇಹಿತರ ಮನೆಯಲ್ಲಿ ನಿಜವಾದ ಹಾಲಿನ ರುಚಿಯನ್ನು ನೋಡಿದ್ದ ಅಶ್ವತ್ಥಾಮ ಅದು ಹಾಲು ಅಲ್ಲವೆಂದು ತನಗೆ ಬೇಡವೆಂದು ಹಠ ಮಾಡಿದ. ಮಗನ ಮೇಲಿನ ಪ್ರೇಮದಿಂದ ಒಂದು ಹಸುವನ್ನು ಸಂಪಾದಿಸಿಕೊಂಡು ಬರೋಣವೆಂದು ದ್ರೋಣಾಚಾರ್ಯರು ಹೊರಟರು.ಯಾರ ಬಳಿ ಹೋದರೆ ಹಸು ದೊರೆಯಬಹುದು ಎಂದು ಯೋಚಿಸಿ. ತನ್ನ ಸ್ನೇಹಿತ ದ್ರುಪದನ ನೆನಪಾಗಿ ಅವನ ಬಳಿಗೆ ಬಂದೂ ನೀನು ಒಂದು ಹಸುವನ್ನು ಕೊಟ್ಟರೆ ನಾನು ನನ್ನ ಮಗನನ್ನು ಚೆನ್ನಾಗಿ ಬೆಳೆಸಬಹುದೆಂದು ಕೇಳಿಕೊಂಡರು. ಅದರೇ ದ್ರುಪದ ರಾಜನಾದ ನಂತರ ಮನಸ್ಸಿನಲ್ಲಿ ಅಹಂಕಾರವನ್ನು ಬೆಳಸಿಕೊಂಡ್ಡಿದ ಈ ಸ್ನೇಹಿತನನ್ನು ನೋಡಿ ಕೂಡಲೇ ಮಾತನಾಡಿಸಲೂ ಇಲ್ಲ ದ್ರೋಣಾಚಾರ್ಯ ಸ್ನೇಹಿತಾ ಎಂದು ಕೂಗಿದಾಗಾ, ನೀನು ನಾನು ಸ್ನೇಹಿತರೇನು? ನೀನಾರು? ನೀನೊಬ್ಬ ಭಿಕ್ಷೆ ಬೇಡುವ ಬಡ ಬ್ರಾಹ್ಮಣ! ನಾನು ಒಬ್ಬ ರಾಜ? ನಮ್ಮಿಬ್ಬರಿಗೂ ಸ್ನೇಹವೇನೋ? ಎಂದು ದಿಕ್ಕರಿಸಿ ಮಾತನಾಡಿದ. ಆಗ ದ್ರೋಣಾಚಾರ್ಯನಿಗೆ ಎಲ್ಲಿಲ್ಲದ ರಾಜಾರೋಷ ಉಕ್ಕಿಬಂತು, ಸಾಮಾನ್ಯವಾಗಿ ತಪಸ್ಸು ಮಾಡುವವರಿಗೆ ಯಾರು ಏನೇ ಅಂದರೂ ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲ. ಆದರೆ ದ್ರೋಣಾಚಾರ್ಯನ ಮನಸ್ಸಿಗೆ ಬೆಂಕಿ ತಗುಲಿದಂತಾಯ್ತು ಕೂಡಲೆ ಕೋಪದಿಂದ ಇನ್ನೂ ಕೆಲವೇ ಸಮಯದಲ್ಲಿ ನಿನಗೆ ಸರಿಸಮಾನರಾದವರ ಸ್ನೇಹ ಮಾಡುತ್ತೇನೆ ಎಂದು ಪ್ರತಿಜ್ಞೆಮಾಡಿ ಅಲ್ಲಿಂದ ಹೊರಟು ಹೋದ..

(ಮುಂದುವರಿಯುತ್ತದೆ)



ಧಾರಾವಾಹಿ - 2



# ಸನಾತನ ಧರ್ಮದಲ್ಲಿ ಜ್ಯೋತಿಷ್ಯ ಶಾಸ್ತ್ರದ ಮಹತ್ವ

ಹಿಂದಿನ ಸಂಚಿಕೆಯಲ್ಲಿ ಜ್ಯೋತಿಷ್ಯವು ಎರಡು ಭಾಗಗಳು, ಅವುಗಳು ಗಣಿತಭಾಗ (ಇದುವೇ ಖಗೋಳಶಾಸ್ತ್ರ) ಮತ್ತು ಫಲಿತ ಭಾಗವೆಂದು ತಿಳಿದೆವು.

ಗಣಿತ ಭಾಗವು 3 ವಿಧ

1) ಸಿದ್ಧಾಂತ 2) ತಂತ್ರ 3) ಕರಣ

ಫಲಿತ ಭಾಗವು 6 ವಿಧ

1) ಹೋರ 2) ಮುಹೂರ್ತ 3) ತಜಿಕ 4) ಪ್ರಶ್ನ

5) ಮೇಧಿನಿ 6) ಸಂಹಿತಾ

ನಾರದ ಸಂಹಿತೆಯ ಪ್ರಕಾರ ಜ್ಯೋತಿಷವು 3 ಸ್ಕಂದಗಳಾಗಿ ವಿಭಜಿಸಲಾಗಿದೆ.

ಅವುಗಳು : 1.ಸಿದ್ಧಾಂತ 2. ಸಂಹಿತಾ 3. ಹೋರಾ

ಕೆಲವು ಕಡೆ ಪಂಚಸ್ಕಂದಗಳೆಂದು, ಅವುಗಳು:-

1. ಸಿದ್ಧಾಂತ 2.ಹೋರಾ 3. ಸಂಹಿತಾ 4. ಪ್ರಶ್ನ 5. ಶಕುನಶಾಸ್ತ್ರ ಇವೆಲ್ಲವು ಸೇರಿ ಜ್ಯೋತಿಷ ಶಾಸ್ತ್ರವಾಗಿದೆ.

**ಸಿದ್ಧಾಂತ ಸ್ಕಂದ:**

(ಗಣಿತ / ಖಗೋಳಭಾಗ) ಈ ಭಾಗದಲ್ಲಿ ಕಾಲಗಳ ಪ್ರಮಾಣಗಳಾದ ಯುಗ, ಮಹಾಯುಗ, ಸೌರವರ್ಷ, ಸಾವನವರ್ಷ, ಚಾಂದ್ರವರ್ಷ ಮುಂತಾದ ಗಣನ ಅವುಗಳ ಪ್ರಯೋಜನಗಳು, ಗ್ರಹಗಳ ಚಲನೆ, ಕುಜಾದಿ ಪಂಚಗ್ರಹಗಳ ವಕ್ರ ಚಲನೆ, ಸೂರ್ಯೋದಯ-ಸೂರ್ಯಾಸ್ತಗಳು, ಚಂದ್ರೋದಯ-ಚಂದ್ರಾಸ್ತ, ಗ್ರಹಗಳ ಅಸ್ತೋದಯ, ಗ್ರಹಗಳ ಗಾತ್ರ, ಗ್ರಹಗಳ ಕಕ್ಷೆ, ವೇಗ,ಭೂಮಿಯಿಂದ ಗ್ರಹಗಳ ದೂರ, ಗ್ರಹಣಗಳು, ಮುಂತಾದವುಗಳ ಬಗೆಯನ್ನು ತಿಳಿಸುತ್ತದೆ. ಈ ಸಿದ್ಧಾಂತ ಭಾಗವು ಪಂಚಾಂಗ ರಚಿಸುವುದಕ್ಕೆ ಬಹಳ ಮುಖ್ಯವು.



- ಆರ್. ಶ್ರೀನಿಧಿ

99705 65978

1. ಸಿದ್ಧಾಂತ ಗ್ರಂಥಗಳು ಗ್ರಹಗಳ ಗಣಿತವನ್ನು ಕಲ್ಪದ ಆದಿಯಿಂದ ತಿಳಿಸುತ್ತದೆ.

2. ತಂತ್ರ ಗ್ರಂಥಗಳು ಗ್ರಹಗಳ ಗಣಿತವನ್ನು ಕಲಿಯುಗದ ಆದಿಯಿಂದ ತಿಳಿಸುತ್ತದೆ.

3. ಕರಣ ಗ್ರಂಥಗಳು ಗ್ರಹಗಳ ಗಣಿತವನ್ನು ಒಂದು ನಿರ್ದಿಷ್ಟ ಶಕವರ್ಷದಿಂದ ಗ್ರಹಗಣಿತ ಮಾಡುವುದನ್ನು ತಿಳಿಸುತ್ತದೆ.

ನಮ್ಮ ಪೂರ್ವಜರು ಹದಿನೆಂಟು ಮಹಾ ಸಿದ್ಧಾಂತ ಗಳನ್ನು ಈ ಗಣಿತಗಳಿಗೆ ಉಪಯೋಗಿಸುತ್ತಿದ್ದರು.

ಸೂರ್ಯಃ ಪಿತಾಮಹೋ ವ್ಯಾಸೋ ವಶಿಷ್ಠೋ ಅತ್ರಿಃ ಪರಾಶರಃ ।
ಕಶ್ಯಪೋ ನಾರದೋ ಗರ್ಗೋ ಮರೀಚಿಃ ಮನುಃ ಅಂಗಿರಃ ॥
ಲೋಮಶಃ ಪುಲಿಶ ಚೈವ ಚ್ಯವನೋ ಯವನೋ ಭೃಗುಃ।
ಶೌನಕೋ ಅಷ್ಟಾದಶಶ್ಚೈತೆ ಜ್ಯೋತಿಃ ಶಾಸ್ತ್ರ ಪ್ರವರ್ತಕಾಃ॥

1. ಸೂರ್ಯ 2. ಪಿತಾಮಹ (ಬ್ರಹ್ಮ) 3. ವ್ಯಾಸ 4. ವಶಿಷ್ಠ 5. ಅತ್ರಿ 6. ಪರಾಶರ 7. ಕಶ್ಯಪ 8. ನಾರದ 9. ಗರ್ಗ 10. ಮರೀಚಿ 11. ಮನು 12. ಅಂಗೀರ 13. ಲೋಮಶ (ರೋಮಕ) 14. ಪೌಲಿಶ 15. ಚ್ಯವನ 16. ಯವನ 17. ಭೃಗು 18. ಶೌನಕ.

ಈ ಹದಿನೆಂಟು ಜನರು ಬರೆದ ಗ್ರಂಥಗಳೇ ಸಿದ್ಧಾಂತ ಗ್ರಂಥಗಳು ಇವರನ್ನು ಜ್ಯೋತಿಷಶಾಸ್ತ್ರದ ಪ್ರವರ್ತಕರೆನ್ನುತ್ತಾರೆ. ಇಲ್ಲಿ ವಿಶೇಷವೆಂದರೆ ಪಾಶ್ಚಾತ್ಯ ದೇಶಗಳ ಸಿದ್ಧಾಂತಗಳನ್ನು ನಮ್ಮ ಪೂರ್ವಿಕರು.ಒಪ್ಪಿದ್ದರೆಂದು ತೋರುತ್ತದೆ. ಲೋಮಶ (ರೋಮಕ) ಇದು ಅಂದಿನ ರೋಮನ್ ನಾಗರೀಕತೆಯಲ್ಲಿ ಬಳಸುತ್ತಿದ್ದ ಖಗೋಳಶಾಸ್ತ್ರದ ಸಂಗ್ರಹವೆಂದು,ಯವನ ಸಿದ್ಧಾಂತವು-ಯವನ ದೇಶದ ಅಂದರೆ ಇಂದಿನ ಗ್ರೀಸ್ ಮುಂತಾದ ಪ್ರಾಂತ್ಯದಲ್ಲಿ ಬಳಸುತ್ತಿದ್ದ ಸಿದ್ಧಾಂತಗಳೆಂದು ಪೌಲಿಶ ಸಿದ್ಧಾಂತವನ್ನು ಇಂದಿನ ಅರಬ್ ರಾಷ್ಟ್ರಗಳಲ್ಲಿ ಬಳಸು ತ್ತಿದ್ದಂತಹ ಸಿದ್ಧಾಂತವೆಂಬ ಅಭಿಪ್ರಾಯಗಳಿವೆ.

ಇಂದು ನಮ್ಮ ಭಾರತ ದೇಶದಲ್ಲಿ ಸೂರ್ಯ ಸಿದ್ಧಾಂ ತವು ಪ್ರಾಚೀನ ಸಿದ್ಧಾಂತವೆಂದು ಬಹುಭಾಗಗಳಲ್ಲಿ ಬಳಸು ತ್ತಿದ್ದಾರೆ. ಇದಲ್ಲದೆ ಆರ್ಯ ಸಿದ್ಧಾಂತ, ಸಿದ್ಧಾಂತ ಶಿರೋಮಣಿ ಮುಂತಾ ದವುಗಳು ನಮ್ಮ ದೇಶದಲ್ಲಿ ಬಳಸುತ್ತಿದ್ದರು. ಇಂದಿನ ತಂತ್ರ ಜ್ಞಾನದಿಂದ ದೃಕ್ ಸಿದ್ಧಾಂತವನ್ನು ಅತಿ ನಿಖರವೆಂದು ತಿಳಿದು ಭಾರತ ಸರ್ಕಾರವು ದೃಕ್ ಸಿದ್ಧಾಂತಕ್ಕಾಗಿ ಸಂಶೋ ಧನಾ ಕೇಂದ್ರವನ್ನು ರಾಷ್ಟ್ರೀಯ ಪಂಚಾಂಗವನ್ನು ರಚಿಸುತ್ತಿದೆ.

ವರಾಹ ಮಹಿರನ್ನು ತನ್ನ "ಪಂಚಸಿದ್ಧಾಂತಿಕ" ಗ್ರಂಥ ದಲ್ಲಿ 5 ಸಿದ್ಧಾಂತಗಳನ್ನು 1. ಸೂರ್ಯ 2. ವಶಿಷ್ಟ 3. ಪೌಲಿಶ 4. ರೋಮಕ 5. ಪಿತಾಮಹ ಸಿದ್ಧಾಂತಗಳನ್ನು ವಿವರಿಸಿದ್ದಾನೆ.

(ಸೂರ್ಯಸಿದ್ಧಾಂತ - ಅತಿಪ್ರಾಚೀನ ಭಾರತೀಯ ಸಿದ್ಧಾಂತ. ಇದನ್ನು ಸೂರ್ಯಾಂಶ ಪುರುಷ ಮಯಾಸುರನಿಗೆ ಉಪದೇಶ ಮಾಡಿದ ಸಿದ್ಧಾಂತ)

ಈ ವರಾಹ ಮಿಹಿರನ ಐದು ಸಿದ್ಧಾಂತಗಳಲ್ಲಿ ಸೂರ್ಯ ಸಿದ್ಧಾಂತವು ಬಹು ಖ್ಯಾತಿ ಪಡೆದಿತ್ತು, ಪ್ರಸಿದ್ಧವಾಗಿತ್ತು. ವರಾಹ ಮಿಹಿರನೇ ಹೇಳಿರುವಂತೆ ಸೂರ್ಯಸಿದ್ಧಾಂತವು ರೋಮಕ ಮತ್ತು ಪೌಲಿಶ ಸಿದ್ಧಾಂತಗಳಿಗಿಂತ ನಿಖರವಾಗಿತ್ತು, ಪಿತಾಮಹ ಮತ್ತು ವಶಿಷ್ಠ ಸಿದ್ಧಾಂತಗಳು ಅಷ್ಟು ನಿಖರತೆಯನ್ನು ಹೊಂದಿ ರಲಿಲ್ಲ. ಇವುಗಳನ್ನು 5 ನೇ ಶತಮಾನದಲ್ಲಿ ತಿಳಿಸಿರುತ್ತಾರೆ. ಸೂರ್ಯ ಸಿದ್ಧಾಂತವು ಅಂದಿನ ದಿನಗಳಲ್ಲಿ ನಿಖರವಾಗಿದ್ದಿರ ಬಹುದು. ಆದರೆ ಇಂದಿನ ಆಧುನಿಕತೆಯ ತಂತ್ರ ಜ್ಞಾನಗಳನ್ನು ಉಪಯೋಗಿಸಿ ದೃಕ್ ಸಿದ್ಧಾಂತವನ್ನು ಅತಿ ನಿಖರವೆಂದು ತಿಳಿದ ಮೇಲೆ ಸೂರ್ಯ ಸಿದ್ಧಾಂತವು ಇಂದಿನ ದಿನಗಳಲ್ಲಿ ನಿಖರತೆಯನ್ನು ಹೊಂದಿಲ್ಲವೆಂದು ಸ್ಪಷ್ಟವಾಗಿ ತೋರುತ್ತದೆ.



(ಮುಂದುವರಿಯುತ್ತದೆ)

**ವೃಕ್ಷೋ ರಕ್ಷತಿ ರಕ್ಷಿತಃ**

**ಗಿಡವೊಂದ ನೆಡುವವನು**
**ದೇವರಾ ಸೇವಕನು**
**ನೆನೆವರವನನು ಜನರು**
**ಅವನೆಂದು ನೋಡದರು**



**ಧಾರಾವಾಹಿ- 5**

# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

**ಹಿಂದಿನ ಸಂಚಿಕೆಯಿಂದ**

ರಾಮಾನುಜಾಚಾರ್ಯರ ಶಿಷ್ಯರಾಗಿದ್ದ ತಿರುಕ್ಕುರು ಗೈಪ್ಪಿರಾನ್ ಪಿಳ್ಳಾನ್ ಎನ್ನುವವರು ರಾಮಾನುಜರ ಕಾಲಕ್ಷೇಪದಿಂದ ಪ್ರಭಾವಿತರಾಗಿಯೋ ಇಲ್ಲ ರಾಮಾನುಜರ ಅನುಜ್ಞೆಯಂತೆಯೋ ಏನೋ ತಿರುವಾಯ್ಮೊಳಿಗೆ ವ್ಯಾಖ್ಯಾನ ಬರೆದು 'ಆರಾಯಿರಪ್ಪಡಿ' ಎಂದು ಅದನ್ನು ಕರೆದು ಆಚಾರ್ಯರಿಗೆ ಅರ್ಪಿಸಿ ಕೃತಾರ್ಥರಾದರಂತೆ! ಹೀಗೆಂದು ಶ್ರೀ ರಾಮಚಂದ್ರರಾಯರೇ ಒಮ್ಮೆ ಹೇಳಿದ್ದಾರೆ! ಇದಕ್ಕೆ 'ಭಗವದ್ವಿಷಯ'ವೆಂಬ ಹೆಸರನ್ನು ರಾಮಾನುಜರೇ ದಯಪಾಲಿಸಿದರೆಂದು ಅವರು ಹೇಳಿದ್ದಾರೆ. ಇದರ ಬಗ್ಗೆ ನಿಜಾಂಶವೇಷ್ಟೋ ತಿಳಿಯದು ಎನ್ನುತ್ತಾರೆ. ರಾಮಾನುಜರ ಕಾಲ ಕ್ರಿ.ಶ. ೧೦೧೭ - ೧೧೩೭. ಇವರು ೧೨೦ ವರ್ಷ ಬದುಕಿದ್ದರು. ಪಿಳ್ಳಾನ್ ಹುಟ್ಟಿದ್ದು ೧೦೬೨ ಎಂದರೆ ರಾಮಾನುಜರ ಅವತಾರ ಸಮಾಪ್ತವಾದಾಗ ಪಿಳ್ಳಾನ್‌ಗೆ 77 ವರುಷಗಳು ಎಂದರೆ ಪಿಳ್ಳಾನ್ ಅವರಿಗೂ ಅಪರ ವಯಸ್ಸಾಗಿತ್ತು. ಪಿಳ್ಳಾನ್ ರಾಮಾನುಜರಷ್ಟು ದೀರ್ಘಾಯುಷಿಗಳೋ ಇಲ್ಲವೋ ತಿಳಿಯುವುದಿಲ್ಲ. ಅಂತೂ 'ಆರಾಯಿರಪ್ಪಡಿ' ವ್ಯಾಖ್ಯಾನವು ಅವರ ಚಿಕ್ಕವಯಸ್ಸಿನಲ್ಲೇ ರಚಿಸಲ್ಪಟ್ಟಿರ ಬಹುದಾದ ಸಾಧ್ಯತೆ ಇದೆ. ಈ ರೀತಿಯಾಗಿ ರಾಮಾನುಜರಿಗೆ ಪಿಳ್ಳಾನ್ ಬರೆದ ವ್ಯಾಖ್ಯಾನದ ಅರಿವು ಇದ್ದಿತೆನ್ನುವುದು ಸ್ಪಷ್ಟವಾಗುತ್ತದೆ.

ಈ ಪಿಳ್ಳಾನ್ ಮೊಟ್ಟ ಮೊದಲಿಗೆ ತಮ್ಮ ವ್ಯಾಖ್ಯಾನದಲ್ಲಿ 'ಆಳ್ವಾರ್' ಎನ್ನುವ ಪದವನ್ನು ಬಳಕೆಗೆ ತಂದಿದ್ದಾರೆಂಬುದಾಗಿಯೂ ಈ 'ಆಳ್ವಾರ್' ಎನ್ನುವ ಪದಪರಿಚಯ ನಾಥಮುನಿಗಳಿಗಾಗಲೀ, ಯಾಮುನರಿಗಾಗಲೀ ಅಥವಾ ರಾಮಾನುಜರಿಗಾಗಲೀ ಇರಲಿಲ್ಲವೆಂಬುದಾಗಿಯೂ ಆಳ್ವಾರ್‌ಗಳನ್ನು ಆ ಹೆಸರಿನಿಂದ ಕರೆಯತೊಡಗಿದ್ದು ಪಿಳ್ಳಾನ್ ಕಾಲದ ನಂತರವೆಂದೂ ಅಭಿಪ್ರಾಯ ಪಡುತ್ತಾರೆ. ಶ್ರೀ ಎಸ್. ಕೆ. ರಾಮಚಂದ್ರರಾಯರು! ಇದಕ್ಕಾಗಿ ಅವರು ಪಿಳ್ಳಾನ್‌ರವರ ವಾಕ್ಯ. ಪ್ರಮಾಣವೊಂದನ್ನು ನಿರ್ದೇಶಿಸುತ್ತಾರೆ."ನಿಖಿಲ ಜಗದುದಯವಿಭವಾದಿಲೀಲ ನಾಯಿರುನ್ದ ಪರಮ ಪುರುಷನ್ನೈ ಉಳ್ಳಪಡಿಯೇ ಆಳ್ವಾರ್ ತಾಮ್ ತಮ್ಮು

**ರಾಮಾನುಜರ ಶಿಷ್ಯರು ಕೂರುತ್ತಾಳ್ವಾರ್ ಮತ್ತು ಆನಂದಾಳ್ವಾರ್. ರಾಮಾನುಜರು 'ಆಳ್ವಾನ್' ಎಂದೇ ಕೂರತ್ತಾಳ್ವಾರ್ ಅವರನ್ನು ವಾತ್ಸಲ್ಯದಿಂದ ಕರೆಯುತ್ತಿದ್ದರಂತೆ. 'ಆಳ್ವಾರ್' ಎಂದರೆ ನಮ್ಮಾಳ್ವಾರ್ ಅವರಿಗೇ ಮೀಸಲಾದಂತೆ 'ಆಳ್ವಾನ್' ಎಂಬ ಪದ ಕೂರತ್ತಾಳ್ವಾರ್ ಅವರಿಗೆ ರಾಮಾನುಜರಿಂದ ಅನ್ವಯಗೊಂಡಂತೆ ಇತಿಹಾಸದಿಂದ ತಿಳಿಯುತ್ತದೆ.**

ಡೈಯ ತಿರುವುಳ್ಳತ್ತಿಲೇ ಅನುಭವಿತ್ತು" ಎನ್ನುವುದು ಆ ವಾಕ್ಯ. ಆಳ್ವಾರ್ ಎಂದರೆ ದೇವರನ್ನು ಮನಸ್ಸಿನಲ್ಲಿ ಅಡಗಿಸಿಟ್ಟುಕೊಂಡು ಅದರಲ್ಲಿ ತಾವೇ ಆಳವಾಗಿ ಮುಳುಗಿ ಸಾಕ್ಷಾತ್ಕರಿಸಿಕೊಂಡು ಸುಖವನ್ನು ನಿರೂಪಿಸುತ್ತಾರೆ. ಇದರಿಂದ ಆಳ್ವಾರ್ ಎಂದರೆ ಭಕ್ತಿಯಲ್ಲಿ ಮುಳುಗಿದವರು ಎನ್ನುವ ಅರ್ಥ ನಮಗೆ ದೊರೆಯುತ್ತದೆ. ಶ್ರೀರಾಮಚಂದ್ರರಾಯರು ತಮ್ಮ ವಾದವನ್ನು ಮುಂದುವರೆಸುತ್ತಾರೆ. "ಇದೇ ಆಳ್ವಾರ್ ಎಂಬ ಮಾತಿನ ಮೊದಲ ಬಳಕೆ ಎಂದು ಕಾಣುತ್ತದೆ. ಇದು ನಮ್ಮಾಳ್ವಾರ್ ಎಂಬುವರನ್ನು ಕುರಿತ ಪ್ರಯೋಗ ಕಾಲಾನಂತರದಲ್ಲಿ ಇತರರಿಗೆ ಕೂಡಾ ಇದು ಸಂದಿತು. ಈಗ ಆಳ್ವಾರ್ ಎಂದು ಹೆಸರಾಗಿರುವವರೂ ತಮ್ಮನ್ನು ಆಳ್ವಾರ್ ಎಂದು ಕರೆದುಕೊಂಡಿಲ್ಲ. ಅವರೆಂದು ಸಿದ್ಧವಾಗಿರುವ ಬರಹಗಳಲ್ಲೂ ಆಳ್ವಾರ್ ಎಂಬ ಮಾತು ಬರುವುದಿಲ್ಲ" ತಿರುಕ್ಕುರುಗೈಪ್ಪಿರಾನ್ ಪಿಳ್ಳಾನ್ ಅವರು ರಾಮಾನುಜರ ಕಾಲದವರಾದ್ದರಿಂದ ರಾಮಾನುಜರಿಗೆ ಈ ಆಳ್ವಾರ್ ಪ್ರಯೋಗ ಹೊಸ ದೆಂಬುದಾಗಿ ತೋರುವುದಿಲ್ಲ. ತಿರುಕ್ಕುರುಗೈಪ್ಪಿರಾನ್ ಪಿಳ್ಳಾನ್ ಅವರಿಗೂ ರಾಮಾನುಜರೇ ಈ ಆಳ್ವಾರ್ ಎಂಬ ಪದವನ್ನು ಹೇಳಿರಬಹುದಾದ ಸಂಭವವೂ ಇರುತ್ತದೆ. 'ಆಳ್ವಾರ್' ಎಂದರೆ ನಮ್ಮಾಳ್ವಾರ್ ಅವರಿಗೇ ಆ ಪದ ಅನ್ವಯಿಸಿದರೂ ಅದು ಆಗಲೇ ಬೇರೆ ಆಳ್ವಾರ್‌ಗಳ ನಾಮಸೂಚಕವಾಗಿ ಬಳಸಲ್ಪಡುತ್ತಿದ್ದಿ ತೆನ್ನಲು ಈ ಕೆಳಗಿನ ಉದಾಹರಣೆಗಳು ಪೂರಕವಾಗುತ್ತದೆ. ಹಿಂದೆಯೇ ತಮಿಳು ಸಂಸ್ಕೃತಿಯಲ್ಲಿ ಸಂತ ಭಕ್ತರನ್ನು ಆಳ್ವಾರ್ ವಿಶೇಷಣದಿಂದ ಸಂಬೋಧಿಸಲಾಗುತ್ತಿತ್ತು. ಆಳ್ವಾನ್ ಎನ್ನುವುದು ಏಕವಚನ. ಆಳ್ವಾರ್ ಎನ್ನುವುದು ಬಹುವಚನ. ಅತಿ ಪ್ರೀತಿಯಾಗಿ ಸಂಬೋಧಿಸುವ ಪದ 'ಆಳ್ವಾನ್', ರಾಮಾಯಣದಲ್ಲಿರುವ ಭಕ್ತರನ್ನು ಬಹಳ ಹಿಂದಿನಿಂದಲೇ, 'ಭರತಾಳ್ವಾನ್' 'ಶತ್ರು ಘ್ನಾಳ್ವಾನ್' 'ವಿಭೀಷಣಾಳ್ವಾನ್' ಎಂದು ಗೌರವಿಸುವ ರೂಢಿ ಇದೆ. ನಿತ್ಯ ಸೂರಿಗಳಾದ ಗರುಡ, ಆದಿಶೇಷರನ್ನು ಗುರುಡಾಳ್ವಾನ್, ಆನಂದಾಳ್ವಾನ್ (ಅನಂತ) ಎಂದು ಸಂಬೋಧಿಸುತ್ತಿದ್ದರು. ತಮಿಳು ರಾಮಾಯಣ ಭಾರತಗಳನ್ನು ಬರೆದ ಕಂಬರ್ ಮತ್ತು ವಿಲ್ಲಿಪುತ್ತೂರಾನ್ ಇವರನ್ನು ಕಂಬನಾಟ್ಟಾಳ್ವಾನ್, ವಿಲ್ಲಿಪುತ್ತೂರಾಳ್ವಾನ್ ಎಂದೇ ಕರೆಯುತ್ತಿದ್ದರು. ಈ ಕವಿಗಳ ಕಾಲ ರಾಮಾನುಜರ ಕಾಲಕ್ಕಿಂತಲೂ ಹಿಂದಿನದು ಎನ್ನುವುದನ್ನು ಗಮನಿಸಬೇಕಾದದ್ದೆ, ಕಂಬರಾಮಾಯಣವನ್ನು ಆಚಾರ್ಯನಾಥಮುನಿಗಳು ಉದ್ಘಾಟನೆ ನಡೆಸಿದರೆಂದು ತಮಿಳು ಕವಿಚರಿತ್ರೆಯಿಂದ ತಿಳಿಯುತ್ತದೆ. "ಕಂಬನಾಟ್ಟಾಳ್ವಾನ್" ನಾಥಮುನಿಗಳಿಗೆ ಪರಿಚಿತವೆಂದಾಯಿತು. ಅವರೇ ಈ ತಮಿಳು ಸಂತಭಕ್ತರನ್ನು ಆಳ್ವಾರ್ ಎಂದು ಕರೆದಿರಬಹುದಾದ ಸಂಭವ ಈ ಉದಾಹರಣೆಯಿಂದ ತಿಳಿಯುತ್ತದೆ. ರಾಮಾನುಜರ ಶಿಷ್ಯರು ಕೂರುತ್ತಾಳ್ವಾರ್ ಮತ್ತು ಆನಂದಾಳ್ವಾರ್. ರಾಮಾನುಜರು 'ಆಳ್ವಾನ್' ಎಂದೇ ಕೂರತ್ತಾಳ್ವಾರ್ ಅವರನ್ನು ವಾತ್ಸಲ್ಯದಿಂದ ಕರೆಯುತ್ತಿದ್ದರಂತೆ. 'ಆಳ್ವಾರ್' ಎಂದರೆ ನಮ್ಮಾಳ್ವಾರ್ ಅವರಿಗೇ ಮೀಸಲಾದಂತೆ 'ಆಳ್ವಾನ್' ಎಂಬ ಪದ ಕೂರತ್ತಾಳ್ವಾರ್ ಅವರಿಗೆ ರಾಮಾನುಜರಿಂದ ಅನ್ವಯಗೊಂಡಂತೆ ಇತಿಹಾಸದಿಂದ ತಿಳಿಯುತ್ತದೆ. ಆಚಾರ್ಯ ರಾಮಾನುಜರ ಮತ್ತೊಂದು ನಾಮಧೇಯ 'ಇಳೆಯಾಳ್ವಾರ್' ಎಂಬುದಾಗಿ, 'ಇಳೆಯಾಳ್ವಾರ್' ಎಂದರೆ ಲಕ್ಷ್ಮಣನಿಗೆ ರಾಮಾಯಣದಲ್ಲಿ ಸಂಬೋಧನೆ. ರಾಮಾನುಜ ಎಂದರೆ ಲಕ್ಷ್ಮಣನೆಂದು ತಾನೇ ಅರ್ಥ. ಇದರಿಂದ ರಾಮಾನುಜರನ್ನು ಆಗಲೇ ಇಳೆಯಾಳ್ವಾರ್ ಎಂಬ ಹೆಸರಿನಿಂದ ಕರೆಯುತ್ತಿದ್ದರು.

ಹೀಗೆ 'ಆಳ್ವಾರ್' ತಮಿಳು ಸಂಸ್ಕೃತಿಯಲ್ಲಿ ಪ್ರಾಚೀನವಾಗಿಯೇ ಬಳಕೆಯಲ್ಲಿದ್ದ ಪದ. ಪಿಳ್ಳಾನ್ ಕಾಲಕ್ಕೆ ಹೊಸದಾಗಿ ಬಂದ ಪದವಲ್ಲ. ಪಿಳ್ಳಾನ್ ವ್ಯಾಖ್ಯಾನವನ್ನು ಮೊದಲಿಗೆ ಲಿಪಿಯಲ್ಲಿ ಆರಂಭಿಸಿದ್ದರಿಂದ ಈ ಆಳ್ವಾರ್ ಎನ್ನುವ ಪದ ಮೊದಲಿಗೆ ಅದರಲ್ಲಿ ಕಂಡು ಬಂದಿದೆ. ಅಷ್ಟೇ. ಆದ್ದರಿಂದ ತಮಿಳುನಾಡಿನ ಸಂತರನ್ನು ಬಹಳ ಹಿಂದಿನಿಂದಲೇ ಆಳ್ವಾರ್ ಎಂದು ಆದರಿಸುತ್ತಿದ್ದರು ಎಂಬುವುದು ನಿರೂಪಿತಗೊಳ್ಳುತ್ತದೆ.

(ಮುಂದುವರಿಯುತ್ತದೆ)



# ತಿರುಮಲೆ ಕಾಲಮಾನಾಚರಣೆಗಳು

- ಮೂಲ. ಡಾ॥ ಎನ್. ನರಸಿಂಹಾಚಾರ್ಯ
- ಅನುವಾದ:ಶ್ರೀಮತಿ

ಧಾರಾವಾಹಿ - 5

(ಹಿಂದಿನ ಸಂಚಿಕೆಯಿಂದ)

ಎಂದು ಬ್ರಹ್ಮಪುರಾಣದ ಅಷ್ಟಮಾಧ್ಯಾದಲ್ಲಿರುವಂತೆ ಶ್ರೀವೇಂಕಟಾಚಲಪತಿಗಿಂತಲೂ ಮುಂಚೆಯೇ ತ್ರಿಸಂಧ್ಯಕಾಲದಲ್ಲಿ ಜ್ಞಾನವರಾಹ ಸ್ವಾಮಿಗೆ ಆರಾಧನೆ ನೈವೇದ್ಯಗಳು ಜರುಗುವಂತೆಯೇ ಅಲ್ಲಿರುವ ಉತ್ಸವ ಮೂರ್ತಿಗೆ ಸಹಾ ಪ್ರತಿಷ್ಠಾಪನೆಯನ್ನು ಮಾಡಿ ಆರಾಧನೆಯನ್ನು ಮಾಡುವಂತೆ ಆಚರಣೆ ಮಾಡಲಾಯಿತು. ಅಧ್ಯಯನೋತ್ಸವವನ್ನು ಮಾತ್ರ ಒಂದೇ ದಿನದಂದು ಆಚರಿಸಲಾಯಿತು.

"ಶ್ರೀವೇಂಕಟವರಾಹಾಯ ಸ್ವಾಮಿ ಪುಷ್ಕರಿಣಿ ತಟೇ
ಶ್ರವಣ್ಯೇ ತುಲಾ ಮಾಸೇ ಪ್ರಾದೂರ್ಭೂತಾತ್ಮನೇ ನಮಃ

(ಸ್ವಾಮಿ ಪುಷ್ಕರಿಣಿ ತೀರದಲ್ಲಿ ತುಲಾಮಾಸದ ಶ್ರವಣ ನಕ್ಷತ್ರದಂದು ಅವಿರ್ಭೂತನಾದ ಶ್ರೀವೇಂಕಟವರಾಹನಿಗೆ ನಮಸ್ಕಾರವು)

ಹಾಗೆಯೇ ಆತನ ಜನ್ಮ ನಕ್ಷತ್ರವಾದ ತುಲಾಮಾಸದ ಶ್ರವಣ ನಕ್ಷತ್ರದಂದು ಶ್ರೀವರಾಹಜಯಂತಿಯಂದು ವಿಶೇಷವಾಗಿ ಕೊಂಡಾಡುವುದು.

"ನಿತ್ಯ ಬಿಲೇನ ಚಾಗತ್ಸದೇವಂ ನತ್ವಾ ನೃಪೋತ್ತಮಃ
ರಾಜ್ಯಂ ಚಕಾರ ಧರ್ಮೇಣ ಭುಂಜಾನೋ ಭೋಗಮುತ್ತಮಂ"

(ಆ ರಾಜಶೇಖರನು ಪ್ರತೀದಿನ ಬಿಲಮಾರ್ಗದಿಂದ ಬಂದು, ದೇವನಿಗೆ ನಮಸ್ಕರಿಸಿ ಉತ್ತಮ ಭೋಗಗಳನ್ನನುಭವಿಸುತ್ತಾ ಧರ್ಮದಿಂದ ರಾಜ್ಯಭಾರ ಮಾಡಿದನು)

ಎಂದು ಭೂಗೋಳ ವರಾಹದಲ್ಲಿರುವ ಹತ್ತನೇ ಅಧ್ಯಾಯವು ಹೇಳಿದೆ ಎಂದು ಹೇಳಲು ತೊಂಡಮಾನ ಚಕ್ರವರ್ತಿ ಕಲಿಯುಗಾರಂಭದಲ್ಲಿ ಶ್ರೀವೇಂಕಟೇಶ್ವರನ ಪಾದಾರ ವಿಂದಗಳ ಮೇಲೆ ಬಿದ್ದು ಪರಿಪೂರ್ಣ ಭಕ್ತಿ ಹೊಂದಿದವನಾಗಿ ಭಗವದನು ಗ್ರಹದಿಂದ ರಾಜ್ಯವನ್ನು ಧರ್ಮಮಾರ್ಗದಿಂದ ಪರಿಪಾಲಿಸುತ್ತಾ ಸಕಲ ಭೋಗಗಳನ್ನು ಅನುಭವಿ ಸುತ್ತಾ, ಪ್ರತಿದಿನ ತನ್ನ ರಾಜಭವನಕ್ಕೆ ಮತ್ತು ತಿರುಮಲೆಗೆ ಹೋಗಿ ಬರಲು ಒಂದು ಬಿಲಮಾರ್ಗ ವನ್ನು ಸ್ವಾಮಿಯು ತೋರಿಸಲು ಅಂದಿನಿಂದ ಪ್ರತಿನಿತ್ಯ ಸ್ವಾಮಿ ಸನ್ನಿಧಿಗೆ ಹೋಗಿ ಸೇವಿಸಿ ಬರುತ್ತಿದ್ದನು. ಹೀಗಿರಲು

"ಸ್ಥಿತೇ ಕದಾಚಿತ್ತಿತೇ ಶ್ರೀನಿವಾಸಸ್ಯ ಸನ್ನಿಧೌ,
ಶತ್ರುವಶ್ಯ ಬಲೋದ್ರಿಕ್ತಾ ರುರುಧಸ್ತಸ್ಯವೇ ಪುರೀಂ"



ನ ದುಷ್ಯತ್ಯ ನಿಲೋ ನಾಗ್ನಿಃ ನ ಸುವರ್ಣಂ ನ ಚೋದಧಿಃ ।
ನಾಮೃತೇನಾ ಮೃತಂ ಪೀತಂ ವತ್ಸಪೀತಾನ ವತ್ಸಲಾ ॥

(ಮಹಾಭಾರತ)

**ಯಾವ ರೀತಿಯಲ್ಲಿ ವಾಯು, ಅಗ್ನಿ, ಸುವರ್ಣ, ಸಮುದ್ರ, ದೇವತೆಗಳಿಂದ ಕುಡಿಯಲ್ಪಟ್ಟ ಅಮೃತ - ಇವುಗಳು ಉಚ್ಚಿಷ್ಟವೆನಿಸಿ ಕೊಳ್ಳುವುದಿಲ್ಲವೋ ಅದೇ ರೀತಿಯಲ್ಲಿ ಕರುವಿಗೆ ಹಾಲುಣಿಸಿದ ಹಸುವಾಗಲೀ - ಕರುವಿನ ಬಾಯಿಯಿಂದ ಹೊರಬಂದ ನೊರೆಯಾಗಲೀ ಉಚ್ಚಿಷ್ಟಗಳಾಗುವುದಿಲ್ಲ.**

(ಆ ಪ್ರಭುವು ಶ್ರೀನಿವಾಸನ ಸನ್ನಿಧಿಯಲ್ಲಿರಲು, ಒಂದು ಬಾರಿ ಬಲಶಾಲಿ ಶತ್ರುಗಳು ಆತನ ಪಟ್ಟಣಕ್ಕೆ ಮುತ್ತಿಗೆ ಹಾಕಿದ್ದಾರೆ)

ಎಂದು ಬ್ರಹ್ಮಪುರಾಣವು ವರ್ಣಿಸಿದಂತೆ ಸಾಮಂತ ರಾಜನಾದ ಆತನು ಸೋಲಿಸಿ ಒಂದು ಪಟ್ಟಣಕ್ಕೆ ಮುತ್ತಿಗೆ ಹಾಕಿದ್ದಾನೆ. ಆಗ ಚಕ್ರವರ್ತಿಯು ಅವರಿಗೆ ಎದುರಾಗಿ ನಿಂತು ಹೋರಾಡಲು ಪರಸ್ಪರ ಘೋರಯುದ್ಧ ನಡೆಯಿತು. ಚಕ್ರವರ್ತಿಯ ಬಲ ಕ್ಷೀಣಿಸಲು ಪರಾಜಿತನಾದ ಚಕ್ರವರ್ತಿ ಸ್ವದೇಶಕ್ಕೆ ಪಲಾಯನ ಮಾಡಿ ಬಂದು ಶ್ರೀನಿವಾಸನ ಚರಣಾರವಿಂದದ ಮೇಲೆ ಭಕ್ತಿಯಿಂದ

"ಶ್ರೀನೃಸಿಂಹ ನಮಸ್ಕೃತ್ಯ ಪುನಃ ಪ್ರಾಪ್ಯ ಬಿಲೋತ್ತಮಂ
ಶ್ರೀನಿವಾಸಂ ಯಯೇ ದ್ರಷ್ಟುಂ ಶ್ರೀ ಭೂಮಿ ಸಹಿತಂ ನೃಪಃ"
ತಂ ದೃಷ್ಟ್ವಾ ಸಹಸಯಾಂತಂ ಜುಗೊಹತೇ ಧರಾರಮೇ
ಪ್ರಣಮಂತ ಮವ್ರೋಚತ್ತಂಕಿ ಮಕಾಲೇ ನೃಪಾಗತಃ

(ರಾಜನು ಶ್ರೀ ನೃಸಿಂಹನಿಗೆ ಪ್ರಣಮಿಸುತ್ತಾ ಮರೆಸುತ್ತಾ ಓಡಿ ಹೋಗಿ ಶ್ರೀಭೂದೇವಿಯರೊಂದಿಗೆ ಕೂಡಿರುವ ಶ್ರೀನಿವಾಸನನ್ನು ಕಾಣಲು ಮುಂದಾಗಿದ್ದಾನೆ. ಹಠಾತ್ತಾಗಿ ಹಾಜರಾದ ಆತನನ್ನು ನೋಡಿ ಶ್ರೀದೇವಿ ಭೂದೇವಿಯರು ಅಡಗಿಕೊಂಡಿದ್ದಾರೆ. (ಸ್ವಾಮಿ) " ಏನೃಪನೇ ಅಕಾಲ ಪ್ರತ್ಯಕ್ಷವಾದುದೇತಕ್ಕೆ?" - ಎಂದು ನಮಸ್ಕರಿಸುತ್ತಿರುವ ಆತನೊಡನೆಂದನು)

ಎಂದು ಭೂಗೋಳ ವರಾಹದಲ್ಲಿರುವ ದಶಮೋಧ್ಯಾಯದಲ್ಲಿರುವಂತೆ ಬಿಲದ್ವಾರವನ್ನು ಪ್ರವೇಶಿಸಿ ಅಕಾಲದಲ್ಲಿ ಬಂದು ನಿಲ್ಲಲು, ಆಗ ಏಕಾಂತದಲ್ಲಿ ಸೇವಾನಿರತರಾದ ಶ್ರೀ ಭೂದೇವಿಯರು ಅದೃಶ್ಯರಾದರು. ಅಂತಃಪುರಕ್ಕೆ ಪರಮ - ಪುರುಷನು ಬಂದಿದ್ದಾನೆಂದು ಸಂಕೋಚಿಸಿ ಶ್ರೀದೇವಿ ತನಗೆ ನಿತ್ಯ ಆವಾಸ ಸ್ಥಾನವಾದ ಶ್ರೀನಿವಾಸನ ದಿವ್ಯ ವಕ್ಷಃಸ್ಥಳವನ್ನು ಪ್ರವೇಶಿಸಿದ್ದಾಳೆ. ಭೂದೇವಿ ಹೊರಟು ಹಿಂದೆ ರಂಗದಾಸನು ಶ್ರೀನಂದನ ವನದ ಕೆಲಸಕಾರ್ಯಗಳಿಗಾಗಿ ತೋಡಿಸಿದ ಬಾವಿಯಲ್ಲಿ ಧುಮುಕಿದ್ದಾಳೆ. ಈ ಕಥೆಯ ಆ ಸ್ಥಳದಲ್ಲಿ ಪಂಡಿತ ಗಣ್ಯರು ಸರ್ವ ಸಂಪ್ರತಿ ಸಂಪನ್ನರಾದ ಆ ಭೂದೇವಿ ಅರ್ಚಾ (ವಿಗ್ರಹ) ರೂಪದಲ್ಲಿ ಪ್ರತಿಷ್ಠಾಪಿಸಿ ದೇವಿಗೆ ಸಮೀಪದಲ್ಲಿ ಇವರಿಬ್ಬರನ್ನೂ ಜೊತೆಯಲ್ಲಿ ಮೆರವಣಿಗೆ ಮಾಡಿ ಅವರಿಗೆ ಪ್ರತಿದಿನ ಪ್ರಸಾದವನ್ನು ಅರ್ಪಿಸುವಂತೆ ಏರ್ಪಡಿಸಿದ್ದಾರೆ.

ಶ್ರೀಯಮುನಾಚಾರ್ಯರು (ಅಳವಂದಾರ್) ಒಂದು ವಿಶೇಷ ಸಮಯದಲ್ಲಿ ತಿರುಮಲೆಗೆ ಯಾತ್ರೆ ಯೇಸುಗೆ ಸ್ವಾಮಿಗೆ ಮಂಗಳಶಾಸನ ಮಾಡಿದ ಸಂದರ್ಭದಲ್ಲಿ ಒಂದು ದಿನ ಪ್ರಾತಃ ಕಾಲದಲ್ಲಿ ಸುಂದರಸ್ವಾಮಿ (ಅಳಗಪ್ಪಿರಾನಾರ್) ಪೂಜೆಗಾಗಿ ಉಪಯೋಗಿಸಲೆಂದು ತಿರುಮಲೆ ಪಾಪವಿನಾಶಿನಿ ತೀರ್ಥದಿಂದ ಸ್ನಾನಕ್ಕಾಗಿ ನೀರನ್ನು ತರುವ ಅಭ್ಯಾಸವಿದ್ದು, ಮಳೆಯ ಕಾರಣದಿಂದ ತರಲಾರದೇ ಹೋಗಿದ್ದಾರೆ. ಆಗ ಯಮುನಾಚಾರ್ಯರು ರಂಗದಾಸನು (ನಿರ್ಮಿತವಾದ) ಕೆಲಸಗಳಿಗಾಗಿ ತೋಡಿಸಿದ ಬಾವಿಯಿಂದ ತೀರ್ಥವನ್ನು ತಂದು ಸಮರ್ಪಿಸಿ ತಿರುಮಂಜನವನ್ನು (ಅಭಿಷೇಕವನ್ನು) ಜರುಗಿಸುವಂತೆ ಏರ್ಪಡಿಸಿ ಆ ಬಾವಿಗೆ "ಸುಂದರಸ್ವಾಮಿ' (ಅಳಗಪ್ಪಿನಾರಾರ್) ಎಂದು ಹೆಸರು ಇಟ್ಟಿದ್ದಾರೆ. ಈ ಕಥೆ ಸ್ಥಾನಿಕವಾಗಿ ಬಹು ಪ್ರಸಿದ್ಧ ಹೊಂದಿ ಇದನ್ನು ಭಗವದ್ರಾಮಾನುಜಚಾರ್ಯರು ಕೇಳಿ ಸಾಮಾನ್ಯರೆಲ್ಲರಿಗೂ ಇದನ್ನು "ಸುಂದರಸ್ವಾಮಿ" ಯೆಂದೇ ಕರೆಯಬೇಕೆಂದು ಕಟ್ಟಳೆ ಹಾಕಿದ್ದಾರೆ.

**(ಮುಂದುವರಿಯುತ್ತದೆ)**



ನೀತಿ ಕಥೆ

# ಅನುಭವ ಕಲಿಸಿದ ಪಾಠ

-ಶ್ರೀಮತಿ. ಸುಧಾ ಮಧುಸೂದನ್



ಒಂದು ಊರಿನಲ್ಲಿ ಒಬ್ಬ ವ್ಯಕ್ತಿಯು ತನ್ನ ಹಂದಿಯೊಂದಿಗೆ ನದಿ ದಾಟಬೇಕಾಯಿತು. ಅವನು ಹಂದಿಯೊಂದಿಗೆ ದೋಣಿಯಲ್ಲಿ ಸಹ ಪ್ರಯಾಣಿಕರೊಂದಿಗೆ ಪ್ರಯಾಣ ಬೆಳೆಸಿದನು. ಆ ದೋಣಿಯಲ್ಲಿ ಒಬ್ಬ ಪಂಡಿತನು ಇದ್ದನು.

ಯಾವತ್ತೂ ದೋಣಿಯಲ್ಲಿ ಪ್ರಯಾಣಿಸದ ಹಂದಿಯೂ ಮಾತ್ರ ದೋಣಿಯಲ್ಲಿ ಕುಳಿತುಕೊಳ್ಳದೆ ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ ಓಡಾಡುತ್ತಿತ್ತು. ಎಷ್ಟು ಹೇಳಿದರೂ ಆ ಹಂದಿಯು ಕೇಳಲಿಲ್ಲ. ಇದನ್ನು ಕಂಡ ನಾವಿಕನು ಆ ಮನುಷ್ಯನಿಗೆ " ಅಯ್ಯಾ ನಿನ್ನ ಹಂದಿಗೊಂದು ಕಡೆ ಕುಳಿತುಕೊಳ್ಳವಂತೆ ಮಾಡು, ಇಲ್ಲದಿದ್ದರೆ ಉಳಿದ ಪ್ರಯಾಣಿಕರಿಗೆ ಅಪಾಯ ದೋಣಿ ಮುಳುಗುವ ಸಾಧ್ಯತೆ ಇದೆ"ಎಂದನು. ಎಷ್ಟು ಕಷ್ಟ ಪಟ್ಟರು ಹಂದಿಯು ಓಡಾಡುವುದು ನಿಲ್ಲಿಸಲ್ಲಿಲ್ಲ.

ಆಗ ಪಂಡಿತನು ಹಂದಿಯ ಮಾಲೀಕನಿಗೆ ಹೇಳಿದನು. "ನೀನು ಒಪ್ಪಿದರೆ ನಾನು ಅದನ್ನು ಸಮಾಧಾನ ಮಾಡಬಲ್ಲೆ" ಅದಕ್ಕೆ ಹಂದಿಯ ಮಾಲೀಕ ಒಪ್ಪಿದನು. ಪಂಡಿತನು ಕೂಡಲೆ ಹಂದಿಯನ್ನು ನದಿಗೆ ಎಸೆದು ಬಿಟ್ಟನು. ಹಂದಿಗೋ ತುಂಬಾ ಗಾಭರಿಯಾಯಿತು. ಅದು ಕಷ್ಟ ಪಟ್ಟು ಈಜಿ ಈಜಿ ದೋಣಿಯ ಕಡೆ ಬರಲಾರಂಭಿಸಿತು. ಯಾರಾದರು ನನ್ನ ಕಾಪಾಡಿ ಅನ್ನೋ ದೈನ್ಯತೇಯಿಂದ ನೋಡುತಿತ್ತು.

ಸ್ವಲ್ಪ ದೂರ ಬಂದ ಮೇಲೆ ಪಂಡಿತನು ಹಂದಿಯನ್ನು ನೀರಿನಿಂದ ಮೇಲೆ ಎತ್ತಿ ದೋಣಿಯಲ್ಲಿ ಕುಳ್ಳಿರಿಸಿದನು.

ಹಂದಿಯು ಯಾವ ಶಬ್ದವನ್ನು ಮಾಡದೆ ದೋಣಿಯ ಮೂಲೆಯಲ್ಲಿ ಕುಳಿತುಕೊಂಡಿತು. ದೋಣಿಯ ಪ್ರಯಾಣಿಕರೆಲ್ಲರಿಗೂ ಆಶ್ಚರ್ಯವಾಯಿತು. ನಾವಿಕನು ನೆಮ್ಮದಿಯಿಂದ ದೋಣಿಯನ್ನು ಓಡಿಸಿದನು.

ಪ್ರಯಾಣಿಕರಲ್ಲಿ ಒಬ್ಬನು ಪಂಡಿತನನ್ನು ಕೇಳಿದನು. ಹಂದಿ ಯಾಕೆ ಸುಮ್ಮನಾಯಿತು ಎಂದು. ಪಂಡಿತನು ಈ ರೀತಿ ಹೇಳಿದನು.

"ಎಲ್ಲಿಯವರೆಗೆ ತಮಗೆ ಸಿಕ್ಕಿರುವ ಸ್ವಾತಂತ್ರ್ಯದ ಬಗ್ಗೆ ಅರಿವಿಲ್ಲವೋ ಅಲ್ಲಿಯವರೆಗೆ ನಮಗೆ ನಾನು ಇರುವ ಜಾಗ, ಮನೆ, ದೇಶದ ಬಗ್ಗೆ ಹಿರಿಮೆ ಅರಿವಿರುವುದಿಲ್ಲ, ಹಾಗೆ ಹಂದಿ ನೀರಿಗೆ ಬಿದ್ದ ಮೇಲೆ ದೋಣಿಯ ಮಹತ್ವ ತಿಳಿಯಿತು. ನೀರಿನಲ್ಲಿದ್ದಾಗ ಅದಕ್ಕೆ ದೋಣಿ ಎಷ್ಟು ಸುರಕ್ಷಿತವಾದ ಸ್ಥಳ ಎಂದು ಅರಿವಿಗೆ ಬಂದು, ಇನ್ನು ಈ ಮಹತ್ವವಾದ ಸ್ಥಳವನ್ನು ಕಳೆದುಕೊಳ್ಳಬಾರದು ಎಂದು ತಾನು ಗಂಭೀರವಾಗಿ ಕುಳಿತಿತ್ತು.

ಮಕ್ಕಳೇ ಹೀಗೇ ನಾವು ಸಹ ನಮ್ಮ ಭಾರತ, ನಮ್ಮ ಪರಿಸರ ನಮ್ಮ ಸ್ಥಳದ ಮಹತ್ವ ತಿಳಿದು ಅದನ್ನು ಕಾಪಾಡಿಕೊಳ್ಳೋಣ ಅಲ್ಲವೇ?


॥ಹರೇ ಕೃಷ್ಣ॥


ಚಿತ್ರಕಥೆ

# ವೆಂಗಮಾಂಬ ಭಕ್ತಿ

ಕಥೆ: ತೆಲುಗು ಮೂಲ: ಡಾ|| ಕೆ. ರವಿಚಂದ್ರನ್
ಅನುವಾದ: ಶ್ರೀಮತಿ
ಚಿತ್ರಗಳು: ಕೆ.ತುಲಸೀ ಪ್ರಸಾದ್

ರಾಜ ಬೀದಿಯಲ್ಲಿ ಭಕ್ತರ ಕೋಲಾಹಲ ಗೋವಿಂದಾ! ಗೋವಿಂದಾ!






ಲೋಕಾಃ ಸಮಸ್ತಾಃ ಸುಖಿನೋ ಭವಂತು!

**ಸಮಾಪ್ತಿ**

**ರಸಪ್ರಶ್ನೆಗಳು :**

# ಕ್ವಿಜ್

ಅ) ಶಂಖಚೂಡನನ್ನು ಕೊಂದಿದ್ದು ಯಾರು?

1. ಕೃಷ್ಣ  2. ರಾಮ

3. ಬಲರಾಮ  4. ವಾಸುದೇವ

ಆ) ಶಿವನಿಗೆ ಪ್ರೀತಿಕರವಾದ ಯಾಗ ಯಾವುದು?

1. ತ್ರಿಶೂಲ ಯಾಗ  2. ಧನುರ್ಯಾಗ

3. ಅಶ್ವಮೇಧ ಯಾಗ  4. ಕಮಲಯಾಗ

ಇ) ಕುಂವಲಯಾ ಪೀಡ ಎಂಬ ಮದಗಜವನ್ನು ಸಂಹಾರಿಸಿದ್ದು ಯಾರು?

1. ರಾಮ  2. ರಾವಣ

3. ಕೃಷ್ಣ  4. ಶಿಶುಪಾಲ

ಈ) ದ್ವಾರಕಾ ನಗರವನ್ನು ನಿರ್ಮಿಸಿದವರು ಯಾರು?

1. ವಿಶ್ವಕ್ಸೇನ  2. ವಿಶ್ವಕರ್ಮ

3. ಮಯ  4. ರಾಮ

ಉ) ಬಲರಾಮನ ಕುಮಾರ ಯಾರು?

1. ಪ್ರದ್ಯುಮ್ನ  2. ಅನಿರುದ್ಧ

3. ಸಾಂಬ  4. ಮನ್ಮಥ

ಊ) ಬ್ರಹ್ಮ ದೇವನ ಲೋಕ ಯಾವುದು?

1. ವೈಕುಂಠ  2. ಸತ್ಯಲೋಕ

3. ಮರ್ತ್ಯಲೋಕ  4. ಸ್ವರ್ಗಲೋಕ

ಋ) ಬ್ರಹ್ಮದೇವನ ಕಣ್ಣಿನಿಂದ ಜನಿಸಿದವರು ಯಾರು?

1. ಗೌತಮ  2. ಅತ್ರಿ


3. ಕಶ್ಯಪ  4. ಭಾರದ್ವಾಜ

ಉತ್ತರಗಳು:

ಅ) 1 ಆ) 2 ಇ) 3 ಈ) 2 ಉ) 3 ಊ) 2 ಋ) 2

## ಚಿತ್ರಲೇಖನ

**ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......**



**ಪಕ್ಕದಲ್ಲಿರುವ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...**



Printed by Sri P. Ramaraju, M.A., Special Officer (Press & Publications), T.T.D. Press, Tirupati and Published by Dr. K. Radharamana, M.A., M.Phil., Ph.D. on behalf of Tirumala Tirupati Devasthanams and Published at Tirupati - 517 507. Editor : Dr. V. G. Chokkalingam, M.A., Ph.D.


SIVAPRASAD
ಸರ್ವಪಾಪಹರಂ ದೇವಯೇನ ವಿದ್ಯಾ ಪ್ರವರ್ತತೇ ।
ಕೇನ ವಾ ಬ್ರಹ್ಮ ವಿಜ್ಞಾನಂ ಕಿಂನು ವಾ ಮೋಕ್ಷಸಾಧನಂ ॥

SAPTHAGIRI (KANNADA) ILLUSTRATED MONTHLY
Published by Tirumala Tirupati Devasthanams
Printing on 20-08-2021

ವಿಶುದ್ಧ ವಿಜ್ಞಾನ ಘನ ಸ್ವರೂಪಂ
ವಿಜ್ಞಾನ ವಿಶ್ರಾಣನ ಬದ್ಧ ದೀಕ್ಷಮ್,
ದಯಾನಿಧಿಂ ದೇಹಾಭೃತಾಂ ಶರಣ್ಯಂ
ದೇವಂ ಹಯಗ್ರೀವ ಮಹಾಂ ಪ್ರಪದ್ಯೇ॥

